ಕಲ್ಯಾಣ ಕಿರಣ

ಜುಲೈ ೨೦೦೦

ಬೆಲೆ : ೫-೦೦





ಭಕ್ತಿ ಪಕ್ಷ ಸಮ್ಮೇಳನದ ಉದ್ಘಾಟನಾ ಸಮಾರಂಭ :
ಉದ್ಘಾಟಕರಾದ ಮೈಸೂರಿನ ಶಾಸಕ ಎ.ಎಸ್.ಗುರುಸ್ವಾಮಿ ಇವರಿಂದ ಭಾಷಣ.
ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶರಣ ತಮ್ಮಯ್ಯ ಮತ್ತು ಶರಣ ಕೆ.ಎಂ. ಶಿವಶಂಕರ್



ಶಾಸಕ ಎ.ಎಸ್.ಗುರುಸ್ವಾಮಿಯವರಿಂದ
ಕೊಪಳದ ಶರಣರಾದ [illegible]

★ ಕಲ್ಯಾಣ ಕಿರಣ ★

ಸಂಪುಟ ೩೧ ಬಸವ ಶಕೆ ೮೬೭ ಆಜೀವ ಸದಸ್ಯತ್ವ ೫೦೦ ರೂ

ಸಂಚಿಕೆ ೭ ಜುಲೈ-೨೦೦೦ ವಾರ್ಷಿಕ ಚಂದಾ ೫೦/- ರೂ

ಬಸವ ಪೂಜೆಯ ಮಾಡುವಾ

ಬಸವ ಪೂಜೆಯ ಮಾಡುವಾ । ಶರಣರೆ
ಬಸವ ಪೂಜೆಯ ಮಾಡುವಾ ॥ ಪಲ್ಲವಿ ॥

ಮರ್ತ್ಯದ ಮಣಿಹ ಮುಗಿಸಿ ಕರ್ತನ ಕರೆ ಪಡೆದು
ಇಚ್ಛಾಮರಣದಿ ಪರಮನ ಬೆರೆದಂಥ ॥ ಅನು ಪಲ್ಲವಿ ॥

ಕೂಡಲ ಸಂಗಮದ ಸುಕ್ಷೇತ್ರದಲ್ಲಿ
ನಳನಾಮ ಸಂವತ್ಸರದೋಳ್
ಶ್ರಾವಣಶುದ್ಧ ಪಂಚಮಿಯಂದು ಪರಮಾತ್ಮನ ಆಣತಿ ಪಡೆದು
ಉರಿಯುಂಡ ಕರ್ಪುರದೊಲ್ ದೇವನಲಿ ಬಯಲಾದ ॥ ೧॥

ಭಕ್ತಿಯ ಭೂಮಿಯೊಳು ಬೆಳೆದಂಥ
ಅರಿವಿನ ಮಾಮರದೊಳ್
ಸೃಷ್ಟಿಗೊಡೆಯ ಲಿಂಗದೇವನ ದಿವ್ಯ ಕಾರುಣ್ಯವನು ಪಡೆದು
ನಿಷ್ಪತ್ತಿ ಹಣ್ಣಾಗಿ ಅವನೊಡನೆ ಬೆರೆದಿಹ ॥ ೨॥

ಇಷ್ಟಲಿಂಗವ ತಾನಿತ್ತ ಪರಮಗುರು
ಶ್ರೇಷ್ಠಪಥ ದರ್ಶಕನು
ಲಿಂಗವಂತ ಧರ್ಮ ನೀಡ್ದ ಮಂಗಳಾಂಗ ಮಂತ್ರಪುರುಷ
ಅಂಗಮನದ ಗುಣಗಳಳಿದು ಸರ್ವಾಂಗಲಿಂಗಿಯಾದ ॥ ೩॥

ಶ್ರೀ ಗುರು ಬಸವಂಗೆ ಶರಣಾಗುತ್ತ
ಲಿಂಗದೇವನ ನಂಬಿ
ಶರಣ ಗಣಕ್ಕೆ ಶರಣಾಗಿ ಕರುಣ ಪ್ರಸಾದ ಪಡೆದು
ಗಣ ಪದವಿಯ ಹೊಂದಿ ಹಿಗ್ಗಿ ನಲಿದಾಡಲು ॥ ೪॥

ಭೃಂಗ ಕುಸುಮದ ಮಧುವ ಹೀರುವ ತೆರದಿ
ಲಿಂಗದ ಆನಂದವ
ಅಂಗಮನ ಕರಣಾದಿ ಗುಣಗಳ ಲಿಂಗಭಾವದಿ ನಾಶ ಮಾಡಿ
ಲಿಂಗದೇವ ಶ್ರೀ ಸಚ್ಚಿದಾನಂದನ ಬೆರೆದಂಥ ॥ ೫॥

-ಮಾತಾಜಿ

ವಿ.ಸೂ : "ಪಾದಪೂಜೆಯ ಮಾಡಿರಿ" ಎಂಬ ದಾಟಿಯಲ್ಲೇ ಇದನ್ನು ಹಾಡಬಹುದು.

ಕಲ್ಯಾಣ ಕಿರಣ ಅಕ್ಷರ ಜೋಡಣೆ : ರಮೇಶ್ ಲಿಂಗಾಯತ

★ ಕಲ್ಯಾಣ ಕಿರಣ ★

ಸಂಪುಟ ೩೧	ಬಸವ ಶಕೆ ೮೬೭	ಆಜೀವ ಸದಸ್ಯತ್ವ ೫೦೦ ರೂ
ಸಂಚಿಕೆ ೭	ಜುಲೈ-೨೦೦೦	ವಾರ್ಷಿಕ ಚಂದಾ ೫೦ ರೂ

ಲೇಖನಗಳು ಕಿರಣಗನ್ನಡಿ

ವಿಶ್ವಗುರು ಬಸವಣ್ಣನವರು ಲಿಂಗೈಕ್ಯರಾದ ಬಸವ ಪಂಚಮಿಯು
ದಿ.೫-೮-೨೦೦೦ದಂದು ಒದಗಿ ಬಂದಿದ್ದು, ೮೦೫ನೆಯ ಬಸವ ಪಂಚಮಿಯ ನಿಮಿತ್ತ
ಕಲ್ಯಾಣ ಕಿರಣದ ಓದುಗರೆಲ್ಲರಿಗೂ ಶುಭಹಾರೈಕೆಗಳು



ನಿನ್ನ ಆಕಾರ ನಿರಾಕಾರವಾಯಿತಲ್ಲಾ ಬಸವಣ್ಣ
ನಿನ್ನ ಪ್ರಾಣ ನಿಃಪ್ರಾಣವಾಯಿತಲ್ಲಾ ಬಸವಣ್ಣ
ಲಿಂಗ ಜಂಗಮದ ಮಾಟ ಸಮರ್ಪಿತವಾಯಿತಲ್ಲಾ ಬಸವಣ್ಣ
ನಿಶ್ಶಬ್ದವೇದ್ಯವಾದೆಯಲ್ಲಾ ಬಸವಣ್ಣ.
ಕಲಿದೇವರದೇವನ ಹೃದಯಕಮಲವ ಹೊಕ್ಕು
ದೇವರಿಗೆ ದೇವನಾಗಿ ಹೋದೆಯಲ್ಲಾ, ಸಂಗನಬಸವಣ್ಣಾ -ಮ.ವ.654

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ಕಲ್ಯಾಣ ಕಿರಣ. DTP : ರಮೇಶ್ ಲಿಂಗಾಯತ

ಡಾ|| ಎಂ. ಚಿದಾನಂದಮೂರ್ತಿಯವರ ಲೇಖನದ ವಿಮರ್ಶೆ

-ಮಾತಾಜಿ

ಖ್ಯಾತ ಸಂಶೋಧಕರೆಂದು ಇಲ್ಲಿಯವರೆಗೂ ಕೀರ್ತಿ (ಅಲ್ಲ ಪ್ರಚಾರ) ಪಡೆದಿದ್ದು ಇದೀಗ ಕ್ಯಾತೇ ಸಂಶೋಧಕರೆಂಬ ಬಿರುದಿಗೆ ಪಾತ್ರರಾಗುತ್ತಿರುವ ಶ್ರೀ ಡಾ|| ಎಂ.ಚಿದಾನಂದಮೂರ್ತಿಯವರ ಲೇಖನ "**ಹಿಂದೂ-ವೀರಶೈವ ಒಂದು ವಿಶ್ಲೇಷಣೆ**" ಎಂಬುದು ಕನ್ನಡ ಪ್ರಭಾ ದಿನಪತ್ರಿಕೆಯ ೨೦೦೦ದ ಮೇ ೨೪-೨೫ರ ಸಂಚಿಕೆಗಳಲ್ಲಿ ಎರಡು ಕಂತುಗಳಲ್ಲಿ ಪ್ರಕಟಗೊಂಡಿತು. ಈಗಿನ ಕಲ್ಯಾಣಕಿರಣದಲ್ಲಿ ಭಾಗ-೧ ಪ್ರಕಟಿಸಲಾಗಿದೆ. ಮುಂದಿನ ಸಂಚಿಕೆಯಲ್ಲಿ ೨ನೇ ಭಾಗ ಪ್ರಕಟಗೊಳ್ಳುವುದು.

ಪ್ರಾರಂಭದಿಂದ ಕಡೆಯವರೆಗೂ ಗೊಂದಲದಿಂದಲೇ ಪ್ರಾರಂಭವಾಗಿ, ಗೊಂದಲದಲ್ಲಿಯೇ ಮುಂದುವರಿದು, ಗೊಂದಲದಲ್ಲಿಯೇ ಮುಕ್ತಾಯವಾಗುವ ಲೇಖನದುದ್ದಕ್ಕೂ ಲಿಂಗಾಯತ ಮತ್ತು ವೀರಶೈವಗಳನ್ನು ಒಂದೆಂದು ಭಾವಿಸಿ ತಪ್ಪು ತಪ್ಪಾಗಿಯೇ ಚಿ.ಮೂ.ಅವರು ಸಾಗಿದ್ದಾರೆ. ಇದು ಅವರು ಅರಿವಿಲ್ಲದೆ ಮಾಡಿರುವ ಕೃತ್ಯವಲ್ಲ, ವೀರಶೈವಕ್ಕೆ ತನ್ನದೇ ಆದ ಸ್ವಾವಲಂಬನೆ ಸಾಧಿಸಲು ಬೇಕಾದ ಸಾಹಿತ್ಯವಾಗಲೀ, ಪರಂಪರೆಯಾಗಲೀ ಇಲ್ಲದ್ದರಿಂದ ಅದನ್ನು ಲಿಂಗಾಯತ ಧರ್ಮಕ್ಕೆ ತೆಕ್ಕೆ ಬೀಳಿಸಿ, ಬದುಕಿಸುವ ದುರುದ್ದೇಶ ಚಿ.ಮೂ ಅವರದು. ಆದರೆ ಒಂದು ಮಹದುಪಕಾರವನ್ನು ಚಿ.ಮೂ ಅವರು ಮಾಡಿದ್ದಾರೆ. ಅದೆಂದರೆ, "ವೀರಶೈವ-ಲಿಂಗಾಯತ ಸ್ಪಷ್ಟವಾಗಿ ಬೇರೆ ಬೇರೆ ; ವೀರಶೈವವು ಸಪ್ತಶೈವಗಳಲ್ಲಿ ಒಂದು ಶಾಖೆ, ಲಿಂಗಾಯತವು ಒಂದು ಧರ್ಮ. ವೀರಶೈವವು ಹಿಂದು ಕಕ್ಷೆಯಲ್ಲೇ ಬರುವ ಒಂದು ಮತ, ದ್ವೈತ-ಅದ್ವೈತ-ವಿಶಿಷ್ಟಾದ್ವೈತಗಳಂತೆ" ಎಂದು. ನಾವು ವಿವರಿಸಲು ಸಹಾಯಕ-ವಾಗುವ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿಕೊಟ್ಟು ನಮ್ಮ ಭಾರವನ್ನು ಕಡಿಮೆ ಮಾಡಿದ್ದಾರೆ.

ಈ ನಮ್ಮ ಲೇಖನ ಪೂರ್ಣವಾಗಬೇಕಾದರೆ ನಾವು ಮತ್ತು ಚಿದಾನಂದ ಮೂರ್ತಿಗಳ ಮಧ್ಯೆ ನೇರ ಸಂವಾದ ನಡೆದರೆ ಸಾಕಾಗದು ; ಜೊತೆಗೆ ಲಿಂಗಾಯತ ಸಮಾಜದಲ್ಲಿ ಗೊಂದಲಕ್ಕೆ ಕಾರಣೀಭೂತವಾದ ವೀರಶೈವ ಮಹಾಸಭೆಯ ವಿಚಾರಧಾರೆಯನ್ನು ತೆಗೆದುಕೊಳ್ಳಲೇಬೇಕಾಗುತ್ತದೆ. ಈ ಮೂವರ ವಾದಗಳು ಕೆಳಕಂಡಂತೆ ಇವೆ.

೧. ಡಾ|| ಎಂ. ಚಿದಾನಂದಮೂರ್ತಿ :
- ವೀರಶೈವವು ಹಿಂದು ಧರ್ಮದ ಅಂಗ
- ವೀರಶೈವ-ಲಿಂಗಾಯತ ಒಂದೇ.

೨. ಅಖಿಲ ಭಾರತ ವೀರಶೈವ ಮಹಾಸಭೆ :
- ವೀರಶೈವವು ಪ್ರತ್ಯೇಕ ಧರ್ಮ, ಹಿಂದು ಧರ್ಮದ ಅಂಗವಲ್ಲ
- ವೀರಶೈವ-ಲಿಂಗಾಯತ ಎರಡೂ ಒಂದೆ

೩. ಬಸವ ಧರ್ಮ ಪೀಠ / ಲಿಂಗಾಯತ ಧರ್ಮ ಮಹಾಸಭೆ :
- ಲಿಂಗಾಯತ ಮತ್ತು ವೀರಶೈವ ಸ್ಪಷ್ಟವಾಗಿ ಬೇರೆ ಬೇರೆ
- ವೀರಶೈವವು ಹಿಂದು ಧರ್ಮದ ಒಂದು ಅಂಗ ; ಆದರೆ
- ಲಿಂಗಾಯತವು ಸ್ವತಂತ್ರ ಧರ್ಮ, ಹಿಂದು ಧರ್ಮದ ಅಂಗವಲ್ಲ.

ಈ ಮೂರು ವಾದಗಳನ್ನು ವಿಶ್ಲೇಷಿಸುವುದೇ ಪ್ರಸ್ತುತ ಲೇಖನದ ಉದ್ದೇಶ.

೧. ೧೨ನೆಯ ಶತಮಾನದಲ್ಲಿ ನಡೆದ ಶರಣ ಚಳುವಳಿಯು ವೀರಶೈವರಿಗೆ ಒಂದು ಅಗಾಧ ಆತ್ಮವಿಶ್ವಾಸವನ್ನು ತಂದು ಕೊಟ್ಟಿತೆಂಬುದು ಎಲ್ಲರಿಗೂ ತಿಳಿದ ವಿಷಯ.-ಚಿ.ಮೂ.

ಈ ವಾಕ್ಯದಿಂದಲೇ ತಪ್ಪುಗಳ ಸರಮಾಲೆಯನ್ನು ಚಿ.ಮೂ ಅವರು ಆರಂಭಿಸುತ್ತಾರೆ.

ವಚನಕಾರರ ಚಳುವಳಿ ಇಡೀ ಮಾನವ ಕುಲಕ್ಕೆ, ದೀನ-ದಲಿತರಿಗೆ, ಶೋಷಿಸಲ್ಪಟ್ಟವರಿಗೆ ಅಗಾಧ ಆತ್ಮ ವಿಶ್ವಾಸವನ್ನು ತಂದುಕೊಟ್ಟಿದ್ದು ಸತ್ಯ, ಕೇವಲ ವೀರಶೈವರಿಗೆ ಮಾತ್ರವಲ್ಲ. ಏಕೆಂದರೆ ಶೈವ ಶಾಖೆಗಳಲ್ಲಿ ಒಂದಾದ ವೀರಶೈವವು ತಮಿಳುನಾಡಿನ ಕೆಲವು ಭಾಗದಲ್ಲಿ, ಆಂಧ್ರದ ಕೆಲವು ಪ್ರದೇಶದಲ್ಲಿದ್ದು ಆ ಪಂಥದವರಿಗೆ ಯಾವುದೇ ಸೈದ್ಧಾಂತಿಕ, ಸಾಮಾಜಿಕ ನೆಲೆ ಇರಲಿಲ್ಲ. ಶಿವನಲ್ಲಿ ವೀರತಮವಾದ ಭಕ್ತಿಯುಳ್ಳ ಅವರು ಶಿವನ ಕಟ್ಟಾ ಆರಾಧಕರಾದರೂ ಅವಲಂಬಿಸಿದ್ದು ವರ್ಣಾಶ್ರಮದ ಸಾಮಾಜಿಕ ವ್ಯವಸ್ಥೆಯನ್ನು. ವೇದ-ಆಗಮಗಳನ್ನೇ ಶಾಸ್ತ್ರಗ್ರಂಥಗಳನ್ನಾಗಿ ಹೊಂದಿದ್ದ ಅವರು ಕಟ್ಟಾ ವೈದಿಕರಂತೆ ಯಜ್ಞ-ಯಾಗಾದಿಗಳನ್ನು ಮಾಡದೆ, ಶುದ್ಧ ಶೈವರಾಗಿ ಏಕದೇವತಾ (ಶಿವ) ನಿಷ್ಠೆ ಹೊಂದಿರದೆ ತ್ರಿಶಂಕು ಸ್ಥಿತಿಯಲ್ಲಿದ್ದವರಿಗೆ ಕರ್ನಾಟಕದ ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಲಿಂಗಾಯತ ಧರ್ಮವು ಒಳ್ಳೆಯ ಆಶ್ರಯವನ್ನು ನೀಡಿತು. ಬಳ್ಳಿಯು ಬಲಿಷ್ಠ ಮರವೊಂದರ ಆಶ್ರಯವನ್ನು ಪಡೆದು ತನ್ನ ಅಸ್ತಿತ್ವವನ್ನು ರಕ್ಷಿಸಿಕೊಳ್ಳುವಂತೆ ವೀರಶೈವವು ಲಿಂಗಾಯತ ಧರ್ಮದ ವೃಕ್ಷವನ್ನು ಆಶ್ರಯಿಸಿತು. ಅದಕ್ಕಾಗಿಯೇ ಕೃತಜ್ಞತೆಯಿಂದ ಹೀಗೆ ಕೆಲವರು ನುಡಿದರು :

1. ಜಗದ್ಧಿತಾರ್ಥಕ್ಕಾಗಿ ಬಸವಣ್ಣ ಮರ್ತ್ಯಕ್ಕೆ ಅವತರಿಸಿ ವೀರಶೈವ ಮಾರ್ಗವನರುಹುವುದಕ್ಕಾಗಿ ೫೨ ಆಚರಣೆಗಳನ್ನು ಅಳವಡಿಸಿಕೊಂಡು ಚರಿಸಿದನು- ಅಕ್ಕಮಹಾದೇವಿ
2. ವರ ವೀರಶೈವವ ನೆಲೆಗೊಳಿಸಿದ - ಮರಿ ತೋಂಟದಾರ್ಯರು
3. ವೀರಶೈವ ನಿರ್ಣಯ ಪರಮಾವತಾರಿ - ಮಗ್ಗೆಯ ಮಾಯಿದೇವ

೨. ಆಂಧ್ರದಲ್ಲಿದ್ದ ಬಸವ ಪೂರ್ವದ ವೀರಶೈವದ ಲಕ್ಷಣಗಳನ್ನು ಕುರಿತು ವಿದ್ವಾಂಸರಾದ ಎಸ್.ಆರ್. ಸೋಮಶೇಖರ ಶರ್ಮಾ **''ಪಾಲಕುರಿಕಿ ಸೋಮನಾಥ ಕವಿ''** ಎಂಬ ಪುಸ್ತಕದಲ್ಲಿ ಹೇಳುತ್ತಾರೆ.(ಪ್ರಕಾಶಕರು : ಮೂರು ಸಾವಿರ ಮಠ, ಹುಬ್ಬಳ್ಳಿ)

''ಪ್ರಾಚೀನ ಕಾಲದಲ್ಲಿ ವೈದಿಕ ಶೈವಮತದಿಂದ ವೀರಶೈವ ಮತವು ಆವಿರ್ಭವಿಸಿದಾಗ, ಈ ಮತವು ಕೇವಲ ದ್ವಿಜರವರೆಗೆ ಸೀಮಿತವಾಗಿತ್ತು. ಅರ್ಥಾತ್, ಪ್ರಾಚೀನ ಕಾಲದಲ್ಲಿ ''ಉಪನಯನ'' ಸಂಸ್ಕಾರವಿದ್ದವರಿಗೇನೇ ''ಇಷ್ಟಲಿಂಗ''★ ಧಾರಣೆ ಮಾಡಲಾಗುತ್ತಿತ್ತು. ಉಳಿದವರಿಗೆ ''ಸ್ಥಾವರಲಿಂಗ'' ಪೂಜೆಯೇ ವಿಹಿತವಾಗಿತ್ತು.

ಈ ನಾಲ್ಕು ವರ್ಗಗಳ ವ್ಯವಸ್ಥೆಯ ಜೊತೆಗೆ ನಾಲ್ಕು ಆಶ್ರಮ ವ್ಯವಸ್ಥೆಯನ್ನೂ ನಿರ್ಮಿಸಲಾಗಿತ್ತು. ೧. ಬ್ರಹ್ಮಚರ್ಯ ೨. ಗೃಹಸ್ಥ ೩. ವಾನಪ್ರಸ್ಥ ಮತ್ತು ೪. ಸನ್ಯಾಸ. ಇವು ನಾಲ್ಕು ಆಶ್ರಮಗಳ ಪ್ರಾಚೀನ (ಸನಾತನ) ವೈದಿಕ-ಧರ್ಮದ ಪ್ರಕಾರ ಈ ಆಶ್ರಮ ವ್ಯವಸ್ಥೆಯು ಹೀಗೆ ಇದ್ದಿತು.

೧. ಬ್ರಾಹ್ಮಣ ವರ್ಣದ ಪುರುಷರಿಗೆ ನಾಲ್ಕು ಆಶ್ರಮಗಳು

1. ಬ್ರಹ್ಮಚರ್ಯ 2. ಗೃಹಸ್ಥ 3. ವಾನಪ್ರಸ್ಥ ಮತ್ತು 4. ಸನ್ಯಾಸ.

೨. ಕ್ಷತ್ರಿಯ ವರ್ಣದ ಪುರುಷರಿಗೆ ೩. ಆಶ್ರಮಗಳು

1. ಬ್ರಹ್ಮಚರ್ಯ 2. ಗೃಹಸ್ಥ 3. ವಾನಪ್ರಸ್ಥ

೩. ವೈಶ್ಯ ವರ್ಣದ ಪುರುಷರಿಗೆ ಕೇವಲ ಎರಡು ಆಶ್ರಮಗಳು

1. ಬ್ರಹ್ಮಚರ್ಯ 2. ಗೃಹಸ್ಥ

★ ಕರ್ನಾಟಕದ ಲಿಂಗಾಯತ ಧರ್ಮದ ಪ್ರಭಾವದಿಂದ ಸೋಮಶೇಖರ ಶರ್ಮಾ ಅವರು ಇಷ್ಟಲಿಂಗ ಎಂಬ ಪದ ಬಳಸಿದ್ದಾರೆ. ಆ ಲಿಂಗಗಳಿಗೆ 'ಶಿವಲಿಂಗ', 'ಚರಲಿಂಗ' ಎಂದು ಕರೆಯಲಾಗುತ್ತಿತ್ತು. **-ಮಾತಾಜಿ**

೪. ಶೂದ್ರವರ್ಣದ ಪುರುಷರಿಗೆ ಮತ್ತು ನಾಲ್ಕೂ ವರ್ಣದ ಸ್ತ್ರೀಯರಿಗೆ
ಕೇವಲ ಒಂದೇ ಆಶ್ರಮ-ಗೃಹಸ್ಥ.

ಪ್ರಾಚೀನ ಕಾಲದಲ್ಲಿ ಸನ್ಯಾಸ ಆಶ್ರಮವನ್ನು ಸ್ವೀಕರಿಸುವ ಅಧಿಕಾರವು ಕೇವಲ ಬ್ರಾಹ್ಮಣ ಪುರುಷರಿಗೇನೇ ಇದ್ದಿತೆಂಬ ವಿಷಯವನ್ನು ನಾವು ಇಲ್ಲಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ''

ಸೋಮಶೇಖರ ಶರ್ಮಾ ಅವರು ಮತ್ತೊಂದು ಮಹತ್ವದ ಮಾತು ಬರೆದಿದ್ದಾರೆ, ''ಶೂದ್ರ ವರ್ಣದವರಿಗೆ ಲಿಂಗಧಾರಣೆ ಕರ್ನಾಟಕದಲ್ಲಿ ಬಸವಣ್ಣನ ಕಾಲದಲ್ಲಿ ಆರಂಭವಾದರೂ, ಆಂಧ್ರದೇಶದಲ್ಲಿ ಕ್ರಿ.ಶ. ೧೪ನೇ ಶತಮಾನದವರೆಗೆ ಶೂದ್ರರಿಗೆ ಲಿಂಗಧಾರಣೆಯನ್ನು ಯಾವ ಆಚಾರ್ಯನೂ ಒಪ್ಪಿರಲಿಲ್ಲ. ಹೀಗಾಗಿ ಈ ದೇಶದಲ್ಲಿ ಲಿಂಗಧಾರಣೆ ಕೇವಲ ದ್ವಿಜರಿಗೇನೆ (ಬ್ರಾಹ್ಮಣ, ಕ್ಷತ್ರಿಯ, ಮತ್ತು ವೈಶ್ಯ ವರ್ಣದವರಿಗೆ) ಸೀಮಿತವಾಗಿದ್ದಿತು.'' ★

ಶಿವಯೋಗಿ ಸಿದ್ಧರಾಮೇಶ್ವರರು ಹೇಳುವ ಒಂದು ವಚನ ಬಸವಣ್ಣನವರ ಮಹತ್ತರ ಕೊಡುಗೆಯನ್ನು ಸ್ಪಷ್ಟವಾಗಿ ವಿವರಿಸುತ್ತದೆ.

ಸ್ವಾಮಿ ಸ್ವಾಮಿ ಭವಿಯ ಭಕ್ತನ ಮಾಳ್ಪುದು
ಯೋಗ್ಯವೋ ? ಅಯೋಗ್ಯವೋ ?
ಆಗಮ ವಿಚಾರದಿಂದ ಆಗದಿಹುದೆಂಬ ಸಿದ್ಧಾಂತ :
ಇಲ್ಲಿ ಪರಮಗುರು ಸಂಗನ ಬಸವಯ್ಯ ಸರ್ವಜಾತಿಯ
ಲಿಂಗದ ರಾಶಿಯ ಮಾಡಿದ ಸಿದ್ಧಾಂತ
ಕಪಿಲಸಿದ್ಧಮಲ್ಲಿಕಾರ್ಜುನಾ. *-ಸಿ.ವ. 1321*

ವೀರಶೈವವು ಸೋಮಶೇಖರ ಶರ್ಮಾ ಅವರು ಹೇಳಿದಂತೆ ಚತುರ್ವರ್ಣಗಳ ಚೌಕಟ್ಟಿನಲ್ಲಿಯೇ ಕೆಲಸ ಮಾಡಿದ ಮತ; ಆದರೆ ಬಸವಣ್ಣನವರು ಸಂಸ್ಥಾಪಿಸಿದ ಲಿಂಗಾಯತ ಧರ್ಮವು ವೇದಾಗಮಗಳ ಸಂಪ್ರದಾಯವನ್ನು ಮೀರಿ ನಿಂತುದು. ಆಗಮಗಳು ವೈದಿಕ ವಿಚಾರಧಾರೆಯ ಅನುಕರಣೆ ಮಾಡಿ, ಭವಿಯನ್ನು (ಶೂದ್ರನನ್ನು) ಭಕ್ತನನ್ನಾಗಿ ಮಾಡಲು ಬರದು ಎಂದು ಹೇಳಿದಾಗ ಇದನ್ನು ಪ್ರಶ್ನಿಸಿ ಎಲ್ಲರಿಗೂ ದೀಕ್ಷೆಯನ್ನು ಕೊಟ್ಟವರು ಸಮತಾವಾದಿ ಬಸವಣ್ಣನವರು. ಇದರಿಂದಾಗಿ ಇಲ್ಲಿ ಅಂದರೆ ಕಲ್ಯಾಣದಲ್ಲಿ ಅರ್ಥಾತ್ ಲಿಂಗಾಯತ ಧರ್ಮದಲ್ಲಿ ಬಸವಣ್ಣನವರು ಎಲ್ಲರನ್ನೂ ಸಂಸ್ಕಾರವಂತರನ್ನಾಗಿ ಮಾಡಿ, ಲಿಂಗದ ರಾಶಿಯನ್ನೇ ತಯಾರು ಮಾಡಿದ್ದಾರೆಂದು ಸಿದ್ಧರಾಮೇಶ್ವರರು ಉದ್ಗರಿಸುತ್ತಾರೆ.

ಸೋಮಶೇಖರ ಶರ್ಮಾರವರ ಅಭಿಪ್ರಾಯದಂತೆ ''ಪ್ರಾಚೀನ ಕಾಲದಲ್ಲಿ ಲಿಂಗಧಾರಿ ಬ್ರಾಹ್ಮಣನನ್ನು ''ಮಾಹೇಶ್ವರ'' ಎಂದೂ, ಲಿಂಗಧಾರಿ ಬ್ರಾಹ್ಮಣ ಸನ್ಯಾಸಿಯನ್ನು 'ಜಂಗಮ' ಎಂದು ಕರೆಯಲಾಗುತ್ತಿತ್ತು. ಇದು ಬಹಳ ಮಹತ್ವಪೂರ್ಣ ವಿವರಣೆ. ಏಕೆಂದರೆ ಶೂದ್ರಾತಿಶೂದ್ರರಲ್ಲಿ ಒಂದಾದ ನಟುವರ ಜಾತಿಯಲ್ಲಿ ಹುಟ್ಟಿದ, ಅಲ್ಲಮಪ್ರಭುದೇವರನ್ನು ಸಮತಾವಾದಿ ಬಸವಣ್ಣನವರು ಶೂನ್ಯಪೀಠದ ಪ್ರಥಮ ಗುರುವನ್ನಾಗಿ ಪೀಠಾರೋಹಣ ಮಾಡಿಸಿದಾಗ, ಮೇಲ್ವರ್ಣದ ''ಜಂಗಮ''ರು ಮುನಿಸಿಕೊಂಡು ಊಟವನ್ನು ಮಾಡದೆ ಎದ್ದು ಹೋಗುವ ಸನ್ನಿವೇಶವನ್ನು ಶೂನ್ಯ ಸಂಪಾದನೆಯಲ್ಲಿ

★ ಬಸವ ಪೂರ್ವದ ವೀರಶೈವವು ಕೇವಲ ದ್ವಿಜ ವರ್ಣದವರಿಗೆ ವೀರಶೈವ ದೀಕ್ಷೆ ಕೊಡುತ್ತಿತ್ತು. ಬಸವ ಸಂಸ್ಥಾಪಿತ ಲಿಂಗಾಯತವು ದ್ವಿಜ-ಶೂದ್ರ ಎಂಬ ಭೇದವೆಣಿಸದೆ ಎಲ್ಲ ಮಾನವರಿಗೆ ಲಿಂಗದೀಕ್ಷೆ ನೀಡುತ್ತದೆ. ಕ್ರಿ.ಶ. ೧೪ನೇ ಶತಮಾನಕ್ಕೆ ಆಂಧ್ರಕ್ಕೂ ಲಿಂಗಾಯತ ಧರ್ಮ ಹಬ್ಬಿದಾಗ ಅದು ಶೂದ್ರರಿಗೂ ಲಿಂಗದೀಕ್ಷೆ ನೀಡಿತು ಎಂಬುದು ನಮಗೆ ಹೆಮ್ಮೆಯ ವಿಷಯ. **-ಮಾತಾಜಿ**

ಕಾಣುತ್ತೇವೆ. (ಶೂನ್ಯ ಸಂಪಾದನೆ, ಅಷ್ಟಾದಶೋಪದೇಶ, ಪ್ರಭುದೇವರ ಪೀಠಾರೋಹಣದ ಪ್ರಸಂಗ) ಅಂಥ ವೇಷಧಾರಿ ಜಂಗಮರನ್ನು ಅಲ್ಲಮ ಪ್ರಭುದೇವರು ಹೀಗೆ ವಿಡಂಬಿಸುತ್ತಾರೆ.

ಅಂಗಜಂಗುಳಿಗಳೆಲ್ಲ ಅಶನಕ್ಕೆ ನೆರೆದರು
ಲಿಂಗದ ಹವಣನಿವರೆತ್ತ ಬಲ್ಲರು ?
ಕಾಯಜೀವಿಗಳು ಕಳವಳಧಾರಿಗಳು
ದೇವರ ಸುದ್ದಿಯನಿವರೆತ್ತ ಬಲ್ಲರು ?
ಮದ್ಯಪಾನವನುಂಡು ಮದವೆದ್ದ ಜೋಗಿಯಂತೆ ನುಡಿವರು.
ಗುಹೇಶ್ವರನ ನಿಲವನಿವರೆತ್ತ ಬಲ್ಲರು ? *-ಅ.ಪ್ರ.ವ 356*

ಬರಿಯ ಬೋಳುಗಳೆಲ್ಲಾ ಜಂಗಮವೆ ?
ವೇಷಧಾರಿಗಳೆಲ್ಲಾ ಜಂಗಮವೆ
ಜಡಜೀವಗಳೆಲ್ಲಾ ಜಂಗಮವೆ ?
ನಿರ್ಗಮನವೆ ಜಂಗಮ. ನಿಸ್ಸೀಮ ಜಂಗಮ. ನಿಜೈಕ್ಯನೆ ಜಂಗಮ
ಇಂಥ ಜಂಗಮದ ಸುಳುಹ ಕಾಣದೆ,
ಕೂಡಲಚೆನ್ನಸಂಗಮದೇವ ,
ತಾನೇ ಪ್ರಭುವೆಂಬ ಜಂಗಮವಾದ *-ಚ.ಬ.ವ. 1230*

೨. ವೀರಶೈವ ಗುರುವು ಚತುರ್ವರ್ಣಗಳವರಿಗೆ ವೀರಶೈವ ದೀಕ್ಷೆಯನ್ನು ಕೊಟ್ಟರೂ ಅಲ್ಲಿ ಸಮಾನತೆ ಇರಲಿಲ್ಲ ; ದೀಕ್ಷಾ ನಂತರವೂ ಪೂರ್ವದ ಜಾತಿ ವರ್ಣಗಳು ಅಳಿಯುತ್ತಿರಲಿಲ್ಲ ಮತ್ತು ಆ ಗುರು ಶೂದ್ರವರ್ಣದವರಿಗೆ ದೀಕ್ಷೆ ಮಾಡಿದರೂ ದೀಕ್ಷೆ ಪಡೆದುಕೊಂಡವನ ಮನೆಗೆ ಹೋಗಿ ಪ್ರಸಾದ ಸ್ವೀಕಾರವನ್ನು ಮಾಡದೆ ಅಕ್ಕಿ ಬೇಳೆ ಬೆಲ್ಲ ಮುಂತಾದ ಪದಾರ್ಥಗಳನ್ನು ಪಡೆದು ಬರುತ್ತಿದ್ದ. ಅಂಥ ಆಚರಣೆಯನ್ನು ಚನ್ನಬಸವಣ್ಣನವರು (ಚ.ಬ.ವ 949) ಮತ್ತು ಚೌಡಯ್ಯನವರು ಖಂಡಿಸಿದ್ದಾರೆ.

ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ
ತಿರುಗಿ ಅವನ ಮನೆಯಲ್ಲಿ ಉಣಬಾರದೆಂದು
ಅಕ್ಕಿ ಕನಕವ ತೆಗೆದುಕೊಂಡು ಹೋಗುವ ಗುರುವನ್ನು ಕಂಡರೆ
ಕೆಡವಿ ಹಾಕಿ ಮೂಗನೇ ಕೊಯ್ದು, ಇಟ್ಟಂಗಿಯ ಕಲ್ಲಲಿ ತಿಕ್ಕಿ
ಸಾಸಿವೆಯ ಹಿಟ್ಟನೆ ತಳಿದು ಮೇಲೆ ನಿಂಬಿಯ ಹುಳಿಯನೆ ಹಿಂಡಿ
ಪಡುವಲ ಗಾಳಿಗೆ ಹಿಡಿಯೆಂದಾತ ನಮ್ಮ ಅಂಬಿಗರ ಚೌಡಯ್ಯ .

೩. ಮಡಿವಂತಿಕೆಯನ್ನು ವಿಪರೀತ ಮಾಡುತ್ತಿದ್ದ ವೀರಶೈವರನ್ನು ಅವರು ಇನ್ನಿತರ ದೀಕ್ಷಿತರಿಗಿಂತಲೂ ಶ್ರೇಷ್ಠವೆಂದು ವರ್ತಿಸುತ್ತಿದ್ದಾಗ ಬರಿ ಮಡಿ ನೇಮ ಮಾಡುವುದೇ ಶ್ರೇಷ್ಠತೆಯಲ್ಲ ಎಂದು ಸಿದ್ಧರಾಮೇಶ್ವರರು (ಸಿ.ವ. 274)ಹೇಳಿದ್ದಾರೆ.

ಶರಣರ ವಚನಗಳಲ್ಲಿ ವೀರಶೈವದ ಪ್ರಸ್ತಾಪವಾಗಿದೆ ಎಂದು ಬರೀ ವಚನ ಸಂಖ್ಯೆ ಉಲ್ಲೇಖಿಸಿ ಚಿ.ಮೂ ಅವರು ಜನರನ್ನು ವಂಚಿಸುತ್ತಿದ್ದಾರೆ. ವೀರಶೈವದ ಪ್ರಸ್ತಾಪ ಖಂಡನಾತ್ಮಕ ಹಿನ್ನೆಲೆಯಲ್ಲಿ ಆಗಿರುವುದೇ ಹೆಚ್ಚು, ಮಂಡನಾತ್ಮಕವಾಗಿ ಅಲ್ಲ. ಮೋಳಿಗೆಯ ಮಾರಯ್ಯನವರಂತೂ ಅತ್ಯಂತ ಸ್ಪಷ್ಟ ಶಬ್ದಗಳಲ್ಲಿ ಬಸವಣ್ಣನವರು ಕೊಟ್ಟ ಹೊಸ ಪಥವು ಶುದ್ಧ ಶೈವ, ಪೂರ್ವ ಶೈವ, ಮಾರ್ಗಶೈವ, ವೀರಶೈವ, ಆದಿಶೈವಗಳಿಂದ್ಧ ಪೂರ್ತಿ ಬೇರೆಯೇ ಆದ ಲಿಂಗಾಂಗ ಯೋಗದ ಮಾರ್ಗ ಎಂದು ಹೇಳಿದ್ದಾರೆ.

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ
ಮಿಕ್ಕು ಅವರಿಗೆ ಲೆಕ್ಕಕ್ಕೆ ಕಡೆಯಿಲ್ಲದೆ ಮಾಡಿ,

ಹೊಕ್ಕು ಭಕ್ತಿಯಲ್ಲಿ, ಲೆಕ್ಕತಪ್ಪದೆ ಅವತಾರದಲ್ಲಿ ಬಂದು,
ಮರ್ತ್ಯಕ್ಕೆ ಬಸವೇಶ್ವರನೆಂಬ ಗಣನಾಥನಾಮಮಂ ಪಡೆದು
ಭಕ್ತರಿಗೆ ಮುಖ್ಯವಾಗಿ ಭಕ್ತಿಯಂ ತೋರಿ
ಸತ್ಯದ ಬಟ್ಟೆಯಂ ಕಾಣದ, ಚಿದ್ಘನಲಿಂಗವ ಹೊಗಲರಿಯದೆ
ಬದ್ಧಕತನವನು ಸುಬದ್ಧವ ಮಾಡದೆ
ಶುದ್ಧಶೈವ ಕಪ್ಪಡಿಯ ಸಂಗಮನಾಥನಲ್ಲಿ
ಐಕ್ಯವಾದ ಚಿದ್ರೂಪ ಚಿತ್ಪ್ರಕಾಶ ಘನಲಿಂಗ
ಕೈಯಲ್ಲಿದ್ದಂತೆ ಹೊದ್ದಿದನೇಕ ರುದ್ರಮೂರ್ತಿಯಲ್ಲಿ
ರಜತಾದ್ರಿಯಲ್ಲಿದ್ದು ಸುಬದ್ಧವಾಗಿ ಪ್ರಳಯವಾಗಿತ್ತು ರುದ್ರಲೋಕವೆಲ್ಲಾ.
ರುದ್ರಗಣಂಗಳೆಲ್ಲರೂ ಮರ್ದನಂಗೆಯ್ದಲ್ಲಿ
ಸುದ್ದಿಯ ಹೇಳುವರನಾರನೂ ಕಾಣೆ.
ಇನ್ನಿದ್ದವರಿಗೆ ಬುದ್ಧಿ ಇನ್ನಾವುದೊ ?
ಶುದ್ಧಶೈವವ ಹೊದ್ದದೆ, ಪೂರ್ವಶೈವವನಾಚರಿಸದೆ
ಮಾರ್ಗಶೈವವ ಮನ್ನಣೆಯ ಮಾಡದೆ, ವೀರಶೈವವನಾರಾಧಿಸದೆ
ಆದಿಶೈವವನನುಕರಿಸದೆ, ಭೇದಿಸಬಾರದ ಲಿಂಗ ಕರದಲ್ಲಿದ್ದು,
ಕಂಗಳಿನಲ್ಲಿ ನಿಂದು, ಮನದಲ್ಲಿ ಸಿಂಹಾಸನಂಗೆಯ್ದು
ಸಕಲೇಂದ್ರಿಯವ ಮರೆದು
ಕಾಯಜೀವನ ಹೊಲಿಗೆಯ ಬಿನ್ನಾಣದಿಂ ಬಿಚ್ಚಿ
ಬೇರೊಂದರಸಲಿಲ್ಲವಾಗಿ ಬಯಕೆಯರತು
ಭವಹಿಂಗಿ, ತಾನೆನ್ನದೆ ಇದಿರೆನ್ನದೆ, ಏನೂ ಎನ್ನದ ಲಿಂಗೈಕ್ಯಂಗೆ
ಸ್ವಾನುಭಾವದಿಂದ ನಮೋ ನಮೋ, ನಿಃಕಳಂಕ ಮಲ್ಲಿಕಾರ್ಜುನಾ

-ಸಂ.ವ.ಸ.3 - ಮೋಳಿಗೆಯ ಮಾರಯ್ಯ 2092

೨. ಲಿಂಗವ ಹಿಡಿದು ನೀನು ಪೂಜಿಸಲಾಗಿ
ಲಿಂಗವು ಹೆಸರುವಡೆಯಿತ್ತು ನೋಡಾ ಬಸವಣ್ಣಾ !

-ಅಲ್ಲಮಪ್ರಭು 925

೪. ಸೋಮಶೇಖರ ಶರ್ಮಾ ಅವರು ವೈದಿಕ ಮತ್ತು ಅವೈದಿಕ ಮತಗಳ ವ್ಯತ್ಯಾಸವನ್ನು ಹೀಗೆ ಬಣ್ಣಿಸಿದ್ದಾರೆ.

''ಈ ವೈದಿಕ ಮತಗಳಾದ ಶೈವ ಮತ್ತು ವೈಷ್ಣವ ಮತ್ತು ಶೈವದಲ್ಲಿ ವೀರಶೈವ ಇವೆಲ್ಲ ಮತಗಳು ಬ್ರಾಹ್ಮಣ ವರ್ಗ ಪ್ರಧಾನ ಮತಗಳಾಗಿದ್ದವೆಂದು ಹೇಳಿದ್ದೇನೆ. ಈ ವೈದಿಕಗಳ ವಿರುದ್ಧ ಕಾಲಕ್ರಮೇಣ ಎರಡು ಶಕ್ತಿಶಾಲಿ ಅವೈದಿಕ-ಮತಗಳು ಹುಟ್ಟಿದವು. ಅವೇ ೧. ಜೈನಮತ ಮತ್ತು ೨. ಬೌದ್ಧಮತ. ವೈದಿಕ ದೇವರ ಅರ್ಥಾತ್ 'ಶಿವ' ಮತ್ತು 'ವಿಷ್ಣು' ಮುಂತಾದ ವೈದಿಕ ದೇವರ ಉಪಾಸನೆಯನ್ನು ನಿಷೇಧಿಸುವುದು, ವರ್ಣಾಶ್ರಮ ವ್ಯವಸ್ಥೆಯನ್ನು ನಿರಾಕರಿಸುವುದು, ಸರ್ವ ವರ್ಗದ ಸ್ತ್ರೀ ಪುರುಷರಿಗೆ ಸನ್ಯಾಸ ಆಶ್ರಮವನ್ನು ಕೊಡುವುದೂ, ನಿರಾಕಾರ (ಶೂನ್ಯ) ಪೂಜೆಯನ್ನು ಬೋಧಿಸುವದು-ಇವೇ ಪ್ರಧಾನ ಧರ್ಮಸಿದ್ಧಾಂತಗಳಾಗಿದ್ದ ಈ ಎರಡು ಅವೈದಿಕ ಮತಗಳು ಬಹು ಪ್ರಚಾರದಲ್ಲಿ ಬಂದವು. ಇವೆರಡು ಅವೈದಿಕ ಮತಗಳು ಕ್ಷತ್ರಿಯ ವರ್ಣದವರಿಂದ ಆರಂಭವಾದ್ದರಿಂದ ಮತ್ತು ವರ್ಣಾಶ್ರಮ ವ್ಯವಸ್ಥೆಯನ್ನು ನಿರಾಕರಿಸಿದ್ದರಿಂದ, ವೈದಿಕ-ಸಂಸ್ಕಾರಗಳನ್ನು ನಿರಾಕರಿಸಿದ್ದರಿಂದ ಕ್ಷತ್ರಿಯ ಕುಲದವರನ್ನು ಮತ್ತು ಶೂದ್ರ ವರ್ಣದ ಜನರನ್ನು ಆಕರ್ಷಿಸಿದವು. ಅಸಂಖ್ಯ ಕ್ಷತ್ರಿಯ ಮತ್ತು ಶೂದ್ರ ವರ್ಣದವರೂ

ಸೇರಿ ಸನ್ಯಾಸಿಗಳಾದರು. ಈ ಕಥೆ ಬೇರೆ. ಈ ಎರಡು ಅವೈದಿಕ ಮತಗಳಿಂದ ಸನಾತನ ವೈದಿಕಮತಗಳಿಗೆ ದೊಡ್ಡ ಆಘಾತ ಉಂಟಾಯಿತು. ವೈದಿಕ-ಸಮಾಜದ ಶ್ರೇಷ್ಠ ಸ್ಥಾನದಲ್ಲಿದ್ದ ಅಗ್ರವರ್ಣದವರು ಅವರು ಲಿಂಗಧಾರಿಗಳೇ ಇರಲಿ, ಅಲಿಂಗಧಾರಿಗಳೇ ಇರಲಿ- ಬಹು ಚಿಂತಾಕ್ರಾಂತರಾಗಬೇಕಾಯಿತು.''

ಶರ್ಮಾರವರ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಜೈನ ಮತ್ತು ಬೌದ್ಧ ಮತಗಳಂತೆ ಲಿಂಗಾಯತವು ಅವೈದಿಕ ಮತವಾಗುತ್ತದೆ ಎಂಬುದು ಸೂರ್ಯನ ಬೆಳಕಿನಲ್ಲಿ ವಸ್ತುಗಳು ಕಾಣುವಷ್ಟು ಸ್ಪಷ್ಟವಾಗುತ್ತದೆ ಏಕೆಂದರೆ, ಲಿಂಗಾಯತ ಧರ್ಮವು ಸಹ ಜೈನ- ಬೌದ್ಧ ಧರ್ಮಗಳಂತೆ

೧. ಬ್ರಹ್ಮ, ವಿಷ್ಣು, ಲಕ್ಷ್ಮಿ, ಗಣಪತಿ ಮುಂತಾದ ದೇವತೆಗಳ ಉಪಾಸನೆಯನ್ನು, ಪಂಚಭೂತಗಳ ಆರಾಧನೆಯನ್ನು ನಿಷೇಧಿಸಿದೆ.

೨. ನಿರಾಕಾರ ಪೂಜೆಯನ್ನು ಬೋಧಿಸಿದೆ.

೩. ವರ್ಣಾಶ್ರಮ ಸಾಮಾಜಿಕ ವ್ಯವಸ್ಥೆಯನ್ನು ನಿರಾಕರಿಸಿದೆ.

೪. ಸರ್ವವರ್ಗದ ಸ್ತ್ರೀ-ಪುರುಷರಿಗೆ ಸನ್ಯಾಸ ಆಶ್ರಮವನ್ನು ಕೊಡುತ್ತದೆ.

೫. ವೈದಿಕ ಸಂಸ್ಕಾರ, ಯಜ್ಞ- ಯಾಗ, ಹೋಮ ಹವನಾದಿಗಳನ್ನು ನಿಷೇಧಿಸುತ್ತದೆ.

ಚಿ.ಮೂ.ಯವರು ಅನೇಕ ವೀರಶೈವರು ಸಂಸ್ಕೃತ ವಿದ್ವಾಂಸರಾಗಿದ್ದರೆಂದು ಹೆಸರುಗಳನ್ನು ಕಾಣಿಸಿದ್ದಾರೆ. ಬಸವ, ಅಲ್ಲಮ, ಸಿದ್ಧರಾಮ, ಅಕ್ಕಮಹಾದೇವಿಯವರು ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಪಡೆದಿದ್ದರೆಂದು ಉದಾಹರಿಸಿದ್ದಾರೆ. ಪ್ರತಿಭಾವಂತರು, ಬುದ್ಧಿವಂತರು ಅಧ್ಯಯನ ಶೀಲರಾಗಿ ಹಲವಾರು ಭಾಷೆಗಳನ್ನು ಕಲಿತಿರುವುದು ಸಹಜ. ಶರಣರು ಸಂಸ್ಕೃತ ವಿರೋಧಿಗಳಲ್ಲ ; ಆದರೆ ಸಂಸ್ಕೃತದಲ್ಲಿ ದೇವರನ್ನು ಆರಾಧಿಸಿದರೆ ಮಾತ್ರ ಸಿಂಧು, ಮಾತೃಭಾಷೆಗಳಲ್ಲಿ ಆರಾಧಿಸಿದರೆ ಅದು ಅಸಿಂಧು ಎಂಬ ಭಾವವನ್ನು ಅಲ್ಲಗಳೆದರು ಮತ್ತು ಸಂಸ್ಕೃತವನ್ನು ದ್ವಿಜರ ಹೊರತು ಬೇರೆಯವರಿಗೆ ಕಲಿಸುವುದಿಲ್ಲ ಎಂಬ ಧೋರಣೆಯನ್ನು ವಿರೋಧಿಸಿದ್ದಾರೆ. ಸಂಸ್ಕೃತ ಪಾಂಡಿತ್ಯ ಪಡೆದ ಅನೇಕ ಸ್ವಾಮಿಗಳ ಹೆಸರನ್ನು, ಮಠಾಧೀಶರು ಸಂಸ್ಕೃತ ಪಾಠಶಾಲೆ ನಡೆಸುವುದನ್ನು ಚಿ.ಮೂ.ಯವರು ಹೆಮ್ಮೆಯಿಂದ ಉಲ್ಲೇಖಿಸಿದ್ದಾರೆ. ಇದೇನೂ ಅಭಿಮಾನದಿಂದ ಉಲ್ಲೇಖಿಸುವ ಸಂಗತಿ ಏನಲ್ಲ. ಕ್ರೈಸ್ತ ಮಿಷನರಿಗಳು ಮೊದಲು ತಮ್ಮ ಬೈಬಲನ್ನು, ತಮ್ಮ ಧರ್ಮವನ್ನು ಆಳವಾಗಿ ಅಧ್ಯಯನ ಮಾಡುತ್ತಾರೆ. ಜೊತೆ ಜೊತೆಗೆ ಸಂಸ್ಕೃತ, ಕನ್ನಡ ಇನ್ನಿತರ ಪ್ರಾದೇಶಿಕ ಭಾಷೆಗಳನ್ನು ಕಲಿಯುತ್ತಾರೆ. ಉದ್ದೇಶವು ದ್ವಿಮುಖವಾಗಿ ಇರುತ್ತದೆ. ಒಂದು, ತಮ್ಮ ಧರ್ಮವನ್ನು ಪ್ರಚಾರ ಮಾಡಬೇಕಾದರೆ ಅನ್ಯ ಧರ್ಮಗಳ ಗುಣದೋಷಗಳು ತಿಳಿದಿರಬೇಕು ಎಂಬುದು. ಕೆಲವು ಉದಾರವಾದಿ ಮತ ಪ್ರಚಾರಕರು ಅನ್ಯ ಮತ ಧರ್ಮಗಳಲ್ಲಿರುವ ಒಳ್ಳೆಯ ಅಂಶಗಳನ್ನು ತೌಲನಿಕವಾಗಿ ಗ್ರಹಿಸುವ ವಿಶಾಲ ಮನೋಭಾವ ಹೊಂದಿದವರೂ ಆಗಿರುತ್ತಾರೆ. ಇಂಥ ಘನ ಉದ್ದೇಶ ಏನೂ ಹೊಂದಿರದ ವೀರಶೈವ ಸ್ವಾಮಿಗಳು ಸಂಸ್ಕೃತದ ಮೊರೆಹೊಕ್ಕುದು ಅಲ್ಲಿರುವ ವರ್ಣಾಶ್ರಮ ವ್ಯವಸ್ಥೆ, ಬಹುದೇವತಾರಾಧನೆ, ಜಾತಿಪದ್ಧತಿ, ಜ್ಯೋತಿಷ್ಯ, ವಾಸ್ತು, ಪಂಚ ಸೂತಕ ಮುಂತಾದ ಕೊಳೆಯನ್ನು ಪುನಃ ತಂದು ಸಮಾಜದಲ್ಲಿ ಇಟ್ಟುಕೊಳ್ಳಲು ಮಾತ್ರ. ಹೀಗೆ ತಂದು ಹಾಕಿದ ಕೊಳೆಯಿಂದಲೇ ಮಠಾಧೀಶರು, ಶಾಸ್ತ್ರಿ, ಪುರೋಹಿತ ಪಂಡಿತರು ಲಿಂಗಾಯತ ಧರ್ಮ-ಸಮಾಜಗಳ ಶುಚಿತ್ವವನ್ನು ಕೆಡಿಸಿಹಾಕಿದ್ದು. ಇದರ ಬದಲು ಲಿಂಗಾಯತ ಧರ್ಮದ ಧಾರ್ಮಿಕ ಸಂವಿಧಾನ ವಚನ ಸಾಹಿತ್ಯದ ವಚನ ಪಾಠಶಾಲೆಗಳನ್ನು ತೆರೆದು ತಾವೂ ಚೆನ್ನಾಗಿ ಅಧ್ಯಯನ ಮಾಡಿ, ಇನ್ನಿತರರಿಗೂ ಮಾಡಿಸಿ, ನಂತರ ಸಂಸ್ಕೃತ ಓದಿದ್ದರೆ ಈ ಸ್ವಾಮಿಗಳು, ಶಾಸ್ತ್ರಿ, ಪಂಡಿತರನ್ನು ಪ್ರಶಂಸಿಸಬಹುದಿತ್ತು.

ಶ್ರೀ ಹಾನಗಲ್ ಕುಮಾರ ಸ್ವಾಮಿಗಳು ಎಲ್ಲೋ ಮೂಲೆಯಲ್ಲಿ ಬಿದ್ದಿದ್ದ ಹರಕು ಕೌದಿಯಂತಿದ್ದ ವೀರಶೈವ ಪದವನ್ನು ಹೊತ್ತು ತಂದು ಲಿಂಗಾಯತ ಧರ್ಮದ ಸಾರ್ವಭೌಮನಿಗೆ ಉಡಿಸಿ, ಅದರ ಭವ್ಯತೆ, ದಿವ್ಯತೆ ಹಾಳು ಮಾಡಿದ್ದಲ್ಲದೆ ಅಖಿಲ ಭಾರತ ವೀರಶೈವ ಮಹಾಸಭೆಯನ್ನು ಹುಟ್ಟುಹಾಕಿ ಎಂಥ ದೊಡ್ಡ ಗೊಂದಲ ಹುಟ್ಟಿಸಿ, ನಾನು ಯಾರು ? ಎಂದು ಪ್ರತಿಯೊಬ್ಬ ಲಿಂಗಾಯತನು ತನ್ನನ್ನು ತಾನೇ ಸಂದೇಹಿಸಿಕೊಳ್ಳುವಂತೆ ಮಾಡಿದರು. (ಶಿವ) ಲಿಂಗಧಾರಿ ಬ್ರಾಹ್ಮಣ ಸನ್ಯಾಸಿಯನ್ನು ಜಂಗಮರೆಂದು ಕರೆದ ವೀರಶೈವದ ನೆರವಿನಿಂದ ಜಾತ್ಯತೀತ ಲಿಂಗಾಯತ ಸಮಾಜದಲ್ಲಿ ಭಕ್ತ-ಮಾಹೇಶ್ವರ ಎಂಬ ಗುಂಪುಗಳನ್ನು ಸೃಷ್ಟಿಸಿದರು. ಇವರ ಸಂಚನ್ನು ಅರಿಯದ ಲಿಂಗಾಯತ ಸಮಾಜದ ಬೃಹತ್ ಭಾಗ ಎಂತಹ ಜಾತಿವಾದದ ಖೆಡ್ಡಾದಲ್ಲಿ ಬಿದ್ದಿತೆಂದರೆ ಅದು ಏಳಲಾರದಷ್ಟು ಪೆಟ್ಟು ತಿಂದು ನರಳುತ್ತಲಿದೆ. ಈ ಹಿನ್ನೆಲೆಯಲ್ಲಿ ಹಿಂದೂದ ಅಂಗವಾದ ವೀರಶೈವವು ಸಂಸ್ಕೃತ ಆಧಾರಿತ ಶೈವ ಪಂಥ ಎಂಬುದು ಸ್ಪಷ್ಟವಾಗಿರುವಾಗ ಇದನ್ನು ಸಮರ್ಥಿಸಲು ಚಿ.ಮೂ.ಯವರು ಹೆಣಗುವುದು ಅಗತ್ಯವೇ ಇರಲಿಲ್ಲ.

ಇನ್ನು ವೀರಶೈವ ಮಹಾಸಭೆಯಂತೂ ಯಾವುದೇ ಅಧ್ಯಯನ, ಚಿಂತನೆಗೆ ತಲೆಯೊಡ್ಡದ ಜನರ ಸಮೂಹ. ಒಮ್ಮೆ ಒಂದು ಮೇಕೆ ಮಣ್ಣಿನ ಮಡಿಕೆಯಲ್ಲಿ ಹಾಕಿ ಒಣಗಲು ಇಟ್ಟಿದ ಕಾಳಿಗೆ ಬಾಯಿ ಹಾಕಿತು. ಅದರ ತಲೆ ಆ ಮಡಿಕೆಯಲ್ಲಿ ಸಿಕ್ಕಿಹಾಕಿಕೊಂಡಿತು ಏನು ಮಾಡಬೇಕೀಗ ? ಶ್ರೀ ಭೀಮಣ್ಣ ಖಂಡ್ರೆಯಂತಹ ಬುದ್ಧಿವಂತರ ಸಲಹೆ ಕೇಳಿದಾಗ ಅವರು ಹೇಳಿದರು, ''ಕುತ್ತಿಗೆಯ ಬಳಿ ಕಡಿಯಿರಿ. ಮಡಿಕೆ ಕಡೆಗಾಗುತ್ತದೆ.'' ಎಂದು. ಅದರ ಬದಲು ಮಡಿಕೆಯನ್ನು ಒಡೆದಿದ್ದರೆ ನಷ್ಟವು ಸ್ವಲ್ಪ ಇರುತ್ತಿತ್ತು, ಮೇಕೆ ಉಳಿಯುತ್ತಿತ್ತು. ಕೆಲವೇ ಕೆಲವರ (ಪುರೋಹಿತ ವರ್ಗದ) ಧೂರ್ತತೆ ಮತ್ತು ಬಹುಜನ (ಭಕ್ತ ವರ್ಗದವರು) ರ ಮೂಢತೆಯಿಂದ ವೀರಶೈವ ಪದ ಎಂಬ ಒಂದು ಮಡಿಕೆಯೊಳಗೆ ಲಿಂಗಾಯತ ಸಮಾಜವೆಂಬ ಮೇಕೆಯ ತಲೆ ಸಿಕ್ಕಿಹಾಕಿಕೊಂಡಿತು. ವೀರಶೈವವನ್ನು ತೆಗೆದುಹಾಕಿದರೆ ಮುಗಿಯಿತು. ಅದು ಬಿಟ್ಟು ಲಿಂಗಾಯತ ಸಮಾಜವೆಂಬ ಬೃಹತ್ ಭಾಗವನ್ನೇ ಕಡಿಯಲು ಕೆಲವರು ಹೊರಟಿದ್ದಾರೆ.

ಚಿ.ಮೂ.ಯವರು ಘರ್ಷಣೆಗಳು ಎಂಬ ಶೀರ್ಷಿಕೆಯಡಿಯಲ್ಲಿ ಕೆಲವೊಂದು ಸಂಘರ್ಷ ಕುರಿತು ಬರೆದಿದ್ದಾರೆ. ಲಿಂಗಾಯತ-ವೀರಶೈವ ಬೇರೆ ಬೇರೆ ಎಂದು ಖಚಿತಪಡಿಸಿಕೊಂಡು ಓದಿದರೆ ಈ ಸಂಘರ್ಷಗಳು ಬೇಸರವನ್ನು ತರುವುದಿಲ್ಲ. ಹಿಂದುಗಳಲ್ಲಿನ ಓರ್ವ ದೇವತೆ ವಿಷ್ಣುವನ್ನು ವಿರೋಧಿಸಿ ಕಟ್ಟಾ ಶಿವಭಕ್ತರು, ಶಿವನನ್ನು ವಿರೋಧಿಸಿ ವಿಷ್ಣು ಭಕ್ತರು ಸಾಕಷ್ಟು ಸಂಘರ್ಷ ಮಾಡಿದುದನ್ನು ಭಾರತೀಯ ಧಾರ್ಮಿಕ ಚರಿತ್ರೆಯಲ್ಲಿ ಕಾಣುತ್ತೇವೆ. ಶಿವಲಿಂಗ, ವಿಷ್ಣುಮೂರ್ತಿ, ತೀರ್ಥಂಕರರ ಮೂರ್ತಿಗಳನ್ನು ಪರಸ್ಪರ ಒಡೆದುದು, ಸ್ಥಳಾಂತರಿಸಿದ್ದಕ್ಕೆ ಸಾಕಷ್ಟು ದಾಖಲೆಗಳಿವೆ. ಈ ಕೆಲಸ ಮಾಡಿದವರು ವೀರಶೈವ ಪಂಥೀಯರೇ ವಿನಾ ಲಿಂಗಾಯತ ಶರಣರಲ್ಲ. ಏಕೆಂದರೆ ಧರ್ಮಗುರು ಬಸವಣ್ಣನವರು ಅಸಮಾನತೆ, ಶೋಷಣೆಗಳ ಕೇಂದ್ರಗಳಾಗಿದ್ದ ದೇವಾಲಯಗಳನ್ನೇ ತಿರಸ್ಕರಿಸಿ, ದೇಹ ದೇವಾಲಯ ಮಾಡಿಕೊಳ್ಳುವ ಸೂತ್ರ ಕೊಟ್ಟಿದ್ದರಿಂದ ಬಸವ ಪಥಿಕರಾದ ಶರಣರು ಗುಡಿಗಳಿಗೆ ಹೋಗುವುದನ್ನು ಬಿಟ್ಟರೇ ವಿನಾ ಬೇರೆ ಯಾರ ಗುಡಿಗಳನ್ನೂ ವಶಪಡಿಸಿಕೊಳ್ಳಲು ಹೋಗಲಿಲ್ಲ. ಗುಡಿಗಳಿಗಾಗಿ ಕಾದಾಡಲೂ ಇಲ್ಲ. ಕೆಲವರು ಶರಣರ ಸಾಲಿನಲ್ಲಿ ಸೇರಿಸಲ್ಪಟ್ಟಿದ್ದು ಅವರು ಮೊದಲು ಜೈನ ಬಸದಿಗಳಲ್ಲಿ, ವೈಷ್ಣವ ದೇವಾಲಯಗಳಲ್ಲಿ ಶಿವಲಿಂಗಗಳನ್ನು ಸ್ಥಾಪಿಸಲು ಹೋರಾಟ ಮಾಡಿದ್ದನ್ನು ಕಾಣುತ್ತೇವೆ. ಉದಾಹರಣೆಗೆ ಏಕಾಂತದ ರಾಮಯ್ಯ, ಸೌರಾಷ್ಟ್ರದ ಆದಯ್ಯ ಮುಂತಾದವರು. ಇವರು ಲಿಂಗಾಯತ ಧರ್ಮ ಸ್ವೀಕಾರಕ್ಕೆ ಮೊದಲು ವೀರಶೈವರು, ಶುದ್ಧ ಶೈವರು ಆಗಿದ್ದಾಗ ಅಂಥ ಹೋರಾಟವನ್ನು ಮಾಡಿರಲು ಸಾಧ್ಯವಿದೆ. ಲಿಂಗಾಯತ ಶರಣರಾದ ಮೇಲೆ ಮಾಡಿರಲು ಸಾಧ್ಯವಿಲ್ಲ.

ಚಿ.ಮೂ.ಯವರು ಪರಳಿ ವೈಜನಾಥದ ಪೂಜಾರಿಕೆಯ ಹಕ್ಕಿನ ಬಗ್ಗೆ ನಡೆದ ಮೊಕದ್ದಮೆಯ ವಿಷಯ ಪ್ರಸ್ತಾಪಿಸಿದ್ದಾರೆ. ವೀರಶೈವರು ಜನಿವಾರವಿಲ್ಲದ ಶೂದ್ರರಾದ ಕಾರಣ ಅವರಿಗೆ ಪೂಜೆಯ ಹಕ್ಕಿಲ್ಲ ಎಂದು ಬ್ರಾಹ್ಮಣರು ವಾದಿಸಿದಾಗ ಇವರು ಹೋಗಿ ವಾದಿಸಿದರಂತೆ. ''ವೀರಶೈವರು ಲಿಂಗೀ ಬ್ರಾಹ್ಮಣರು, ಶಿವದಾರವೇ ಜನಿವಾರ '' ಎಂದು. ೧೯೩೬ರಲ್ಲಿ ಬೊಂಬಾಯಿಯ ಉನ್ನತ ನ್ಯಾಯಾಲಯವು, ''ವೀರಶೈವರು ಶೂದ್ರರಲ್ಲ, ಶ್ರೇಷ್ಠ ವರ್ಗದ ಲಿಂಗಿ ಬ್ರಾಹ್ಮಣರು ಅವರಿಗೆ ವೇದಾಧಿಕಾರವಿದೆ.'' ಎಂದು ತೀರ್ಪು ಕೊಟ್ಟಿತಂತೆ.

ಈ ಪ್ರಸಂಗ ಲಿಂಗಾಯತ ಧರ್ಮದ ಅವನತಿಯ ಸಂಕೇತ, ಹೆಮ್ಮೆ ಪಡುವ ವಿಷಯವಿಲ್ಲ. ಏಕೆಂದರೆ ಜನ್ಮತಃ ಯಾರೂ ಶ್ರೇಷ್ಠರಲ್ಲ, ಕನಿಷ್ಠರಲ್ಲ ಎಂದು ಲಿಂಗಾಯತ ಧರ್ಮವು ಸಾರಿ ಸಾರಿ ಹೇಳಿರುವಾಗ, ದೀಕ್ಷೆಯ ನಂತರ ಪೂರ್ವದ ವರ್ಣಜಾತಿಗಳನ್ನು ಮರೆಯಬೇಕು ಎಂದೇ ವಚನಶಾಸ್ತ್ರ ಬೋಧಿಸುವಾಗ ಲಿಂಗೀ ಬ್ರಾಹ್ಮಣರು ಎಂದು ಗುರುತಿಸಿ ಕೊಳ್ಳುವುದು ತೀವ್ರತರ ಧರ್ಮದ್ರೋಹ. ಇಷ್ಟು ಮಾತ್ರವಲ್ಲ, ಎದೆಯ ಮೇಲೆ ಹೃದಯಕ್ಕೆ ಸಮಾನಾಂತರದಲ್ಲಿ ಇಷ್ಟಲಿಂಗವನ್ನು ಧರಿಸಬೇಕೆಂದು ಲಿಂಗಾಯತ ಧರ್ಮವು ಹೇಳುತ್ತಿರುವಾಗ ಶಿವದಾರವನ್ನು ಜನಿವಾರದಂತೆ ತೋರಿಸಲು ಹೋಗಿ ಅದನ್ನೂ ಅಡ್ಡಡ್ಡ ಧರಿಸಿ ಸೊಂಟದ ಕೆಳಭಾಗಕ್ಕೆ ಬೀಳುವಂತೆ ಕರಡಿಗೆಯನ್ನು ಧರಿಸುವ ಕೆಟ್ಟ ಪದ್ಧತಿ ಲಿಂಗೀ ಬ್ರಾಹ್ಮಣವಾದಿಗಳಿಂದಲೇ ಆರಂಭವಾದಂತೆ ತೋರುತ್ತದೆ. ಲಿಂಗಾಯತ ಧರ್ಮಕ್ಕೆ, ಇದರ ಮುಖ್ಯ ಲಾಂಛನವಾದ ಇಷ್ಟಲಿಂಗಕ್ಕೆ ಅಗೌರವ ತೋರಿಸಿ ಇವರು ಸಾಧಿಸಿದ್ದಾದರೂ ಏನು ? ವೀರಶೈವ ಜಂಗಮರು ಲಿಂಗೀ ಬ್ರಾಹ್ಮಣರೆಂದು ಸಾಬೀತು ಮಾಡಿ ಪರಳಿಯ ವೈಜನಾಥ ದೇವಾಲಯದಲ್ಲಿ ಪೂಜಾರಿಕೆಯ ಹಕ್ಕು ಪಡೆದುದು. ಸ್ಥಾವರಲಿಂಗಾರ್ಚನೆಯನ್ನೇ ನಿಷೇಧಿಸಿದ ಇಷ್ಟಲಿಂಗಧಾರಕರು ಸ್ಥಾವರಲಿಂಗಪೂಜೆಯ ಹಕ್ಕನ್ನು ಕೇವಲ ವೀರಶೈವ ಪುರೋಹಿತ ವರ್ಗಕ್ಕೆ ಕೊಡಿಸಲು ಹೋರಾಟ ಮಾಡಿದುದು, ಎಷ್ಟು ಹಾಸ್ಯಾಸ್ಪದ ಎಂದು ಈಗ ಆಲೋಚಿಸಿದರೆ ಯಾರಿಗಾದರೂ ತಿಳಿಯದಿರದು.

ಲಿಂಗಾಯತ ಧರ್ಮದಲ್ಲಿ ನಿಷ್ಠೆಯಿಲ್ಲದ ವೀರಶೈವ ಜಂಗಮರಾದ ಚಿದಾನಂದ ಮೂರ್ತಿಯವರು ''ನಾನು ವಿದ್ಯಾರ್ಥಿಯಾಗಿದ್ದಾಗ ಬಾಡಿಗೆ ರೂಮ್ ಕೇಳಲು ಹೋದಾಗ ಮೈಸೂರಿನ ಬ್ರಾಹ್ಮಣರು ನನ್ನನ್ನು ಶೂದ್ರ ಎಂದು ಕರೆದುದು ನೆನಪಿದೆ. ಆ ಬಗ್ಗೆ ನಾನು ಕಹಿ ಭಾವನೆ ಇಟ್ಟುಕೊಂಡಿಲ್ಲ '' ಎಂದು ಹೇಳಿಕೊಂಡಿದ್ದಾರೆ. ಜನ್ನಿವಾರ ಧರಿಸದ ಲಿಂಗಾಯತರು ವರ್ಣಾಶ್ರಮ ವ್ಯವಸ್ಥೆಯ ಅಳತೆಗೋಲಿನಲ್ಲಿ ಶೂದ್ರರೇ ಆಗುತ್ತಾರೆ ಎಂಬ ಅರಿವು, ಜಾಗೃತಿ ಇಲ್ಲದ ಲಿಂಗೀ ಬ್ರಾಹ್ಮಣರಾದ ಚಿದಾನಂದ ಮೂರ್ತಿಯವರು ಸ್ವಾಭಿಮಾನಿಗಳಾಗಿದ್ದರೆ ತಾನೆ ಕಹಿ ಭಾವನೆ ತಾಳುವುದು ? ಇಂದು ದಲಿತರಲ್ಲಿ ಮೂಡಿರುವ ಸ್ವಾಭಿಮಾನ ಸಹಿತ ಲಿಂಗಾಯತ ಸಮಾಜದ ಕೆಲವು ಜನರಲ್ಲಿಲ್ಲ. ವರ್ಣಾಶ್ರಮ ಸಮಾಜದಲ್ಲಿರುವ ವೈಶ್ಯ, ಶೂದ್ರ ವರ್ಣದವರು ತಮ್ಮನ್ನು ೩ ಮತ್ತು ೪ನೇ ದರ್ಜೆಯ ಪ್ರಜೆಗಳನ್ನಾಗಿ ಮೇಲ್ದರ್ಜೆಯ ದ್ವಿಜ ವರ್ಣದವರು ನಡೆಸಿಕೊಂಡರೂ ವಿನೀತ ಭಾವದಿಂದ ವರ್ಣವ್ಯವಸ್ಥೆಯನ್ನು ಒಪ್ಪಿಕೊಂಡಂತೆ ಲಿಂಗಾಯತರಲ್ಲೂ ಸ್ವಾಭಿಮಾನ ಶೂನ್ಯವಾದ ವಿನೀತಭಾವವನ್ನು ಕೆಲವರು ಪ್ರದರ್ಶಿಸುತ್ತಾರೆ. ಪ್ರತಿಯೊಬ್ಬನಲ್ಲೂ ಸ್ವಾಭಿಮಾನದ ಕಿಡಿಯನ್ನು ಉದ್ದೀಪಿಸಲೆಂದೇ ಅಪ್ಪ ಬಸವಣ್ಣನವರು ನೀಡಿದ ಕ್ರಾಂತಿಕಾರಿ ಧರ್ಮದ ಮೂಲ ಉದ್ದೇಶಕ್ಕೆ ಇದು ಚ್ಯುತಿ ತರುತ್ತದೆ. ಹೀಗಾಗಿ ಇಂದು ನಿಜವಾದ ಲಿಂಗಾಯತರು ತಮ್ಮ ಧರ್ಮದ ನಿಜ ಸ್ವರೂಪವನ್ನು, ಅದರ ಕ್ರಾಂತಿಕಾರಿ ಮನೋಭಾವವನ್ನು, ಉದಾತ್ತ ಉದ್ದೇಶವನ್ನೂ ಅರಿತುಕೊಂಡು ವೇದಾಧಾರಿತ ಹಿಂದೂ ಧರ್ಮದಿಂದ ವೈದಿಕ/ಶೈವ ಆಧಾರಿತ ವೀರಶೈವ ಮತದಿಂದ ಬೇರೆಯೇ ಆಗಿ, ಸ್ಪಷ್ಟವಾಗಿ ಗುರುತಿಸಿಕೊಳ್ಳುವುದಕ್ಕೆ

ಬಯಸಿದರೆ, ಪ್ರಯತ್ನಿಸಿದರೆ ತಪ್ಪೇನಿಲ್ಲ. ಜಾತಿ ಪದ್ಧತಿ, ವರ್ಣ ವ್ಯವಸ್ಥೆ, ಬಹುದೇವತೋಪಾಸನೆ ಮೂಢನಂಬಿಕೆ ನಿರಾಕರಿಸಿರುವ ಸಮತಾವಾದ, ಏಕದೇವೋಪಾಸನೆಯಿಂದ ಕೂಡಿದ ವೈಶಿಷ್ಟ್ಯಪೂರ್ಣವಾದ ಪ್ರಗತಿಪರ ದೃಷ್ಟಿಕೋನದ ಲಿಂಗಾಯತ ಧರ್ಮದ ಇರುವಿಕೆಯ ಬಗ್ಗೆ ಇಂದು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಮಾಡುವುದು ಅಗತ್ಯವಿದೆ.

ವೀರಶೈವವು ಹಿಂದುದ ಅಂಗ

ವೀರಶೈವವು ಹಿಂದು ಧರ್ಮದ ಅಂಗ ಎಂಬುದನ್ನು ಸಿದ್ಧಪಡಿಸಲು ಡಾ|| ಚಿ.ಮೂ.ಯವರು ಸಾಕಷ್ಟು ಆಧಾರವನ್ನು ಕೊಟ್ಟಿದ್ದಾರೆ. ಅವರ ಅಭಿಪ್ರಾಯಕ್ಕೆ ನಮ್ಮದೂ ಪೂರ್ಣ ಸಮ್ಮತಿ ಇದೆ. ಆದ್ದರಿಂದ ವೀರಶೈವ ಮಹಾಸಭೆಯವರು ''ವೀರಶೈವವು ಹಿಂದುದ ಅಂಗವಲ್ಲ, ಸ್ವತಂತ್ರ ಧರ್ಮ ಎಂದು ಪ್ರತಿಪಾದಿಸುವುದನ್ನು ಮತ್ತು ವೀರಶೈವ ಲಿಂಗಾಯತ ಎರಡೂ ಒಂದೇ ಎಂಬುದನ್ನು, ಜನಗಣತಿಯಲ್ಲಿ ವೀರಶೈವ-ಲಿಂಗಾಯತ ಎಂದಾಗಲೀ, ವೀರಶೈವ ಎಂದಾಗಲೀ ಬರೆಸಿ'' ಎಂದು ಹೇಳುವುದನ್ನು ತೀವ್ರವಾಗಿ ಖಂಡಿಸುತ್ತೇವೆ. ಈ ದ್ವಂದ್ವ ನೀತಿಯನ್ನು ವೀರಶೈವ ಮಹಾಸಭೆಯವರು ಕೈಬಿಡಬೇಕೆಂದು ಖಂಡತುಂಡವಾಗಿ ಹೇಳಲು ಬಯಸುತ್ತೇವೆ.

ಲಿಂ|| ಎಂ.ಆರ್.ಸಾಖರೆ, ಲಿಂ|| ಹಿರೇಮಲ್ಲೂರು ಈಶ್ವರನ್ ಮುಂತಾದವರು ಯಾರು ಲಿಂಗಾಯತ ಧರ್ಮವನ್ನು ಸರಿಯಾಗಿ ಅರಿತಿದ್ದಾರೋ ಅವರು ಬಸವಣ್ಣನವರಿತ್ತ ಲಿಂಗಾಯತ ಧರ್ಮವು ಸ್ವತಂತ್ರ ಧರ್ಮ ಎಂದು ಪ್ರತಿಪಾದಿಸುತ್ತಾರೆ. ಚಿ.ಮೂ.ಯವರು ''ಹಿಂದು ಧರ್ಮವೆಂಬುದೇ ಇಲ್ಲ ; ಇದು ದೇಶ ವಾಚಕವಾಗಿ ಬಂದ ಪದ'' ಎಂದಿದ್ದಾರೆ. ಇದು ಎಲ್ಲರಿಗೂ ಗೊತ್ತಿರುವ ವಿಷಯ. ೨೦೦೧ನೆಯ ಇಸವಿಯ ಜನಗಣತಿ ಧಾವಿಸುತ್ತಿದೆ. ಹಿಂದುದ ವ್ಯಾಖ್ಯಾನ ಮಾಡುತ್ತ ಕೂತರೆ ಇನ್ನು ೧೦ ವರ್ಷಗಳಾದರೂ ಸಮಸ್ಯೆ ಬಗೆಹರಿಯದು. ಈಗ ನೇರವಾಗಿ ಕೇಳಬೇಕಾದ, ಉತ್ತರಿಸಬೇಕಾದ ಪ್ರಶ್ನೆ ಇದು. ಭಾರತ ಸರಕಾರದ ಜನಗಣತಿ ಇಲಾಖೆಯು ೬ ಧರ್ಮ(ಮತ)ಗಳನ್ನು ಹೆಸರಿಸಿದೆ.

೧. ಹಿಂದು ೨. ಬೌದ್ಧ. ೩. ಜೈನ್. ೪. ಸಿಖ್. ೫. ಕ್ರೈಸ್ತ ೬. ಮುಸಲೀಮ್. ಹೆಸರಿಸದಿದ್ದರೂ ಅಸ್ತಿತ್ವದಲ್ಲಿರುವ ಧರ್ಮಗಳೆಂದರೆ ಯಹೂದಿ, ಪಾರ್ಸಿ, ಲಿಂಗಾಯತ ಧರ್ಮಗಳು. ಇನ್ನು ಉಳಿದ ಜನರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಲ್ಲಿ ಸೇರುವರು. ಲಿಂಗಾಯತರು ಯಾವುದಾದರೊಂದು ಧರ್ಮದ ಕಕ್ಷೆಯೊಳಗೆ ಸೇರಬೇಕೆ ? ಹಿಂದು ಧರ್ಮದೊಳಗಣ ಒಂದು ಜಾತಿಯಾಗಬೇಕೇ ? ಹಿಂದು ಒಂದು ಧರ್ಮವಲ್ಲ ಎಂದು ಡಾ|| ಚಿ.ಮೂ, ಹಿಂದು ಮಹಾಸಭಾ, ವಿಶ್ವಹಿಂದು ಪರಿಷತ್, ನಾವೂ ಸಹ ಹೇಳುತ್ತಿದ್ದುದು ನಿಜ. ಆದರೆ ಜನಗಣತಿ ಇಲಾಖೆ ಹಿಂದು ಒಂದು ಧರ್ಮ ಎಂದು ಸ್ಪಷ್ಟವಾಗಿ ಘೋಷಿಸಿದೆ. ವೇದಾಗಮಗಳನ್ನೊಪ್ಪದ, ತ್ರಿಮೂರ್ತಿಗಳಲ್ಲಿ ಯಾರನ್ನೂ ಆರಾಧಿಸದ, ಜಾತಿಪದ್ಧತಿ ಒಪ್ಪದ, ಏಕದೇವೋಪಾಸನೆ-ಸಮಾನತೆ ಪ್ರತಿಪಾದಿಸುವ ಲಿಂಗಾಯತವು ಅದೆಂತು ತನ್ನ ಮೂಲಭೂತ ವಿಚಾರಧಾರೆಗೆ ವಿರುದ್ಧವಾದ ಹಿಂದು ಧರ್ಮದ ಒಂದು ಅಂಗವಾಗಿರಲು ಸಾಧ್ಯ ? ಒಂದು ವೇಳೆ ಅಜ್ಞಾನದಿಂದ ಉಳಿದರೆ ಯಜ್ಞೋಪವೀತವಿಲ್ಲದ ಕಾರಣ ಲಿಂಗಾಯತರು ಶೂದ್ರ ವರ್ಣದಲ್ಲಿ ಸೇರ್ಪಡೆಯಾಗಬೇಕಾದೀತು.

ಧರ್ಮದಲ್ಲೊಂದು ಧರ್ಮವಿರಲು ಸಾಧ್ಯವೆ ?

ತತ್ತ್ವಜ್ಞಾನ, ತರ್ಕಜ್ಞಾನದ ಸಂಸ್ಕಾರವಿಲ್ಲದೆ ಮಾತನಾಡುವ ಚಿ.ಮೂ.ಯವರು ವೀರಶೈವವನ್ನು ಧರ್ಮ ಎನ್ನುತ್ತಾರೆ. ಹಿಂದುವನ್ನೂ ಧರ್ಮ ಎನ್ನುತ್ತಾರೆ. ವೀರಶೈವವು ಹಿಂದೂದ ಅಂಗವೆನ್ನುತ್ತಾರೆ.

ಅವರು ಯಾವ ಪರಿಕಲ್ಪನೆ (Concept) ಯನ್ನೂ ವಿವರಿಸಲು ಯತ್ನಿಸುವುದಿಲ್ಲ.

ಒಂದು ರಾಷ್ಟ್ರದಲ್ಲಿ ಇನ್ನೊಂದು ರಾಷ್ಟ್ರವಿರದು
ಒಂದು ರಾಜ್ಯದಲ್ಲಿ ಇನ್ನೊಂದು ರಾಜ್ಯವಿರದು
ಒಂದು ಜಿಲ್ಲೆಯಲ್ಲಿ ಇನ್ನೊಂದು ಜಿಲ್ಲೆ ಇರದು
ಅದೇ ರೀತಿ ಒಂದು ಧರ್ಮದಲ್ಲಿ ಇನ್ನೊಂದು ಧರ್ಮ ಇರದು.

ಹಿಂದು ಒಂದು ಧರ್ಮವಾದರೆ ಆಗ ಚಿ.ಮೂ. ಯವರ ವೀರಶೈವವು ಒಂದು ಮತ ಅಥವಾ ಪಂಥವಾಗಿ ಉಳಿಯಬೇಕು. ವೀರಶೈವವು ಒಂದು ಧರ್ಮವೇ ಆದರೆ ಅದಕ್ಕೆ ಸ್ವತಂತ್ರವಾಗಿ ಬದುಕಲಿಕ್ಕೆ ಕೆಲವೊಂದು ಲಕ್ಷಣಗಳು ಬೇಕು. ಈ ಹಿನ್ನೆಲೆಯಿಂದ ವೀರಶೈವವು ಸ್ವಾವಲಂಬಿ ಧರ್ಮವಾಗುವ ಲಕ್ಷಣ ಹೊಂದಿರದ್ದರಿಂದ ಕೆಲವು ಸಾಹಿತಿಗಳು, ಸ್ವಾಮಿಗಳು ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯಕ್ಕೆ ಗಂಟು ಬೀಳುತ್ತಾರೆ. ಇವೆರಡೂ ಅಮವಾಸ್ಯೆ-ಹುಣ್ಣಿಮೆಗಳಂತೆ. ಅಪ್ರಾಮಾಣಿಕ ಕಲಬೆರಕೆ ಮಾಡಲು ಇನ್ನು ನಾವುಗಳು ಅಂದರೆ ಜಾಗೃತ ಬಸವ ತತ್ವಾನುಯಾಯಿಗಳು ಅವಕಾಶ ಕೊಡಲು ಸಾಧ್ಯವಿಲ್ಲ.

ಶ್ರೀ ಬಾಲಗಂಗಾಧರ ತಿಲಕರು ಹಿಂದು ಧರ್ಮದ ಲಕ್ಷಣಗಳನ್ನು ಹೀಗೆ ಹೇಳಿರುವುದಾಗಿ ಚಿ.ಮೂ. ಬರೆದಿದ್ದಾರೆ.

೧. ವೇದಗಳನ್ನು ಗೌರವದಿಂದ ಕಾಣುವುದು
೨. ಮೋಕ್ಷಕ್ಕೆ ಹಲವು ಮಾರ್ಗಗಳಿವೆ ಎಂಬ ವಿಶ್ವಾಸ
೩. ಸತ್ಯ ಸಾಕ್ಷಾತ್ಕಾರಕ್ಕಾಗಿ ಆರಾಧಿಸುವ ದೈವಗಳು ಹಲವು ಇವೆ ಎಂಬ ಬಗ್ಗೆ ನಂಬಿಕೆ

ಈ ಮೂರು ಅಂಶಗಳನ್ನು ವೀರಶೈವವು ಒಪ್ಪಬಹುದೇ ವಿನಾ ಲಿಂಗಾಯತ ಧರ್ಮವಲ್ಲ. ಇದಕ್ಕೆ ಆಧಾರವಾಗಿ ಕೆಳಕಂಡ ವಚನಗಳನ್ನು ಉಲ್ಲೇಖಿಸಬಹುದು.

೧. ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕದ ಬೆನ್ನ ಬಾರನೆತ್ತುವೆ
ಆಗಮದ ಮೂಗ ಕೊಯಿವೆ ನೋಡಯ್ಯಾ
ಮಹಾದಾನಿ ಲಿಂಗದೇವಾ,
ಮಾದರ ಚನ್ನಯ್ಯನ ಮನೆಯ ಮಗ ನಾನಯ್ಯಾ. -ಬ.ವ.ದೀ 714

೨. ನಮ್ಮ ನಡಾವಳಿಗೆ ನಮ್ಮ ಪುರಾತರ ನುಡಿಯೆ ಇಷ್ಟವಯ್ಯಾ.
ಸ್ಮೃತಿಗಳು ಸಮುದ್ರದ ಪಾಲಾಗಲಿ ;
ಶ್ರುತಿಗಳು ವೈಕುಂಠವ ಸೇರಲಿ ;
ಪುರಾಣಗಳು ಅಗ್ನಿಯ ಸೇರಲಿ ;
ಆಗಮಗಳು ವಾಯುವ ಹೊಂದಲಿ.
ಎಮ್ಮ ನುಡಿ, ಕಪಿಲಸಿದ್ಧಮಲ್ಲಿಕಾರ್ಜುನ ಮಹಾಲಿಂಗದ
ಹೃದಯದೊಳು ಗ್ರಂಥಿಯಾಗಿರಲಿ. -ಸಿ.ವ.857

೩. ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮಬಾರದಯ್ಯಾ
ಎಮ್ಮ ವಚನದ ನೂರೆಂಟರಧ್ಯಯನಕ್ಕೆ

ಶತರುದ್ರೀಯ ಯಾಗ ಸಮಬಾರದಯ್ಯಾ
ಎಮ್ಮ ವಚನದ ಸಾಸಿರಪಾರಾಯಣಕ್ಕೆ
ಗಾಯತ್ರಿ ಲಕ್ಷಜಪ ಸಮಬಾರದಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ. -ಸಿ.ವ.856

ಅನೇಕ ದೈವಗಳ, ದೇವತೆಗಳ ನಂಬಿಕೆ, ಆರಾಧನೆಯನ್ನು ಲಿಂಗಾಯತ ಧರ್ಮವು ಸ್ಪಷ್ಟವಾಗಿ ತಿರಸ್ಕರಿಸಿ, ಧರ್ಮಪಿತರು ದೇವನು ಒಬ್ಬ ; ಕ್ಷುದ್ರ ದೈವಂಗಳ ಆರಾಧನೆ ಸಲ್ಲದು ಎನ್ನುತ್ತಾರೆ.

೧. ಸ್ವಾಮಿ ನೀನು ಶಾಶ್ವತ ನೀನು
ಎತ್ತಿದೆ ಬಿರುದ ಜಗವೆಲ್ಲವರಿಯಲು
ಮಹಾದೇವ, ಮಹಾದೇವ, ಮಹಾದೇವ
ಇಲ್ಲಿಂದ ಮುಂದೆ ಶಬ್ದವಿಲ್ಲ
ಪಶುಪತಿ ಜಗಕ್ಕೇಕೋದೇವ
ಸ್ವರ್ಗ ಮರ್ತ್ಯ ಪಾತಾಳದೊಳಗೆ
ಒಬ್ಬನೇ ದೇವ ಲಿಂಗದೇವ. -ಬ.ವ.ದೀ 525

೨. ಬಿದಿರೆಲೆಯ ಮೆಲಿದಡೆ ಮೆಲಿದಂತಲ್ಲದೆ
ರಸವನು ಹಡೆಯಲು ಬಾರದು
ಮಳಲ ಹೊಸೆದಡೆ ಹೊಸೆದಂತಲ್ಲದೆ
ಸರವಿಯ ಹಡೆಯಲು ಬಾರದು
ನೀರ ಕಡೆದಡೆ ಕಡೆದಂತಲ್ಲದೆ,
ಬೆಣ್ಣೆಯ ಹಡೆಯಲು ಬಾರದು
ನಮ್ಮ ಲಿಂಗದೇವನಲ್ಲದೆ ಅನ್ಯ ದೈವಕ್ಕೆರಗಿದಡೆ
ಹೊಳ್ಳ ಕುಟ್ಟಿ ಕೈ ಹೊಟ್ಟಾದಂತೆ ಆಯಿತ್ತಯ್ಯಾ. -ಬ.ವ.ದೀ 551

"ಮೋಕ್ಷಕ್ಕೆ ಹಲವು ಮಾರ್ಗಗಳಿವೆ ಎಂದು ಹೇಳಿ, ಯಾವುದೇ ದಾರಿಯಲ್ಲಿ ಹೋದರೂ ಗುರಿ ಮುಟ್ಟಬಹುದು" ಎಂಬುದನ್ನು ನಿರಾಕರಿಸಿ ಬಸವಾದಿ ಪ್ರಮಥರು ಅರ್ಥವಿಲ್ಲದೆ ಮಾಡುವ ಭಕ್ತಿ ವ್ಯರ್ಥ ಎನ್ನುವರು.

ಆಳಿವುತ್ತ ಆಳಿವುತ್ತ ಬಳಲುವರಲ್ಲದೆ, ಕೊಳಗ ಬಳಲುವುದೆ ?
ನಡೆವುತ್ತ ನಡೆವುತ್ತ ಬಳಲುವರಲ್ಲದೆ, ಬಟ್ಟೆ ಬಳಲುವುದೆ ?
ಶ್ರವವ ಮಾಡುತ್ತ ಮಾಡುತ್ತ ಬಳಲುವರಲ್ಲದೆ, ಕೋಲು ಬಳಲುವುದೆ ?
ನಿಜವನರಿಯದ ಭಕ್ತ ಬಳಲುವನಲ್ಲದೆ, ಲಿಂಗ ಬಳಲುವುದೆ ?
ಲಿಂಗದೇವಾ, ಅರಸರಿಯದ ಬಿಟ್ಟಿಯೋ ! -ಬ.ವ.ದೀ 115

ವ್ಯಕ್ತಿಯು ಸತ್ಯವನ್ನು, ಸತ್ಯ ಸ್ವರೂಪನಾದ ಒಬ್ಬ ದೇವನನ್ನು ಗುರುತಿಸಿಕೊಂಡ ಬಳಿಕ ಭಿನ್ನ ವಿಚಾರದವರನ್ನು ಪರಿವರ್ತಿಸಲು ಪ್ರಯತ್ನ ಮಾಡಬೇಕು ಎನ್ನುತ್ತಾರೆ.

ಚಿ.ಮೂ. ಯವರ ವಂಚನೆ

ಸಂಶೋಧನೆ ಎಂದರೆ ಸಮ್ಯಕ್-ಶೋಧನೆ ; ಸತ್ಯ ಶೋಧನೆ. ಒಬ್ಬ ವ್ಯಕ್ತಿ ದಾರಿಯಲ್ಲಿ ನಿರ್ಮಲ ಮನಸ್ಸಿನಿಂದ ಸಾಗುವಾಗ ತಾನು ಕಂಡುಂಡ ಸತ್ಯವನ್ನು ಹೇಳುತ್ತಾ ಹೋದಾಗ ಅದು ಪ್ರಾಮಾಣಿಕ ಶೋಧನೆಯಾಗುವುದು. ಅದು ಬಿಟ್ಟು ತಾನು ಹುಟ್ಟಿದ ಜಾತಿ, ತನಗೆ ಕೆಲವು ಸೌಲಭ್ಯ ನೀಡುವವರು ಸನ್ಮಾನ ಮಾಡುವವರು-ಮುಂತಾದವರನ್ನು ಓಲೈಸಲು, ಸಂತೈಸಲು ಕೆಲವನ್ನು ಹೇಳುವುದು, ಕೆಲವನ್ನು

ಮುಚ್ಚಿಡುವುದು ಸಂಶೋಧನೆಯಾಗದು. ಚಿ.ಮೂ.ಯವರಲ್ಲಿ ಕೆಲವಾರು ವರ್ಷಗಳ ಹಿಂದೆ ಇದ್ದ ಪ್ರಾಮಾಣಿಕತೆ ಸಹ ಮಾಯವಾಗುತ್ತಿದೆ. ಶಿವೈಕ್ಯ ಡಾ|| ಜ.ಚ.ನಿ ಜೀವನ ಪರ್ಯಂತರ ಶರಣರ ಸಾಹಿತ್ಯ-ಸಂದೇಶಗಳನ್ನು ಅಭ್ಯಸಿಸಿ, ಬರೆದು ಕೀರ್ತಿವಂತರಾಗಿ ಕಡೆಕಡೆಯಲ್ಲಿ ಪಂಚಾಚಾರ್ಯ ಪಿತ್ತ ತಲೆಗೇರಿ, ಇಟ್ಟೆಯ ಹಣ್ಣ ತಿಂದ ನರಿ ಸೃಷ್ಟಿ ತಿರುಗಿತೆಂಬಂತೆ ಏನೇನೋ ಪ್ರಲಾಪಿಸುತ್ತ ಇಡೀ ಜೀವನ ಪರ್ಯಂತರ ಗಳಿಸಿಕೊಂಡ ಶರಣ ತತ್ವಾಭಿಮಾನಿಗಳನ್ನು ಕಳೆದುಕೊಳ್ಳುವಂತೆ ಅಪ್ರಾಮಾಣಿಕ ಸಾಹಿತ್ಯ ರಚಿಸತೊಡಗಿದರು. ಅವರ ಬಗ್ಗೆ ಅಭಿಮಾನವಿದ್ದವರೆಲ್ಲರೂ (ನಮ್ಮನ್ನು ಒಳಗೊಂಡು) ಮಮ್ಮಲ ಮರುಗುವಂತಾಯಿತು. ಈಗ ಚಿದಾನಂದ ಮೂರ್ತಿಯವರು ಆ ಸ್ಥಾನಕ್ಕೆ ಬರತೊಡಗಿದ್ದಾರೆ. ಪೂರ್ವನಿರ್ಧಾರಿತ ಅಭಿಪ್ರಾಯಗಳಿಂದ ವಿಷಯಗಳನ್ನು ಆಯ್ದುಕೊಂಡು ಸೃಷ್ಟಿಸಿದ ಸುಳ್ಳುಗಳನ್ನು ನೋಡಿದರೆ ನಮ್ಮ ಸಾಹಿತಿಗಳ ಕಪಟತನ ಬಯಲಾಗುತ್ತದೆ.

೧. ಗೋಳಾಕಾರದ ಇಷ್ಟಲಿಂಗ ರಚನೆ ಧರ್ಮಗುರು ಬಸವಣ್ಣನವರಿಂದ ಪ್ರಾರಂಭವಾಯಿತೆಂಬುದನ್ನು ಮರೆಮಾಚಿ, ಈ ಧರ್ಮ ಎಂದೋ ಇತ್ತು ಎಂದು ಕಗ್ಗಗಳನ್ನು ರಚಿಸಿದರು.
೨. ಬಸವಣ್ಣನವರಿಗೆ ಯಾರೂ ವ್ಯಕ್ತಿ ಗುರು ಇಲ್ಲ ಎಂಬುದನ್ನು ಮರೆ ಮಾಚಿ ಜಾತವೇದ ಮುನಿಗಳನ್ನು ಸೃಷ್ಟಿಸಿದರು.
೩. ಬಸವಣ್ಣನವರ ಕಾಲದಲ್ಲಿ ಕೂಡಲ ಸಂಗಮವನ್ನು ಇನ್ನೂ ಪ್ರವೇಶಿಸಿರದ ವೀರಶೈವವನ್ನು ಎಳೆದು ತಂದು ಕೃತ್ರಿಮ ಸಾಹಿತ್ಯ ರಚಿಸಿ ಶುದ್ಧ ಶೈವ ಕಪ್ಪಡಿ ಕ್ಷೇತ್ರವು ವೀರಶೈವದ ನೆಲೆಯಾಗಿತ್ತು ಎಂದು ಸುಳ್ಳು ಹೆಣೆದರು.

ಅದೇ ರೀತಿ ನಯವಾದ ಭಾಷೆಯಲ್ಲಿ ಚಿದಾನಂದ ಮೂರ್ತಿಯವರು ಹೆಣೆದಿರುವ ಈ ಸುಳ್ಳನ್ನು ವಿಶ್ಲೇಷಿಸೋಣ.

''ಹಿಂದೂ ಧರ್ಮದಂತೆಯೇ ..... ವಿವೇಕದ ಮಾರ್ಗ.'' (ಇದೇ ಸಂಚಿಕೆಯ ಪುಟ ೨೫ ನೋಡಿ)

ಹಿಂದು ಧರ್ಮ ವೃಕ್ಷವಲ್ಲಿ ಶೈವ-ವೈದಿಕ ಎರಡು ಪ್ರಭೇದಗಳೆಂಬ ಕೊಂಬೆಗಳು ; ಆ ಶೈವದ ಶಾಖೆಗಳಲ್ಲಿ ಒಂದು ವೀರಶೈವ. ಲಿಂಗಾಯತವು ಬೇರಾವುದೇ ವೃಕ್ಷದ ಕೊಂಬೆಯಲ್ಲ, ಟಿಸಿಲಲ್ಲ. ಸ್ವತಂತ್ರ ವೃಕ್ಷ, ಇದು ವಚನ ಶಾಸ್ತ್ರಾಧಾರಿತ. ಹೀಗಿರುವಾಗ ಲಿಂಗಾಯತ ಧರ್ಮವನ್ನು ವೀರಶೈವದೊಳಗಣ ಒಂದು ಪ್ರಭೇದವಾಗಿ ಮಾಡುವ ಧೂರ್ತ ಸಂಚುಗಾರರು ಚಿ.ಮೂ.ಯವರು. ಇಂಥವರನ್ನು ಇಷ್ಟು ದಿವಸ ಕಾಲ ವಚನ ಸಾಹಿತ್ಯ ಪ್ರತಿಪಾದಕರೆಂದು, ವಿಶ್ಲೇಷಕರೆಂದು, ಅವರ ಸಾಹಿತ್ಯ ಮಾನ್ಯವೆಂದು ನಂಬಿದ್ದು ಎಂಥಾ ವಿಪತ್ಕಾರಕ !

ಪೂರ್ವಾಗ್ರಹ ಪೀಡಿತ ಕೆಲವು ಸಾಹಿತಿಗಳ ಬರಹಗಳನ್ನೋದಿ ಮೊದಲಿಗೆ ನಾನು ಪಂಚಾಚಾರ್ಯವಾದವೆಂದರೆ ಕ್ರೈಸ್ತರಲ್ಲಿ ಕೆಥೋಲಿಕ್ ಪಂಥದಂತೆ, ವಿರಕ್ತವಾದವೆಂದರೆ ಕ್ರೈಸ್ತರಲ್ಲಿ ಪ್ರೊಟೆಸ್ಟಂಟರಂತೆ ಎಂದು ತಪ್ಪಾಗಿ ತಿಳಿದುದುಂಟು. ಸ್ವಯಂ ಅಧ್ಯಯನ, ಸ್ವಯಂ ವಿಶ್ಲೇಷಣೆಯಿಂದ ಕಂಡುಕೊಂಡ ಸತ್ಯವೆಂದರೆ ಈ ಎರಡೂ ಪೂರ್ಣ ಬೇರೆ ಬೇರೆಯ ಎಂಬುದನ್ನು. ವೈದಿಕ/ಶೈವಗಳು ಯಹೂದಿ ಧರ್ಮದಂತೆ ; ಲಿಂಗಾಯತವು ಕ್ರೈಸ್ತದಂತೆ, ಕೆಥೊಲಿಕ್-ಪ್ರಾಟಸ್ಟಂಟರಲ್ಲಿ ಕೆಲವೊಂದು ವ್ಯತ್ಯಾಸಗಳಿದ್ದರೂ ಏಸುಕ್ರಿಸ್ತ ಧರ್ಮಗುರು, ಬೈಬಲ್ ಧಾರ್ಮಿಕ ಸಂಹಿತೆ ಎನ್ನುವುದರಲ್ಲಿ ಯಾವ ಮತಭೇದವೂ ಇಲ್ಲ. ಆದರೆ ಇಲ್ಲಿ ಹಾಗಲ್ಲ, ವೀರಶೈವವು ವೇದ-ಆಗಮ ಆಧಾರಿತ, ಲಿಂಗಾಯತವು ವಚನ ಶಾಸ್ತ್ರ ಆಧಾರಿತ ; ವೀರಶೈವವು ಶಿವೋಪಾಸಕ ಪಂಥ (cult), ಲಿಂಗಾಯತವು ದೇವೋಪಾಸಕ ಧರ್ಮ, ವೀರಶೈವಕ್ಕೆ ಒಬ್ಬ ಗುರು ಅಥವಾ ಸ್ಥಾಪಕನಿಲ್ಲ ; ಲಿಂಗಾಯತವು ಬಸವಣ್ಣನವರೆಂಬ ಸ್ಥಾಪಕರನ್ನು ಹೊಂದಿದೆ. ವೀರಶೈವಕ್ಕೆ ಆಧಾರ ಆಗಮಗಳು, ಶ್ರೀಕರ ಭಾಷ್ಯ ಮುಂತಾದ ಸಂಸ್ಕೃತ ಸಾಹಿತ್ಯ ; ಲಿಂಗಾಯತಕ್ಕೆ ಅಚ್ಚ ಕನ್ನಡದಲ್ಲಿರುವ ವಚನ ಸಾಹಿತ್ಯವೇ ಆಧಾರಶಾಸ್ತ್ರ.

''ಉತ್ತರ ಕರ್ನಾಟಕದಲ್ಲಿ ವೀರಶೈವರು ಅಗ್ನಿಪೂಜೆ ನಿಷೇಧಿಸಿದ್ದಾರೆ. ದಕ್ಷಿಣ ಕರ್ನಾಟಕದವರು ಗೃಹಪ್ರವೇಶ ಮುಂತಾದ ಸಂದರ್ಭದಲ್ಲಿ ಹೋಮ ಹವನಾದಿ ಮಾಡುತ್ತಾರೆ'' ಎನ್ನುತ್ತಾರೆ. ಚಿ.ಮೂ. ಇದು ವಂಚನೆಯ ಪರಮಾವಧಿ. ಲಿಂಗಾಯತ ಧರ್ಮದ ಸ್ಥಾಪಕ ಬಸವಣ್ಣನವರು ಅಗ್ನಿಪೂಜೆ ನಿಷೇಧಿಸಿದ್ದಾರೆ, ''ಎನ್ನವರಾದರೆ ಜನ್ನಕ್ಕೆ ನಡೆವರೆ ?'' ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಹೀಗಾಗಿ ಉತ್ತರ ಕರ್ನಾಟಕದ ಲಿಂಗಾಯತ ಸಮಾಜದಲ್ಲಿ ಅಗ್ನಿಪೂಜೆ, ಹೋಮ-ಹವನ, ಪಂಚ ಸೂತಕಗಳು ಆಚರಣೆಯಲ್ಲಿಲ್ಲ. ಹಳೆ ಮೈಸೂರಿನ ಲಿಂಗಾಯತರು ಇಷ್ಟಲಿಂಗಧಾರಿಗಳಾಗಿದ್ದರೂ ವೈದಿಕ ಧರ್ಮದ ಅಷ್ಟಪದಿ ಹಿಡಿತದಲ್ಲಿ ಸಿಕ್ಕಿ ಹೋಮ-ಹವನ, ಪಂಚ ಸೂತಕ ಆಚರಣೆ ಮುಂತಾದ ಸ್ವ(ಲಿಂಗಾಯತ)ಧರ್ಮ ವಿರೋಧಿ ಕೆಲಸ ಮಾಡುತ್ತಾರೆ. ''ಈ ಧರ್ಮವು ಹೀಗೆ ಹೇಳುತ್ತದೆ. ಆದರೆ ದಕ್ಷಿಣ ಕರ್ನಾಟಕದ ಲಿಂಗಾಯತರು ತಮ್ಮ ಧರ್ಮಕ್ಕೆ ವಿರುದ್ಧವಾಗಿ ಆಚರಿಸುತ್ತಾರೆ '' ಎಂದು ಪ್ರಾಮಾಣಿಕವಾಗಿ ಚಿ.ಮೂ.ಯವರು ಹೇಳದೆ, 'ಅವರು ಹಾಗೆ ಮಾಡುತ್ತಾರೆ, ಇವರು ಹೀಗೆ ಮಾಡುತ್ತಾರೆ, ಎರಡೂ ಸಹ್ಯವೇ ; ಎಂದಿರುವುದು ವಂಚನೆಯ ಪರಮಾವಧಿ.

ಅದೇ ರೀತಿ, ''ವೀರಶೈವದ ಒಂದು ಭಾಗವು ದೇವಾಲಯಗಳ ಶಿವಲಿಂಗಗಳಿಂದ ಮೂಡಿ ಬಂದ ಆಚಾರ್ಯರೇ ಸ್ಥಾಪಕರು ಎಂದು ನಂಬಿದರೆ, ದೇವಾಲಯಗಳ ಶಿವಲಿಂಗಗಳ ಆರಾಧನೆ ತಪ್ಪು ಇಷ್ಟಲಿಂಗ ಪೂಜೆ ಮಾತ್ರ ಸ್ವೀಕಾರಾರ್ಹ ಎಂದು ಇನ್ನೊಂದು ಭಾಗ ಪ್ರತಿಪಾದಿಸುತ್ತದೆ. ಇಬ್ಬರೂ ಇಷ್ಟಲಿಂಗ ಧಾರಣೆಯ ಮಹತ್ವವನ್ನು ಒಪ್ಪುತ್ತಾರೆ'' ಎಂದು ಚಿ.ಮೂ.ಯವರು ಬರೆಯುತ್ತಾರೆ. ಯಾರು ವಚನ ಸಾಹಿತ್ಯವನ್ನು ಪ್ರಾಮಾಣಿಕವಾಗಿ ಅಭ್ಯಾಸ ಮಾಡುತ್ತಾರೋ ಅವರು ''ಗಂಡನನ್ನು ಹೊಂದಿದ ಗರತಿ ಪರಪುರುಷನಿಗೆ ಎಳೆಸಬಾರದು'' ಎಂದು ಪತಿವ್ರತೆಯಾಗಿರುವಂತೆ ಏಕಲಿಂಗ ನಿಷ್ಠೆ ಬೆಳೆಸಿಕೊಂಡು, ಅನ್ಯ ತೀರ್ಥಕ್ಷೇತ್ರ, ದೇವತಾರ್ಚನೆ ಮಾಡಲು ಹೋಗುವುದಿಲ್ಲ. ನ್ಯಾಯವಾಗಿ ವೀರಶೈವರು ಸಹ ಏಕದೇವತಾ (ಶಿವ) ಉಪಾಸನೆಗೆ ಬದ್ಧರಾಗಿ ಶಿವನನ್ನು ಬಿಟ್ಟು ಉಳಿದ ಯಾವ ದೇವತೆಗಳನ್ನು, ಶಿವಪರಿವಾರದ ದೇವತೆಗಳನ್ನು ಸಹ ಪೂಜಿಸಲು ಹೋಗಬಾರದು. ಆದರೆ ಅವರಲ್ಲಿ ನಿಷ್ಠೆ ಕಾಣಬರದು.

ಶಿವನು ಸ್ವತಃ ಯಜ್ಞ ವಿರೋಧಿ ; ಆದರೆ ಶಿವನ ದೇವಾಲಯಗಳಲ್ಲಿ ಯಜ್ಞಯಾಗಗಳು ನಡೆಯುವುದನ್ನು ಕಾಣುತ್ತೇವೆ. ಲಿಂಗಾಯತ ಧರ್ಮವು ವಚನ ಸಾಹಿತ್ಯದ ಮೂಲಕ ಏಕದೇವ ವಿಶ್ವಾಸವನ್ನು ಮತ್ತು ಇಷ್ಟಲಿಂಗ ರೂಪದಲ್ಲಿ ಏಕ ದೇವೋಪಾಸನೆಯನ್ನು ಪ್ರತಿಪಾದಿಸುತ್ತದೆ. ಇದಕ್ಕೆ ವಿರುದ್ಧವಾಗಿ ನಡೆವರೆ ಅದು ಅಪರಾಧವಾಗುತ್ತದೆ. ಹೀಗೆ ಹೇಳುವುದು ಬಿಟ್ಟು ವೀರಶೈವರಲ್ಲಿ ಒಂದು ಗುಂಪು ಇಷ್ಟಲಿಂಗ ನಿಷ್ಠೆ ಹೊಂದಿದೆ, ಇನ್ನೊಂದು ಗುಂಪು ಬಹುದೇವತೋಪಾಸನೆ ಮಾಡುತ್ತದೆ ಎಂದು ಚಿದಾನಂದಮೂರ್ತಿಯವರು ಹೇಳುವುದು ದಾರಿತಪ್ಪಿಸುವ ಹೇಳಿಕೆ. ಆ ತರಹ ಯಾವುದೇ ಗುಂಪುಗಳಿಲ್ಲ, ಸರಿಯಾಗಿ ವಚನ ಸಾಹಿತ್ಯ ಓದಿ ಅಳವಡಿಸಿಕೊಳ್ಳುವ ತತ್ವನಿಷ್ಠ ಲಿಂಗಾಯತರು ಒಂದು ಬಗೆಯಾದರೆ, ವಚನ ಸಾಹಿತ್ಯ ಓದದೆ ಮನನಿಸದೆ ದಾರಿತಪ್ಪಿ ನಡೆಯುವ ತತ್ವಭ್ರಷ್ಟ ಲಿಂಗಾಯತರು ಇನ್ನೊಂದು ಬಗೆ.

ಏನೇ ಇರಲಿ, ಚಿದಾನಂದ ಮೂರ್ತಿಯವರಂತಹ ಮನದಲ್ಲಿ ಒಂದಿಟ್ಟುಕೊಂಡು, ಹೊರಗೊಂದು ನುಡಿಯುವ ಜನರು ''ವೀರಶೈವ'' ಪದ ಹಿಡಿದುಕೊಂಡು ಏನು ಬೇಕಾದರೂ ಪ್ರತಿಪಾದಿಸಿಕೊಳ್ಳಲಿ. ಆದರೆ ಲಿಂಗಾಯತವನ್ನು ಕಲಬೆರಕೆ ಮಾಡಿ ಲಿಂಗಾಯತ ಧರ್ಮದ, ವಚನ ಸಾಹಿತ್ಯದ ಮತ್ತು ಲಿಂಗಾಯತ ಸಮಾಜದ ಶುಚಿತ್ವವನ್ನು ಕೆಡಿಸುವ ದುರ್ಬುದ್ಧಿಯನ್ನು ಕೈಬಿಡಲಿ ಎಂದು ಕಳಕಳಿಯಿಂದ ಸೂಚಿಸುತ್ತೇವೆ.

ಮುಂದಿನ ಸಂಚಿಕೆಯಲ್ಲಿ ಚಿ.ಮೂ ಅವರ ಲೇಖನದ ಎರಡನೆ ಭಾಗಕ್ಕೆ ಉತ್ತರಿಸಲಾಗುವುದು.

ವಿಶ್ವಗುರು ಬಸವಣ್ಣನವರು (೧೧೩೪-೧೧೯೬)

ವಿಶ್ವಗುರು ಬಸವಣ್ಣನವರು ಪರಮಾತ್ಮನ ಕರುಣೆಯ ಕಂದರಾಗಿ ಅವತರಿಸಿ, ಲೋಕಕ್ಕೆ ಹೊಸ ಧರ್ಮವೊಂದನ್ನು ಕೊಟ್ಟರು. ಇಂಗಳೇಶ್ವರ ಬಾಗೇವಾಡಿಯಲ್ಲಿ ಶೈವಬ್ರಾಹ್ಮಣ ದಂಪತಿಗಳಾದ ಮಾದರಸ -ಮಾದಲಾಂಬಿಕೆಯರ ಮಗನಾಗಿ ಆನಂದನಾಮ ಸಂವತ್ಸರದಲ್ಲಿ ವೈಶಾಖಮಾಸದ ಅಕ್ಷಯ ತೃತೀಯಾದಂದು (೩೦-೪-೧೧೩೪) ರೋಹಿಣಿ ನಕ್ಷತ್ರದಲ್ಲಿ ಜನಿಸಿ ಯಾವುದೇ ಅಂಧಶ್ರದ್ಧೆ-ಜಡಸಂಪ್ರದಾಯಗಳನ್ನೊಪ್ಪದೆ ಸತ್ಯಾನ್ವೇಷಕರಾಗಿ ಹೆತ್ತವರನ್ನು, ಬಂಧು ಬಾಂಧವರನ್ನು ತೊರೆದು ವಿದ್ಯಾಕಾಂಕ್ಷಿಯಾಗಿ ಕೂಡಲ ಸಂಗಮದ ಗುರುಕುಲಕ್ಕೆ ಬಂದರು. ಶಾಸ್ತ್ರಾಧ್ಯಯನ, ಯೋಗಾಭ್ಯಾಸಗಳಲ್ಲಿ ಬಾಲ್ಯವನ್ನು ಕಳೆದು ತಾರುಣ್ಯಕ್ಕೆ ಕಾಲಿರಿಸಿದರು. ಜನರಲ್ಲಿ ಮನೆ ಮಾಡಿಕೊಂಡಿದ್ದ ಮೌಢ್ಯ, ಕಂದಾಚಾರ, ಜಾತೀಯತೆಗಳನ್ನು ಕಂಡು ಮನನೊಂದು ಪರಿಹಾರವನ್ನು ಅರಸತೊಡಗಿದರು.

ಒಂದು ದಿನ (೧೪-೧-೧೧೫೫) ಪರಮಾತ್ಮನ ದಿವ್ಯ ದರ್ಶನವಾಯಿತು ; ಅನುಗ್ರಹಿತರಾದರು. 'ನಿರಾಕಾರ ದೇವನಿಗೆ ಮನುಷ್ಯರ, ಪ್ರಾಣಿಗಳ ಆಕಾರ ಕೊಡುವುದು ಸರಿಯಲ್ಲ' ಎಂಬ ಭಾವ ತಳೆದು, 'ದೇವನ ಸಾಕಾರ ಕೃತಿಯೇ ಬ್ರಹ್ಮಾಂಡ, ಇದು ಗೋಲಾಕಾರದಲ್ಲಿದೆ. ಆದ್ದರಿಂದ ದೇವನನ್ನು ವಿಶ್ವದಾಕಾರದಲ್ಲಿ ಪೂಜಿಸುವುದು ಸರಿ' ಎಂದು ಇಷ್ಟಲಿಂಗದ ಪರಿಕಲ್ಪನೆ ಕೊಟ್ಟರು. ದೇವರ ಕುರುಹಾದ ಇಷ್ಟಲಿಂಗವು ಮಾನವನ ಜಾತಿ, ವರ್ಣ, ವರ್ಗ ಭೇದಗಳನ್ನು ಕಳೆದು ಶರಣನನ್ನಾಗಿ ಮಾಡುವ ಸಾಧನವಾಗಬೇಕೆಂದು ಅದನ್ನು ಗಣ ಲಾಂಛನವನ್ನಾಗಿ ಮಾಡಿದರು.

ದಿವ್ಯಾನುಭವ ಪಡೆದು, ನವ ಸಮಾಜ ನಿರ್ಮಾಣದ ರೂಪುರೇಷೆಗಳನ್ನು ತಮ್ಮ ಮನದಲ್ಲಿ ಹೊಂದಿ ಕಲ್ಯಾಣದ ಕಾರ್ಯಕ್ಷೇತ್ರವನ್ನು ಪ್ರವೇಶಿಸಿದರು. ಸೋದರ ಮಾವನ ಮಗಳು ನೀಲಗಂಗಳನ್ನು ವಿವಾಹವಾಗಿ ಕರಣಿಕ ಕಾಯಕ ಕೈಗೊಂಡರು. ಅಲ್ಲಿಂದ ಮುಂದೆ ಭಂಡಾರಿಯಾಗಿ, ಪ್ರಧಾನಿ (ದಂಡನಾಯಕ)ಯಾಗಿ ಕಾಯಕ ನಿರ್ವಹಿಸಿದರು. ಅನುಭವ ಮಂಟಪ ರಚಿಸಿ ಧರ್ಮಪ್ರಚಾರ ಮಾಡಿದರು. ಎಲ್ಲರ ಮನೆ, ಮನಗಳ ಬಾಗಿಲಿಗೂ ಧರ್ಮಗಂಗೆ ಹರಿಯುವಂತೆ ಮಾಡಿದರು. ಇಷ್ಟಲಿಂಗವೆಂಬ ಗಣಲಾಂಛನವನ್ನು ಧರಿಸಿ ಲಿಂಗಾಯತರಾದ ಎಲ್ಲ ಶರಣ ಬಂಧುಗಳನ್ನು ಸಮಾನ ಭಾವದಿಂದ ಕಂಡರು. ಹುಟ್ಟಿನಿಂದ ಬ್ರಾಹ್ಮಣರಾಗಿ, ಸಂಸ್ಕಾರದಿಂದ ಶರಣರಾದ ಮಧುವರಸರ ಮಗಳನ್ನು ಹುಟ್ಟಿನಿಂದ ಸಮಗಾರರಾಗಿ ಸಂಸ್ಕಾರದಿಂದ ಶರಣರಾದ ಹರಳಯ್ಯನವರ ಮಗನಿಗೆ ಕೊಟ್ಟು ವಿವಾಹ ಮಾಡಲು ಪ್ರೇರಣೆ ನೀಡಿದರು. ಈ ವಿವಾಹದಿಂದ ಸಂಪ್ರದಾಯವಾದಿಗಳು ಸಿಡಿದೆದ್ದು ಬಿಜ್ಜಳ ಮಹಾರಾಜನನ್ನು ಪ್ರೇರೇಪಿಸಿ ಧರ್ಮಗುರು ಬಸವಣ್ಣನವರಿಗೆ ಗಡಿಪಾರು ಶಿಕ್ಷೆ ನೀಡುವಂತೆ ಮಾಡಿದರು. ಧರ್ಮಪಿತರು ಗಡಿಪಾರು ಶಿಕ್ಷೆ ಸ್ವೀಕರಿಸಿ ಕಲ್ಯಾಣದಿಂದ ಹೊರಟ ನಂತರ ಹರಳಯ್ಯ, ಮಧುವರಸ, ಶೀಲವಂತರ ಬಂಧನವಾಗಿ, ಅವರು ವರ್ಣಾಂತರ ವಿವಾಹದಲ್ಲಿ ಭಾಗಿಯಾದುದಕ್ಕಾಗಿ ಕಣ್ಣು ಕೀಳಿಸುವ ಶಿಕ್ಷೆ, ಎಳೆಹೂಟೆ ಶಿಕ್ಷೆಗೆ ಒಳಗಾಗಿ ಪ್ರಾಣಬಿಡಬೇಕಾಯಿತು. ಜಾತಿವಾದಿಗಳು ವಚನ ಸಾಹಿತ್ಯವನ್ನು ನಾಶಮಾಡಲು ಸನ್ನದ್ಧರಾದಾಗ ವೀರಮಾತೆ ಅಕ್ಕನಾಗಲಾಂಬಿಕೆ, ಚಿನ್ಮಯಜ್ಞಾನಿ ಚನ್ನಬಸವಣ್ಣ, ವೀರ ಗಣಾಚಾರಿ ಮಡಿವಾಳ ಮಾಚಯ್ಯನವರು ವೀರಾಗ್ರಣಿಗಳಾಗಿ ಕಾದಾಡಿ ವಚನ ವಾಙ್ಮಯ ನಿಧಿಯನ್ನು ಉಳಿಸಿಕೊಟ್ಟರು. ಅದಿಂದು ನಮ್ಮೆಲ್ಲರ, ಕರ್ನಾಟಕದ, ಭಾರತದ,ವಿಶ್ವದ ಹೆಮ್ಮೆಯ ಆಸ್ತಿಯಾಗಿದೆ.

ಇಂಥ ಮಹಾನ್ ನೇತಾರರಾದ ಬಸವಣ್ಣನವರು ಲಿಂಗಾಯತ ಧರ್ಮದ ಸಂಸ್ಥಾಪಕರು; ಧರ್ಮಪಿತರು, ಮಂತ್ರಪುರುಷರು. ೬೨ವರ್ಷ ೩ ತಿಂಗಳು ೨ ದಿವಸಗಳ ಕಾಲ ಇಳೆಯಲ್ಲಿ ಬಾಳಿದ ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ (ದಿ.೩೦-೭-೧೧೯೬)ಯಂದು ಉರಿಯುಂಡ ಕರ್ಪೂರದಂತೆ ಲಿಂಗೈಕ್ಯರಾದರು.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

86666



ವಿಶ್ವಗುರು ಬಸವಣ್ಣನವರ 805ನೆಯ ಲಿಂಗೈಕ್ಯ ದಿನಾಚರಣೆ

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (ಕ್ರಿ.ಶ. 1134) 62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಮಂಗಳವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು **"ಬಸವ ಪಂಚಮಿ"** ಎಂದು ಖ್ಯಾತಿವೆತ್ತಿದೆ. ಈ ವರ್ಷ 805ನೆಯ ಲಿಂಗೈಕ್ಯ ದಿನವು ಶನಿವಾರ ದಿ.5-8-2000ದಂದು ಒದಗಿ ಬಂದಿದೆ.

ಸಾಮೂಹಿಕ ಇಷ್ಟಲಿಂಗಾರ್ಚನೆ

ಧರ್ಮಪಿತ ಬಸವಣ್ಣನವರು ಕೊಟ್ಟ ಅಮೂಲ್ಯವಾದ ಒಂದು ಧಾರ್ಮಿಕ ಲಾಂಛನ ಇಷ್ಟಲಿಂಗ. ಏಕೇಶ್ವರವಾದವನ್ನು ಪ್ರತಿಪಾದಿಸಿದ ಮಹಾಪುರುಷ ಬಸವಣ್ಣನವರು. ಇಷ್ಟಲಿಂಗದ ಮೂಲಕ ಏಕದೇವೋಪಾಸನೆಗೆ ಅನುವು ಮಾಡಿಕೊಟ್ಟರು. ನಿರಾಕಾರನಾದ ದೇವನಿಗೆ ಮನುಷ್ಯರ, ಪಶುಪಕ್ಷಿಗಳ, ಕ್ರಿಮಿ ಕೀಟಗಳ ಆಕಾರ ಕೊಡುವುದು ಸೃಷ್ಟಿಕರ್ತ ಲಿಂಗದೇವನಿಗೆ ಮಾಡುವ ಅಪಚಾರವಾಗುವುದೆಂದು ಸಾರಿ, ವಿಶ್ವದಾಕಾರದಲ್ಲಿ ದೇವನನ್ನು ಪೂಜಿಸಲು ಕಲಿಸಿದರು. ಇಷ್ಟಲಿಂಗವನ್ನು ಗಣಲಾಂಛನವಾಗಿ ಮಾಡಿ, ಜಾತಿ-ವರ್ಣ-ವರ್ಗರಹಿತ ಧರ್ಮ ಸಹಿತ ಸಮಾಜ ರಚನೆಗೆ ಅನುಕೂಲವಾಗುವ ಲಿಂಗಾಯತ ಧರ್ಮವನ್ನು ಕೊಟ್ಟರು.

ಪವಿತ್ರ ಹಬ್ಬ ಬಸವ ಪಂಚಮಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ಶರಣ ಬಂಧುಗಳು ಮಾಡುವುದು ಕಡ್ಡಾಯವಾದ ಕರ್ತವ್ಯವಾಗಿರುವುದು.

ಆದ್ದರಿಂದ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಒಡೆತನದ ಬಸವ ಗಂಗೋತ್ರಿಯಲ್ಲಿ ದಿ.5-8-2000ರಂದು ಬೆಳಿಗ್ಗೆ 10 ಗಂಟೆಗೆ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆ, ಉಪನ್ಯಾಸ ಮತ್ತು ನಂತರ ಗಣಪ್ರಸಾದ(ಭೋಜನ)ವನ್ನು ಏರ್ಪಡಿಸಲಾಗಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಬೇಕು ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ಸೂಚಿಸುತ್ತೇವೆ.

ಶರಣ ಎನ್. ಪುಟ್ಟರುದ್ರ
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಸದ್ಗುರು
ಅಲ್ಲಮಪ್ರಭು ಸ್ವಾಮಿಗಳು

ಸ್ಥಳ ನಿರ್ದೇಶನ : ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲೆ ರಾಮೋಹಳ್ಳಿ ಕ್ರಾಸ್,
ಕುಂಬಳಗೋಡಿಗೆ ಮೊದಲೇ ಬಸವ ಗಂಗೋತ್ರಿ ಪ್ರವೇಶದ್ವಾರವು ಸಿಕ್ಕುತ್ತದೆ.

ಪವಿತ್ರ ಮಾಸ ಆಚರಣೆ ಮತ್ತು ಬಸವ ಪಂಚಮಿ ವ್ರತ

ಬಸವ ಗುರು ಸಂಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಯಾವ ದಿನವೂ ಶುಭವಲ್ಲ ಅಶುಭವಲ್ಲ; ಪವಿತ್ರವಲ್ಲ ಅಪವಿತ್ರವೂ ಅಲ್ಲ. ವ್ಯಕ್ತಿಯು ಮಾಡುವ ಕ್ರಿಯೆಗಳಿಂದ ಸಮಯವು ಶುಭ-ಅಶುಭ ಎನ್ನಿಸಿಕೊಳ್ಳುವದು. ಒಂದು ನಿಯಮಕ್ಕೆ, ಶಿಸ್ತಿಗೆ ಬದ್ಧರಾಗಲು ಧಾರ್ಮಿಕರಿಗೆ ಕೆಲವೊಂದು ಆಚರಣೆಗಳು ಅಗತ್ಯ. ಆ ದೃಷ್ಟಿಯಿಂದ ಶ್ರಾವಣ ಮಾಸವು ಧಾರ್ಮಿಕವಾಗಿ ಪವಿತ್ರ ಮಾಸ (ಮುಸ್ಲೀಮರಿಗೆ ರಂಜಾನ್ ಇದ್ದಂತೆ) ಎಂಬ ನಂಬಿಕೆ ಲಿಂಗಾಯತ ಸಮಾಜದಲ್ಲಿ ರೂಢಿಗೊಂಡಿದೆ. ಇದಕ್ಕೆ ಇನ್ನೊಂದು ಕಾರಣವೂ- ಗುರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಮಾಸದಲ್ಲಿ ಶುದ್ಧ ಪಂಚಮಿಯಂದು - ಎಂಬುದು ಇರಬಹುದು. ಆದ್ದರಿಂದ ಬಸವ ಪಥಿಕರು ಶ್ರಾವಣ ಶುದ್ಧ ಪ್ರತಿಪದೆಯಿಂದ ಭಾದ್ರಪದ ಚೌತಿಯವರೆಗೆ 33 ದಿವಸಗಳ ಕಾಲ ನಿತ್ಯವೂ ಬೆಳಿಗ್ಗೆ ಸಂಜೆ ೨ ಸಲ ಲಿಂಗಾರ್ಚನೆ, ಬಸವ ಗುರು ಪೂಜೆ, ವಚನ ಸಾಹಿತ್ಯ ಪಾರಾಯಣ-ಪಠಣ (ಸೂಕ್ತ ಜ್ಞಾನವು ಲಭ್ಯವಾಗುತ್ತಿದ್ದರೆ ಪ್ರವಚನ ಶ್ರವಣ) ಮಾಡುವುದು, ಈ ಅವಧಿಯಲ್ಲಿ ಆಧ್ಯಾತ್ಮಿಕ ಸಾಧನೆಗೆ ಹೆಚ್ಚು ಸಮಯ ಕೊಡುವ ಪರಿಪಾಠ ಬೆಳೆಸಿಕೊಳ್ಳಬೇಕು.

ಬಸವ ಪಂಚಮಿ ವ್ರತ

ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು. (30-7-1196) ಆದ್ದರಿಂದ ಬಸವ ಪಂಚಮಿ ವ್ರತವನ್ನು, ಸದ್ಭಕ್ತರು ಕೈಗೊಳ್ಳುವುದು ಒಳ್ಳೆಯದು. ಶ್ರಾವಣ ಅಮವಾಸ್ಯೆಯ ಮರುದಿವಸ, ನಡುಮನೆಯಲ್ಲಿ ಒಂದು ಮಂಟಪ ಕಟ್ಟಿ, ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರ ಇಟ್ಟು ಅದನ್ನು ಮತ್ತು ಮಂಟಪವನ್ನು ಸುಂದರವಾಗಿ ಅಲಂಕರಿಸಬೇಕು. ಬೆಳಿಗ್ಗೆ ಮತ್ತು ಸಂಜೆ ಸ್ನಾನ ಮತ್ತು ಇಷ್ಟಲಿಂಗಾರ್ಚನೆ ಮಾಡಿ, ಬಸವ ಗುರುಪೂಜೆಯನ್ನು ಮಾಡಬೇಕು. ಪ್ರತಿಪದೆಯ ದಿನ ಬೆಳಿಗ್ಗೆ ಪೂರ್ತಿ ಪೂಜಾವ್ರತವನ್ನು ಮಾಡಬೇಕು. ಉಳಿದ ದಿನ ಬೆಳಿಗ್ಗೆ-ಸಂಜೆ 108 ಬಸವಲಿಂಗ ಮಂತ್ರ ಪಠಣ ಮಾಡಿ, ಆರು ದಿವಸಗಳ ಅವಧಿಯಲ್ಲಿ ಬಸವಣ್ಣನವರ ಸಮಗ್ರ ವಚನಗಳ 12 ಭಾಗ ಮಾಡಿ ಪಾರಾಯಣ-ಪಠಣ ಮಾಡಬೇಕು. ಬಸವ ಪಂಚಮಿ ದಿನ ತಮ್ಮ ಮನೆಯಲ್ಲಿ ಮಾತ್ರವಲ್ಲ ಸಾಮೂಹಿಕವಾಗಿ ನಡೆಯುವ ಶರಣ-ಸಮಾಗಮದಲ್ಲಿ ಪಾಲ್ಗೊಂಡು ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಭಾಗಿಗಳಾಗಬೇಕು.

ಬಸವ ಪಂಚಮಿ ಮರುದಿನ ತಾಯಿ ನೀಲಾಂಬಿಕೆ ಲಿಂಗೈಕ್ಯಳಾದ ನೀಲಮ್ಮ ಷಷ್ಠಿಯ ದಿನ. ಅಂದು ಸಂಜೆಗೆ ೧೨ ಪೂಜೆ-ಪಾರಾಯಣ ಪೂರ್ತಿಯಾಗುತ್ತದೆ. ಶ್ರಾವಣ ಶುದ್ಧ ಷಷ್ಠಿಯಂದು ಸಂಜೆ ತಮ್ಮ ಬಂಧು-ಮಿತ್ರರು, ಓಣಿಯ ಜನರನ್ನು ಆಹ್ವಾನಿಸಿ ಮಹಾಮಂಗಲ ಮಾಡಿ ಎಲ್ಲರಿಗೂ ಪ್ರಸಾದ ವಿತರಣೆ ಮಾಡಬೇಕು. ದೊಡ್ಡ ಪ್ರಮಾಣದಲ್ಲೇ ಪ್ರಸಾದ ವಿತರಣೆ ಮಾಡಬೇಕೆಂದೇನೂ ಇಲ್ಲ. ಅವರವರ ಶಕ್ತ್ಯಾನುಸಾರ ಪ್ರಸಾದ ವಿತರಣೆ, ವಚನ ಸಾಹಿತ್ಯ ವಿತರಣೆ ಮುಂತಾದ್ದನ್ನು ಮಾಡಬೇಕು.

ಶ್ರಾವಣ ಮಾಸ ಪೂರ್ತಿ ವಚನ ಸಾಹಿತ್ಯ ಪಾರಾಯಣ ಇಟ್ಟುಕೊಂಡು ಭಾದ್ರಪದ ಚೌತಿಯ ದಿವಸ ಶ್ರಾವಣ ಮಾಸದ ವ್ರತಾಚರಣೆಯನ್ನು ಮುಕ್ತಾಯ ಮಾಡಬೇಕು.

ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ

ವಚನ ಕಿರಣ

-ಪೂಜ್ಯ ಶ್ರೀ ಮಾತೆ ಅಕ್ಕಮಹಾದೇವಿ
ಬಸವ ಧರ್ಮ ಪೀಠ, ಕೂಡಲಸಂಗಮ

೧. ಮುಂದೆ ಹೆಜ್ಜೆ ಇಟ್ಟಲ್ಲದೆ ನಿರ್ಧರಿಸಿದ
ಸ್ಥಳವ ತಲುಪಲಾಗದು
ಉಂಡಲ್ಲದೆ ಹೊಟ್ಟೆಯ ಹಸಿವು ಹಿಂಗಲಾರದು
ಜಲವ ಕುಡಿದಲ್ಲದೆ ತೃಷೆ ತಣಿಯದು
ನಿದ್ರೆಗೈದಲ್ಲದೆ ತನುವಿನ ದಣಿವಾರದು
ಪೂಜೆ, ಧ್ಯಾನ, ನಿತ್ಯ ನೆನಹುಗಳಿಲ್ಲದೆ
ದೈವೀ ಆನಂದ ನೆಲೆಗೊಳ್ಳದು ; ಇವ ಮಾಡದೆ
ಅದ್ವೈತವ ನುಡಿಯುತ್ತ ಆಚರಣೆಯಿಲ್ಲದ
ದುರಾಚಾರಿಗಳ ಮೆಚ್ಚುವನೇ
ನಮ್ಮ ಮಾತಾ ಪ್ರಿಯ ಸಚ್ಚಿದಾನಂದ ?

೨. ತನು ಕರಗಿಸಿ ಸುರಿಸಿದ ಬೆವರು ಹನಿಗಳೇ
ಲಿಂಗಕ್ಕೆ ನಿಜ ಮಜ್ಜನವಯ್ಯಾ
ಮನದಾಳದ ನಿಜನೆನಹೆ ದೇವಂಗೆ ಸ್ತವನವಯ್ಯಾ
ಧನ ಸವೆಸಿ ಮಾಡುವ ದಾಸೋಹವೇ
ದಿಟ ನೈವೇದ್ಯವಯ್ಯಾ ನಿನಗೆ , ಮಾತಾ ಪ್ರಿಯ ಸಚ್ಚಿದಾನಂದ .

೩. ನುಡಿಯಬಹುದೊಂದು ಕೋಟಿ ನಡೆಯುವುದು ಕರಕಷ್ಟವಯ್ಯಾ
"ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿರ್ಪ ಲಿಂಗ ಘಟಸರ್ಪವಯ್ಯಾ"
ಗುರು ಬಸವ ವಾಣಿ ಇಂತೆಂದುದಾಗಿ
ಸಾವಿರ ನುಡಿದು ನಡೆಯದಂತಿರಿಸದೆ
ನಡೆದಷ್ಟು ನುಡಿಸಯ್ಯಾ ಎನ್ನ ಮಾತಾ ಪ್ರಿಯ ಸಚ್ಚಿದಾನಂದಾ.

೪. ಪರರ ಪ್ರಗತಿಯ ಕಂಡು ಜಡಪಡಿಸದಿರಲೆನ್ನ ಮನ
ಹೆರರ ಹೆಗ್ಗಳಿಕೆಯನಳೆದು ಹಿಂಜರಿಯದಿರಲೆನ್ನ ಮನ
ಇತರರ ಸಾಧನೆಗೆ ಮರುಗದಿರಲೆನ್ನ ಮನ
ಇಂತಹ ಮನದ ಸಣ್ಣತನವನು ಮಾಣಿಸಿ
ಘನತತ್ತ್ವವನಳವಡಿಸಯ್ಯಾ ಮಾತಾಪ್ರಿಯ ಸಚ್ಚಿದಾನಂದ.

೫. ಮಾತು ಮೌನವಾದರೇನಂತೆ ?
ಸಂಕಲ್ಪ ವಿಕಲ್ಪಂಗಳನ್ನಳಿದು
ಮನ ಮೌನವಾಗದನ್ನಕ್ಕರ !
ಶಬ್ದನಿಂದೆಯ ನುಡಿಯದಿದ್ದರೇನು ?

ಮನ ಪರರ ಹಿತವ ಬಯಸದನ್ನಕ್ಕರ
ಲಿಂಗವ ಅಂಗೈಯಲ್ಲಿ ಎಷ್ಟು ತಾಸು ಪೂಜಿಸಿದರೇನು ?
ಮನ ಮಹಾಲಿಂಗವಾಗದನ್ನಕ್ಕರ !
ತನು ವಿರಕ್ತಿಯಿದ್ದರೇನು ಭವದ ಬಳ್ಳಿಗೆ
ಬೀಜವಾದ ಮನ ವಿರಕ್ತವಾಗದನ್ನಕ್ಕರ !
ಇದು ಕಾರಣ ಇವೆಲ್ಲವ ಮನಕ್ಕೆ ಅಳವಡಿಸಿ ಎನ್ನ ಭವವ ಕೆಡಿಸಿ
ನಿಮ್ಮರಿವು ನೆಲೆಗೊಳಿಸಯ್ಯಾ, ಮಾತಾ ಪ್ರಿಯ ಸಚ್ಚಿದಾನಂದ .

೬. ಕಾಯಕವೇ ಕೈಲಾಸವೆಂಬ ಬಸವ ನುಡಿಯ
ಬೋಧಿಸುತ್ತ ಕಾಯಕದಲ್ಲಿ ಮೇಲು ಕೀಳೆಂಬ
ಭಾವ ಸಲ್ಲದೆಂದು ನುಡಿವವರೇ
ಸರ್ವ ಕಾಯಕಗಳ ಮಾಡಲು ಹಿಂಜರಿವರಯ್ಯಾ !
ಪ್ರಸಾದದಲ್ಲಿ ರುಚಿಯನರಸಬಾರದೆಂಬ ಶರಣ ವಾಣಿಯೊಡನೆ
ಪ್ರಸಾದ ತತ್ತ್ವೋಪದೇಶಗೈಯುವವರೇ ರುಚಿಯ ಸವಿಯನರಸುವರಯ್ಯಾ !
ಅಳವಡಿಸಿಕೊಂಡು ಆಚರಣೆಯಲ್ಲಿ ತರದೆ
ಬೋಧಿಸುವ ಬಾಯಬಡುಕರ ಕಂಡು ನಗುವ ಮಾತಾ ಪ್ರಿಯ ಸಚ್ಚಿದಾನಂದ.

೭. ನಡೆ-ನುಡಿಗಳೊಂದಾಗಿ ಮಾಡುವ ಉಪದೇಶ ಜಗಕೆಲ್ಲ ಪ್ರಿಯವಹುದಯ್ಯಾ .
ಒಳ-ಹೊರಗೆ ಒಂದಾಗಿ ಮಾಡುವ ಪೂಜೆ ಶರಣ ಪಥಕ್ಕೆ ಸಲ್ಲುವುದಯ್ಯಾ .
ಇದು ಕಾರಣ ನುಡಿ-ನಡೆಗಳೊಂದಾದ ಶರಣರ ಸಂಗದಲ್ಲಿರಿಸಿ ಎನ್ನ
ನಡೆ-ನುಡಿಗಳನೊಂದುಗೊಳಿಸಯ್ಯಾ ಮಾತಾ ಪ್ರಿಯ ಸಚ್ಚಿದಾನಂದ.

೮. ನಡೆಯಲ್ಲಿ ಅಳವಟ್ಟು ಬೋಧಿಸುವ ಒಂದು ನುಡಿಯೂ ಅಸಂಖ್ಯಾತರ
ಮನ ಪರಿವರ್ತನೆಗೊಳಿಸುವುದಯ್ಯಾ .
ಜೀವನದಲ್ಲಿ ಅಳವಡಿಸದೆ ಬೋಧೆಗೈಯುವ
ಸಾವಿರ ಉಪದೇಶಗಳು ಬೋರುಗಲ್ಲ ಮೇಲೆ
ನೀರ ಹೊಯ್ದಂತಾಗುವುದಯ್ಯಾ ಮಾತಾ ಪ್ರಿಯ ಸಚ್ಚಿದಾನಂದ.

೯. ಅತ್ತಿತ್ತ ಹರಿವ ಚಿತ್ತದ ಚಂಚಲತೆಯನ್ನಳಿಸಿ
ನಿಮ್ಮ ಧ್ಯಾನದಲ್ಲಿರಿಸಿ ಚಿತ್ತ ಶುದ್ಧಿಗೊಳಿಸಯ್ಯಾ ಮಾತಾ ಪ್ರಿಯ ಸಚ್ಚಿದಾನಂದ .

೧೦. ಕೀಳು ವಿಷಯಂಗಳಿಗೆ ಹರಿವುದೀ ಮನ
ಸಣ್ಣ ವಿಚಾರಗಳ ಯೋಚಿಸುವುದೀ ಮನ
ಅಲ್ಲ ಸಲ್ಲದ ಯೋಚನೆಗಳ ತುಂಬಿಕೊಂಡ
ಮನದ ಕೊಳೆಯ ಕಳೆದು ಸದ್ವಿಚಾರವನಳವಡಿಸಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ .

೧೧. ಅಸಾಧ್ಯವಾದುದನ್ನು ಯೋಚಿಸುತ್ತ ಹಲುಬದೇ
ಸಾಧ್ಯವಿರುವ ಸಣ್ಣ ಕಾರ್ಯವನ್ನು

ಮನಮುಟ್ಟಿ ಮಾಡುವ ಶ್ರದ್ಧೆಯೆನಗೆ
ಅಳವಡಿಸಯ್ಯಾ ಮಾತಾ ಪ್ರಿಯ ಸಚ್ಚಿದಾನಂದ .

೧೨. ಅನ್ಯರಲ್ಲಿರುವ ಪ್ರತಿಭೆ ಎನ್ನಲ್ಲಿಲ್ಲವೆಂದು ಕೊರಗದೇ
ಇದ್ದುದನ್ನೇ ಬೆಳೆಸಿಕೊಳ್ಳಲೆತ್ನಿಸುತ್ತ
ನೀನಿತ್ತುದರಲ್ಲೇ ತೃಪ್ತಿಯ ಹೊಂದುವ
ಸಮಾಧಾನಿಯಾಗಿ ಎನ್ನನಿರಿಸಯ್ಯಾ , ಮಾತಾ ಪ್ರಿಯ ಸಚ್ಚಿದಾನಂದ

ಮಾತೆಯ ಚರಣಕೆ ನುಡಿನೈವೇದ್ಯ

ಪೂಜ್ಯ ಮಾತಾಜಿಯ ದರುಶನದಿ ಧನ್ಯ
ಶ್ರೀ ಚರಣಕ್ಕೆರಗಲದು ಮೋಕ್ಷಕರ ಪುಣ್ಯ
ನುಡಿಯನಾಲಿಸಿದ ಆ ಜೀವಿಯು ಮಾನ್ಯ
ಜೀವನದಿ ಅಳವಡಿಸಿಕೊಂಡಾತ ಗಣ್ಯ
ಆ ದೈವೀ ಶಕ್ತಿಯೇ ಮಾತಾಜಿ ರೂಪದಲಿ ಬಂದು
ಧರೆಯ ಬೆಳಗಲು ಅವತರಿಸಿಹುದು ಇಂದು
ಚಿತ್ರದುರ್ಗದೊಳು ಚಿತ್ಕಳೆಯೊಂದು ಉದಿಸಿ
ಬಸವ ಧರ್ಮದ ಪ್ರಭೆಯ ಜಗಕೆಲ್ಲ ಹರಿಸಿ ॥ ೧ ॥

ಬಸವ ಗುರುವಿನ ಹೃದ್ಗರ್ಭದಲಿ ಬೆಳೆದು
ಗುರು ಲಿಂಗಾನಂದರ ಕರುಣಾಮೃತ ಸವಿದು
ಶರಣ ಸಾಹಿತ್ಯ ಸಾಗರದಾಳಕ್ಕೆ ತಾವಿಳಿದು
ಲಿಂಗದೇವನ ನಿಜವ ಜಗಕ್ಕೆಲ್ಲ ಉಲಿದು ॥ ೨ ॥

ಬಸವ ಧರ್ಮದ ಕಲ್ಪತರುವು ತಾವಾಗಿ
ದಿವ್ಯ ಸಂದೇಶವನು ಸಾರಿದ ವೀರ ವಿರಾಗಿ
ಶರಣ ತತ್ತ್ವದ ಸತ್ ಪಥವನ್ನು ತೋರಿ
ಸತ್ಯ ಸನ್ಮಾರ್ಗವನು ಜಗಕೆ ಹೇಳಿದಿರಿ ಸಾರಿ ॥ ೩ ॥

ಗುರು ಬಸವಣ್ಣನ ವಚನಾಂಕಿತದ ಗೂಡಾರ್ಥ
ಬಿಡಿಸಿ ಹೇಳಿದಿರಿ ಲಿಂಗದೇವನ ಸತ್ಯಾರ್ಥ
ಬೊಬ್ಬೆ ಹಾಕುತಲಿಹರು ಮಂದಬುದ್ಧಿಯ ಜನ ವ್ಯರ್ಥ
ಪ್ರಚೋದನೆ ನೀಡಲು ಮಠಾಧೀಶರ ಸ್ವಾರ್ಥ ॥ ೪ ॥

ಶರಣ ತತ್ತ್ವಾಮೃತದ ಸಾರವನೇ ಸವಿದು
ಬಸವ ಭಕ್ತರನು ಶರಣ ಮೇಳಕೆ ಕರೆದು
ಜನ ಜಾಗೃತಿಗಾಗಿ ಜ್ಞಾನಾಮೃತವ ಸುರಿದು
ಧರ್ಮಕ್ರಾಂತಿಯ ಧ್ವಜವ ಮೇಲೆತ್ತಿ ಹಿಡಿದು ॥ ೫ ॥

- ಶರಣ ಮಹಾದೇವ ಗುಡೇರ
ಜೆ.ಎಸ್.ಎಸ್. ಕಾಲೇಜ್, ಗೋಕಾಕ್

ಹಿಂದೂ-ವೀರಶೈವ : ಒಂದು ವಿಶ್ಲೇಷಣೆ

ಡಾ || ಎಂ. ಚಿದಾನಂದ ಮೂರ್ತಿ

ವೀರಶೈವರು ಹಿಂದೂಗಳಲ್ಲವೆಂಬ ವಾದ ಈಚಿಗೆ ಹುಟ್ಟಿಕೊಂಡುದಲ್ಲ : ಅದು ಬೀದಿ ಚಳವಳಿಯಾಗಿ ರೂಪುಗೊಂಡುದು ಮಾತ್ರ ಈಚೆಗೆ. ಹನ್ನೆರಡನೆಯ ಶತಮಾನದಲ್ಲಿ ನಡೆದ ಶರಣ ಚಳವಳಿಯು ವೀರಶೈವರಿಗೆ ಒಂದು ಅಗಾಧ ಆತ್ಮವಿಶ್ವಾಸವನ್ನು ತಂದು ಕೊಟ್ಟಿತೆಂಬುದು ಎಲ್ಲರಿಗೂ ತಿಳಿದ ವಿಷಯ. ಆ ಕಾಲದಲ್ಲೇ ಹಲವರು ಕನ್ನಡದಲ್ಲಿ ಎಂತೋ ಸಂಸ್ಕೃತದಲ್ಲೂ ಪಾಂಡಿತ್ಯವನ್ನು ಪಡೆದು ವೇದ, ಆಗಮ, ಸ್ಮೃತಿ, ಕಾವ್ಯ, ಪುರಾಣ, ಜ್ಯೋತಿಷ್ಯ, ಷಡ್ದರ್ಶನಗಳನ್ನು ಚೆನ್ನಾಗಿ ಓದಿಕೊಂಡಿದ್ದರು. ವಚನಕಾರ ಉರಿಲಿಂಗದೇವನ ಉದಾಹರಣೆಯನ್ನು ಇಲ್ಲಿ ಕೊಡುವುದರಲ್ಲಿ ಒಂದು ವಿಶೇಷವಿದೆ. ಅವನು ಕಾಶ್ಮೀರದಿಂದ ಬಂದವನೆಂದು ಹೇಳಲಾದ ಮಹಾ ಸಂಸ್ಕೃತ ವಿದ್ವಾಂಸ ; ಮಂಚಣ್ಣ ಪಂಡಿತನ ಮಗನಾದುದರಿಂದ ತಂದೆಯಂತೆಯೇ ಮಹಾ ವಿದ್ವಾಂಸನಾಗಿದ್ದನು. ಆದರೂ ಅವನ ಕನ್ನಡ ರಚನೆಗಳಲ್ಲಿ ಆ ಪಾಂಡಿತ್ಯ ವ್ಯಕ್ತವಾಗಿಲ್ಲ. ಅವನು ಅತ್ಯಂತ ಸುಕುಮಾರ ಶೈಲಿಯ ಸತಿ-ಪತಿ ಭಾವದ ವಚನಗಳನ್ನು ಬರೆದಿದ್ದಾನೆ. ಹುಟ್ಟಿನಿಂದ ದಲಿತನೂ ವೃತ್ತಿಯಿಂದ ಕಟ್ಟಿಗೆ ಮಾರುವವನೂ ಪ್ರವೃತ್ತಿಯಿಂದ ಕಳ್ಳನೂ ಆಗಿದ್ದ ಅನಕ್ಷರಸ್ಥ ಉರಿಲಿಂಗಪೆದ್ದಿ ಮತ್ತು ಆತನ ಪತ್ನಿ ಕಾಳವ್ವೆಯರನ್ನು ಆ ಉರಿಲಿಂಗದೇವನು ತನ್ನ ಶಿಷ್ಯರನ್ನಾಗಿ ಸ್ವೀಕರಿಸಿ ಅವರಿಗೆ ಶಿಕ್ಷಣವನ್ನು ಕೊಟ್ಟು ತನ್ನ ವಿದ್ಯೆಯನ್ನೆಲ್ಲ ಅವರಿಗೆ ಧಾರೆ ಎರೆದ. "ಶಿಷ್ಯಾದಿಚ್ಛೇತ್ ಪರಾಜಯಂ" ಎಂಬಂತೆ ಗುರುವನ್ನು ಮೀರಿಸಿದ ಅಥವಾ ಗುರುವಿಗೆ ಸಮಾನವಾದ ಪಾಂಡಿತ್ಯವನ್ನು ಪಡೆದ ಉರಿಲಿಂಗ ಪೆದ್ದಿಯು ತನ್ನ ವಚನಗಳಲ್ಲಿ ಮಧ್ಯೆ ಮಧ್ಯೆ ವೇದ, ಆಗಮ, ಪುರಾಣ, ಸ್ಮೃತಿಗಳಿಂದ ಅಕ್ಷರಶಃ ನೂರಾರು ಶ್ಲೋಕಗಳನ್ನು ಉದಾಹರಿಸಿದ್ದಾನೆ. ಅವನು ಇಡೀ ಭಾರತದ ಮೊತ್ತ ಮೊದಲ ದಲಿತ ವರ್ಗದ ಅತಿ ಶ್ರೇಷ್ಠ ಸಂಸ್ಕೃತ ವಿದ್ವಾಂಸನೆಂಬಲ್ಲಿ ಅನುಮಾನವಿಲ್ಲ. ಅವನ ಹೆಂಡತಿ ಕಾಳವ್ವೆಯೂ ತನ್ನ ವಚನಗಳ ಮಧ್ಯೆ ಸಂಸ್ಕೃತ ವಾಕ್ಯಗಳನ್ನು ಉದಾಹರಿಸುತ್ತಾಳೆ. ಅವಳು ಭಾರತದ ದಲಿತ ವರ್ಗದ ಪ್ರಪ್ರಥಮ ಲೇಖಕಿ. ಇಲ್ಲಿ ಗಮನಿಸಬೇಕಾದ ಸಂಗತಿ ಇದು ; ಸ್ತ್ರೀಯರಿಗೆ, ಶೂದ್ರರಿಗೆ, ದಲಿತರಿಗೆ ವೇದಾಧ್ಯಯನದ ಅಧಿಕಾರವಿಲ್ಲವೆಂದು ಅಂದಿನ ಸಾಂಪ್ರದಾಯಕ ಸಮಾಜ ಸಾರಿದ್ದರೂ ಅದನ್ನು ಉಲ್ಲಂಘಿಸಿ ಉರಿಲಿಂಗದೇವನಂತಹ ಹಲವು ವೀರಶೈವ ಗುರುಗಳು ಅವರಿಗೆ ಅದೆಲ್ಲವನ್ನೂ ಬೋಧಿಸಿ ನಿಷ್ಣಾತರನ್ನಾಗಿ ಮಾಡಿದ್ದರು. ಬಸವ, ಅಲ್ಲಮ, ಸಿದ್ಧರಾಮ, ಅಕ್ಕಮಹಾದೇವಿ ಇವರೇ ಮೊದಲಾದವರು ಸಂಸ್ಕೃತದಲ್ಲಿ ಪ್ರವೀಣರಾಗಿದ್ದರು. ಹರಿಹರನ ಸಮಕಾಲೀನ ಕೆರೆಯ ಪದ್ಮರಸನು ಆನೆಯ ಮೇಲೆ ಗ್ರಂಥ ಭಂಡಾರವನ್ನು ಹೇರಿಕೊಂಡು ಬಂದ ತ್ರಿಭುವನ ತಾತ ಎಂಬ ವೈಷ್ಣವ ಧರ್ಮದ ಬಹು ದೊಡ್ಡ ಸಂಸ್ಕೃತ ವಿದ್ವಾಂಸನನ್ನು ವಾದದಲ್ಲಿ ಸೋಲಿಸಿದ್ದು ವೀರಶೈವ ಧರ್ಮದ ಸಾಮಾಜಿಕ ಇತಿಹಾಸದ ದೊಡ್ಡ ಘಟನೆಗಳಲ್ಲೊಂದು. ಆಮೇಲೆ ಬಂದ ಚಾಮರಸ, ಶಿವಗಣ ಪ್ರಸಾದಿ ಮಹಾದೇವಯ್ಯ, ಹಲಗೆಯ ದೇವ, ಮಗ್ಗೆಯ ಮಾಯಿದೇವ, ಗುರುಬಸವ, ನಿಜಗುಣ ಶಿವಯೋಗಿ, ಗುಬ್ಬಿ ಮಲ್ಲಣಾರ್ಯ, ಚನ್ನವೀರದೇವ, ನೀಲಕಂಠಾಚಾರ್ಯ ಇವರೇ ಮೊದಲಾದವರ ಮೂಲಕ ಸಂಸ್ಕೃತ ಪಾಂಡಿತ್ಯ ಪರಂಪರೆ ಮುಂದುವರೆಯಿತು. ಇಪ್ಪತ್ತನೇ ಶತಮಾನದ ಆದಿಯಲ್ಲಿ ಸಿ. ಆರ್. ಕರಿಬಸವಶಾಸ್ತ್ರಿ, ಎಸ್. ಆರ್ ಕರಿಬಸವಶಾಸ್ತ್ರಿ, 'ಅಭಿನವ ಕಾಳಿದಾಸ' ಬಸವಪ್ಪ ಶಾಸ್ತ್ರಿ ಮೈಸೂರು ಗವಿಮಠದ ಗೌರಿಶಂಕರ ಸ್ವಾಮೀಜಿ ಇವರೂ ಅದೇ ಪರಂಪರೆಯನ್ನು ಮುಂದುವರಿಸಿದರು. ಹಾಗಲ್ವಾಡಿ ಸಂಸ್ಥಾನವು ನಡೆಯಿಸುತ್ತಿದ್ದ ಸಂಸ್ಕೃತ ಪಾಠಶಾಲೆಯ ಕಟ್ಟಡ ಈಗಲೂ ಇದೆ. ಕರ್ನಾಟಕದಲ್ಲಂತೂ ಸಂಸ್ಕೃತ ಪಾಂಡಿತ್ಯದಲ್ಲಿ ಬ್ರಾಹ್ಮಣರಿಗೆ ಸರಿಸಮನಾಗಿ, ಸವಾಲಾಗಿ ನಿಂತವರೆಂದರೆ

ವೀರಶೈವರು. ತಮ್ಮನ್ನು ಬ್ರಾಹ್ಮಣರು ಶೂದ್ರರೆಂದು ವರ್ಗೀಕರಿಸಿ ಸ್ವಲ್ಪ ಹೀನಾಯವಾಗಿ ಕಾಣುವುದು ವೀರಶೈವರಿಗೆ ಸಹಜವಾಗಿಯೇ ಸಹ್ಯವಾಗಲಿಲ್ಲ. ಈ ವಿಷಯದಲ್ಲಿ ಕರ್ನಾಟಕದಲ್ಲಿ ಬ್ರಾಹ್ಮಣೇತರ ವರ್ಗದಲ್ಲಿ ಸಿಡಿದೆದ್ದು ನಿಂತ ಹಿಂದೂಗಳೆಂದರೆ ವೀರಶೈವರೇ. ಉಳಿದ ಹಿಂದೂ ಪಂಗಡಗಳಿಗೆ ಹಾಗೆ ಪ್ರತಿಭಟಿಸಲು ಬೇಕಾದ ಸಂಸ್ಕೃತ ಪಾಂಡಿತ್ಯ, ಪರಂಪರೆಯ ಹಿನ್ನೆಲೆ, ಇವು ತಂದು ಕೊಡುವ ಆತ್ಮವಿಶ್ವಾಸಗಳು ಇರಲಿಲ್ಲ.

ಘರ್ಷಣೆಗಳು :

ಮೈಸೂರಿನಲ್ಲಿ ೧೮೮೪ರಲ್ಲಿ ಬ್ರಾಹ್ಮಣರಿಗೂ ವೀರಶೈವರಿಗೂ ಬಹು ದೊಡ್ಡ 'ಧರ್ಮಯುದ್ಧ' ನಡೆಯಿತು. ಅದರಲ್ಲಿ ಬ್ರಾಹ್ಮಣರೇ ಕೌರವರು, ವೀರಶೈವರೇ ಪಾಂಡವರು, ಸಿ.ಆರ್. ಕರಿಬಸವ ಶಾಸ್ತ್ರಿಗಳೇ ಗಾಂಡೀವಿ, ಯಜಮಾನ್ ವೀರಸಂಗಪ್ಪನವರೇ ಕೃಷ್ಣ ಇತ್ಯಾದಿಯಾಗಿ ಮುಂದೆ ವೀರಶೈವ ಪತ್ರಿಕೆಗಳು ಬಣ್ಣಿಸಿದವು. ಅದರಲ್ಲಿ ತ್ರಿಮತಸ್ಥ ಬ್ರಾಹ್ಮಣರ ಜೊತೆ ಕರಿಬಸವ ಶಾಸ್ತ್ರಿಗಳು ವಾದಿಸಿ ಜಯಶೀಲರಾದರಂತೆ. ಜಯಶೀಲರಾದರೋ ಇಲ್ಲವೋ ತಿಳಿಯದು; ಆದರೆ ಬೌದ್ಧಿಕ ಘರ್ಷಣೆಗಳಾದುದು, ವೀರಸಂಗಪ್ಪನವರು ಒಂದು ಕರಪತ್ರ ಹೊರಡಿಸಿ ತಮ್ಮ ಧರ್ಮಗ್ರಂಥಗಳು "ಪರಮತಸ್ಥರ ಕೈಗೇನಾದರೂ ಸಿಕ್ಕಿ ಪರಿಹರಿಸಲ್ಪಟ್ಟರೆ ನಿರ್ನಾಮವಾಗುವ" ಅಪಾಯವಿರುವುದರಿಂದ ಅವುಗಳ ಮುದ್ರಣಕ್ಕೆ ಚಂದಾ ನೀಡಲು ವೀರಶೈವ ಸಮಾಜಕ್ಕೆ ಮನವಿ ಮಾಡಿಕೊಂಡರು. (ಆ ಮನವಿಯ ಪ್ರತಿ ಕರ್ನಾಟಕ ಸರಕಾರದ ಪತ್ರಾಗಾರದಲ್ಲಿದೆ) ಬ್ರಾಹ್ಮಣರಂತೆಯೇ ತಾವೂ ಗಣ್ಯರು, ತಮಗೂ ಒಂದು ವಿದ್ವತ್ತಿನ, ಧಾರ್ಮಿಕ ಪರಂಪರೆಯಿದೆಯೆಂಬುದನ್ನು ವೀರಶೈವರಿಗೆ ಮರೆಯುವುದು ಕಷ್ಟವಾಗಿತ್ತು. ತಮ್ಮನ್ನು ಶೂದ್ರರೆಂದು ಕರೆಯುವುದನ್ನು ಅವರು ಸಹಿಸಲಿಲ್ಲ. ೧೯೨೫ರಷ್ಟು ಈಚೆಗೆ ನಿಜಾಂ ಪ್ರಾಂತದಲ್ಲಿದ್ದ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಪರಳಿ ವೈದ್ಯನಾಥೇಶ್ವರನ ರುದ್ರಾಭಿಷೇಕಕ್ಕೆ "ಶೂದ್ರ"ರಾದ ವೀರಶೈವರಿಗೆ ಹಕ್ಕಿಲ್ಲವೆಂದು ಅಲ್ಲಿನ ಬ್ರಾಹ್ಮಣರು ಅಡ್ಡಿಪಡಿಸಿದಾಗ, ವೀರಶೈವರು ಆ ಬಗ್ಗೆ ಮೊಕದ್ದಮೆ ದಾಖಲು ಮಾಡಿ, ಅದರಲ್ಲಿ ತಮ್ಮ "ಲಿಂಗಿ ಬ್ರಾಹ್ಮಣರ ವೈದಿಕತ್ವ"(ವೀರಶೈವರ ವೈದಿಕತ್ವದ) ಬಗ್ಗೆ ವಾದಿಸಿ ೧೯೨೯ರಲ್ಲಿ ತಮ್ಮ ಪರ ತೀರ್ಪನ್ನು ಪಡೆದರು. ೧೯೨೩ರಲ್ಲಿ "ಶೂದ್ರ"ರಾದ ವೀರಶೈವರೊಬ್ಬರು ಬನವಾಸಿಯ ಮಧುಕೇಶ್ವರ ದೇವಾಲಯವನ್ನು ಪ್ರವೇಶಿಸಿದ್ದಕ್ಕಾಗಿ ದಂಡ ವಿಧಿಸಿದ ಬ್ರಾಹ್ಮಣರ ವಿರುದ್ಧ ವೀರಶೈವರು ಬೊಂಬಾಯಿ ಪ್ರಾಂತದ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ, ತಾವು ನಿಜವಾದ 'ಲಿಂಗಿ ಬ್ರಾಹ್ಮಣ'ರೆಂದು, ತಮ್ಮ ಶಿವದಾರವೇ ಯಜ್ಞೋಪವೀತವೆಂದು ವಾದಿಸಿದರು. ಆ ಮೊಕದ್ದಮೆಯಲ್ಲಿ ಫ.ಗು.ಹಳಕಟ್ಟಿಯವರು ವೀರಶೈವರ ಪರವಾಗಿ ವಕಾಲತ್ತು ವಹಿಸಿದ್ದವರಲ್ಲಿ ಒಬ್ಬರು. ೧೯೨೫ರಲ್ಲಿ ಬೊಂಬಾಯಿಯ ಉನ್ನತ ನ್ಯಾಯಾಲಯವು "ವೀರಶೈವರು ಶೂದ್ರರಲ್ಲ, ಶ್ರೇಷ್ಠ ವರ್ಗದ ಲಿಂಗಿ ಬ್ರಾಹ್ಮಣರು. ಅವರಿಗೆ ವೇದಾಧಿಕಾರವಿದೆ" ಎಂಬ ತೀರ್ಪು ನೀಡಿತು. ಇದು "ವೇದಾಧಿಕಾರ ವಿಜಯಂ" ಕೃತಿಯಲ್ಲಿ ನಿರೂಪಿತವಾಗಿದೆ. ನಾನು ವಿದ್ಯಾರ್ಥಿಯಾಗಿದ್ದಾಗ (1950) ಬಾಡಿಗೆ ರೂಮು ಕೇಳಲು ಹೋದಾಗ ಮೈಸೂರಿನ ಬ್ರಾಹ್ಮಣರು ನನ್ನನ್ನು ಶೂದ್ರ ಎಂದು ಕರೆದುದು ನೆನಪಿದೆ. ಆ ಬಗ್ಗೆ ನಾನು ಕಹಿ ಭಾವನೆ ಇಟ್ಟುಕೊಂಡಿಲ್ಲ.

ಹಿಂದೂ ಧರ್ಮದ ವಿರುದ್ಧ ಅಲ್ಲ :

ಮೇಲಿನ ಮೂರು ಘಟನೆಗಳನ್ನು ಪ್ರಸ್ತಾಪಿಸುವ ಉದ್ದೇಶ ಆ ವರ್ಗಗಳ ಜನರ ಶ್ರೇಷ್ಠತೆ ಕನಿಷ್ಠತೆಗಳನ್ನು ಸೂಚಿಸುವುದಲ್ಲ. (ಇಬ್ಬರೂ ಸಮಾನ ಗೌರವಾರ್ಹರು) ಬ್ರಾಹ್ಮಣರು ತಮ್ಮನ್ನು

ಶೂದ್ರರೆಂದು ಕರೆದಾಗ ವೀರಶೈವರು ಬ್ರಾಹ್ಮಣರ ವಿರುದ್ಧ ಪ್ರತಿಭಟಿಸಿದರೇ ಹೊರತು ತಾವು ಹಿಂದೂಗಳಲ್ಲವೆಂದೂ ವೇದಾಗಮಗಳನ್ನು ಧಿಕ್ಕರಿಸಿದ ಧರ್ಮಕ್ಕೆ ತಾವು ಸೇರಿದವರೆಂದು ಹೇಳಿಕೊಳ್ಳಲಿಲ್ಲವೆಂಬುದು ಬಹು ಮುಖ್ಯ. ಕಳೆದ ಶತಮಾನದ ಸುಮಾರು ನಾಲ್ಕನೇ ದಶಕದಲ್ಲಿ ಹಿಂದುಗಳೆಂದರೆ ಬ್ರಾಹ್ಮಣರು, ಅವರ ರೀತಿ ನೀತಿಯೇ ಹಿಂದುತ್ವವೆಂದು ತಪ್ಪಾಗಿ ಭಾವಿಸಿದ ಕೆಲ ವೀರಶೈವರು ತಾವು ಹಿಂದುಗಳಲ್ಲವೆಂದು ಧ್ವನಿ ಎತ್ತಿದಾಗ ಅದರ ವಿರುದ್ಧ ಫ.ಗು.ಹಳಕಟ್ಟಿ ಮತ್ತು ಹರ್ಡೇಕರ್ ಮಂಜಪ್ಪನವರು ಧ್ವನಿ ಎತ್ತಿ, ವೀರಶೈವರು ಹಿಂದುಗಳೇ ಎಂದು ಪ್ರಬಲವಾಗಿ ಪ್ರತಿಪಾದಿಸಿದರು. ಆಲೂರು ವೆಂಕಟರಾಯರು ಪಿ.ಡಿ.ಸಾವರ್ಕರ್ ಅವರಿಗೆ ೨೭-೬-೧೯೩೮ರಂದು ಬರೆದಿರುವ ಪತ್ರದಲ್ಲಿ (ಇದು ಕರ್ನಾಟಕ ಪತ್ರಾಗಾರದಲ್ಲಿದೆ) ಹಳಕಟ್ಟಿಯವರು ಬಿಜಾಪುರದ ''ಹಿಂದೂ ಸಭಾ''ದ ಅಧ್ಯಕ್ಷರಾಗಿರುವುದನ್ನು ತಿಳಿಸಿದ್ದಾರೆ. ಮಂಜಪ್ಪನವರು ತಮ್ಮ ಆತ್ಮಕಥನದಲ್ಲಿ ಹೇಳಿರುವಂತೆ ೧೯೨೦-೨೧ರ ಸುಮಾರಿನಲ್ಲಿ ವೀರಶೈವರು ಖಾದಿ ಧರಿಸುವುದು ಬ್ರಾಹ್ಮಣರ ಕಾರ್ಯವೆಂದು ಭಾವಿಸಿ, ತಾವು ಮಾತ್ರ ಖಾದಿ ಧರಿಸಿದ್ದಕ್ಕೆ ತಮ್ಮನ್ನು ಬ್ರಾಹ್ಮಣರ ಗುಂಪಿಗೆ ಸೇರಿಸಿ ಗೇಲಿ ಮಾಡಿದ್ದನ್ನು ದಾಖಲು ಮಾಡಿದ್ದಾರೆ. ಬ್ರಿಟಿಷರ ಆಳ್ವಿಕೆ ವಿರುದ್ಧ ವೀರಶೈವರು ಕಾಂಗ್ರೆಸ್ ಸೇರಲು ನಿರ್ಧರಿಸಿದ್ದು ೧೯೩೦ರಲ್ಲಿ ಎಂದು ಹೇಳುತ್ತಾರೆ. ೧೯೨೭ರಲ್ಲಿ ಅನ್ಯಮತೀಯರ ದಾಳಿಗೆ ತುತ್ತಾದ ಗುಲ್ಬರ್ಗ ಶರಣ ಬಸವೇಶ್ವರ ದೇವಾಲಯಕ್ಕೆ ಗಾಂಧೀಜಿಯವರನ್ನು ಮಂಜಪ್ಪ ಕರೆದೊಯ್ದಾಗ, ಅಲ್ಲಿನ ಅರ್ಚಕರು ಆ ದೌರ್ಜನ್ಯದ ಸಮಯದಲ್ಲಿ ಓಡಿ ಹೋಗದೆ ಪ್ರಾಣವನ್ನು ಪಣವಾಗಿಟ್ಟು ಅದನ್ನು ಎದುರಿಸಬೇಕಿತ್ತೆಂದು ಗಾಂಧೀಜಿ ಆ ಅರ್ಚಕರಿಗೆ ಹೇಳಿದ್ದನ್ನು ಮತ್ತು ಆ ವಿಷಯವನ್ನು ಗಾಂಧೀಜಿ ಬಹಿರಂಗ ಸಭೆಯಲ್ಲಿ ಪ್ರಸ್ತಾಪಿಸಿದ್ದನ್ನು ಮಂಜಪ್ಪನವರು ದಾಖಲಿಸಿದ್ದಾರೆ. ವಚನ ವಾಙ್ಮಯವನ್ನೂ ವೀರಶೈವ ಸಿದ್ಧಾಂತವನ್ನೂ ಆಳವಾಗಿ ಅಭ್ಯಸಿಸಿರುವ ಮೇಲ್ಕಂಡ ವ್ಯಕ್ತಿಗಳಲ್ಲದೆ ಶಿ.ಶಿ.ಬಸವನಾಳ, ಎಂ.ಆರ್.ಶ್ರೀನಿವಾಸಮೂರ್ತಿ, ಆರ್.ಸಿ. ಹಿರೇಮಠ, ಎಲ್.ಬಸವರಾಜು, ಎ.ಎಲ್.ಶಿವರುದ್ರಪ್ಪ (ತತ್ವಶಾಸ್ತ್ರ ಪ್ರಾಧ್ಯಾಪಕರು) ಇವರೇ ಮೊದಲಾದವರು ಭಾರತೀಯ ತತ್ವಶಾಸ್ತ್ರದಲ್ಲಿ ಅಂತಾರಾಷ್ಟ್ರೀಯ ಖ್ಯಾತಿಯ ಡಾ. ರಾಧಾಕೃಷ್ಣನ್‌ರಂಥವರೂ ವೀರಶೈವವು ಹಿಂದೂ ಧರ್ಮದ ಭಾಗವೆಂದೇ ಸಾರಿದ್ದಾರೆ. (ಸಾಖರೇ, ಸೂರ್ಯಕಾಂತ ಘುಗ್ರಿ, ಹಿರೇಮಲ್ಲೂರ್ ಈಶ್ವರನ್‌ರಂತಹ ಕೆಲವು ವಿದ್ವಾಂಸರು ವೀರಶೈವರು ಹಿಂದೂಗಳಲ್ಲವೆಂದೂ ಹೇಳಿದ್ದಾರೆ).

ಹಿಂದೂ ಧರ್ಮದ ವ್ಯಾಖ್ಯೆ :

ಹಿಂದೂ ಧರ್ಮವೆಂಬುದೇ ಇಲ್ಲ; ಅದೊಂದು ದೇಶದ ಹೆಸರು; ಪಶ್ಚಿಮದಿಂದ ದಾಳಿಯಿಟ್ಟ ಗ್ರೀಕರು ಪರ್ಷಿಯನ್ನರು ಸಿಂಧೂ (ಹಿಂದೂ) ನದಿಯ ಪೂರ್ವಕ್ಕೆ ಇದ್ದ ಜನರನ್ನು ಹಿಂದುಗಳೆಂದು ಕರೆಯುತ್ತಿದ್ದುದರಿಂದ ಇದು ಬರೀ ದೇಶ ಅಥವ ಜನಾಂಗ ವಾಚಕವೆಂದೂ ಕೆಲವರು ಹೇಳುತ್ತಾರೆ. ''ಹಿಂದೂ'' ಹೆಸರು ಈ ದೇಶಕ್ಕೆ ಬಂದ ರೀತಿ ಅದೇ ಅನುಮಾನವಿಲ್ಲ. ಆ ದೇಶದವರ ಧರ್ಮವೇ ''ಹಿಂದೂ ಧರ್ಮ''. ಹಿಂದೂ ಧರ್ಮವೆಂಬುದು ಇರುವುದು ಒಂದು ವಾಸ್ತವ. ''ಹಿಂದೂ'' ಧರ್ಮದ ಸ್ಥಾಪಕ ಯಾರು ? ಅವರ ಕಾಲ ಯಾವುದು? ಅವರ ಧರ್ಮ ಗ್ರಂಥ ಯಾವುದು ಇತ್ಯಾದಿ ಪ್ರಶ್ನೆಗಳನ್ನು ವೀರಶೈವ ಧರ್ಮದ ಬಗ್ಗೆಯೂ ಎತ್ತಬಹುದು. ಬೌದ್ಧ, ಕ್ರೈಸ್ತ, ಇಸ್ಲಾಂ, ಸಿಖ್ ಧರ್ಮಗಳಂತೆ ಹಿಂದೂ ಧರ್ಮವು ನಿರ್ದಿಷ್ಟ ವ್ಯಕ್ತಿಯ ಹೆಸರಲ್ಲಿ ರೂಪುಗೊಂಡದ್ದಲ್ಲ. ಅದಕ್ಕೆ ಒಂದು ನಿರ್ದಿಷ್ಟ ಧರ್ಮಗ್ರಂಥವಿಲ್ಲವೆಂಬುದು ನಿಜ. ವೀರಶೈವವೂ ಕೂಡ ಕೆಲವರ ಪ್ರಕಾರ ಪಂಚಾಚಾರ್ಯರಿಂದ, ಇನ್ನು ಕೆಲವರ ಪ್ರಕಾರ ಬಸವಣ್ಣನವರಿಂದ ಸ್ಥಾಪಿತವಾಯಿತು. ಆ ಎರಡೂ ಅಭಿಪ್ರಾಯಗಳು ಮಾನ್ಯವಲ್ಲ.

ಅದರ ಸ್ಥಾಪಕ ಯಾರು - ಅಂತಹ ವ್ಯಕ್ತಿ ಇದ್ದರೆ (ಇರುವುದು ಅಸಂಭವ) ನಮಗೆ ತಿಳಿಯದು ಎಂಬುದೇ ಸದ್ಯದ ತೀರ್ಮಾನ. ಸ್ಥಾಪಕರ ವಿಷಯದಲ್ಲಿ ಇರುವ ನಂಬಿಕೆಯ ಪ್ರಶ್ನೆ ಬೇರೆ. ಕೆಲವರ ಪ್ರಕಾರ ರೇಣುಕರು ಅಗಸ್ತ್ಯನಿಗೆ ಬೋಧಿಸಿದರೆಂದು ಹೇಳಲಾದ ಸಿದ್ಧಾಂತ ಶಿಖಾಮಣಿಯು ವೀರಶೈವರ ಗ್ರಂಥ ; ಕೆಲವರ ಪ್ರಕಾರ ಶರಣರ ವಚನ ವಾಙ್ಮಯ ವೀರಶೈವರ ಧರ್ಮ ಗ್ರಂಥ. ಆದರೂ ವೀರಶೈವನೆಂಬ ಧರ್ಮದ ಅಸ್ತಿತ್ವವನ್ನು ಒಪ್ಪುವಂತೆ ಹಿಂದೂ ಧರ್ಮದ ಅಸ್ತಿತ್ವವನ್ನು ಎಲ್ಲ ಪ್ರಾಜ್ಞರೂ ಒಪ್ಪಿದ್ದಾರೆ. ಹಿಂದೂ ಎಂಬುದು ಹಲವು ಮತಗಳ, ನಂಬಿಕೆ ಶ್ರದ್ಧೆ ಆಚರಣೆಗಳ ಒಂದು ಒಕ್ಕೂಟ. ಈ ಬಗ್ಗೆ ವಿದ್ವಾಂಸರು ಸಾಕಷ್ಟು ಚಿಂತನೆ ನಡೆಯಿಸಿದ್ದಾರೆಂಬುದನ್ನು ಬಹಳ ಜನ ಅರಿಯರು. ಅದರ ಪ್ರಮುಖ ಲಕ್ಷಣವನ್ನು ಹೇಳಿರುವ ಬಾಲಗಂಗಾಧರ ತಿಲಕರ ಸೂತ್ರವು ಎಲ್ಲರಿಗೂ ಮಾನ್ಯವಾಗಿದೆ. (ಸರ್ವೋನ್ನತ ನ್ಯಾಯಾಲಯವೂ ಒಪ್ಪಿದೆ). ಅದು ಹೀಗಿದೆ : ''೧) ವೇದಗಳನ್ನು ಗೌರವದಿಂದ ಕಾಣುವುದು ; ೨)ಮೋಕ್ಷಕ್ಕೆ ಹಲವು ಮಾರ್ಗಗಳಿವೆ ಎಂಬ ಬಗ್ಗೆ ವಿಶ್ವಾಸ ; ೩)ಸತ್ಯ ಸಾಕ್ಷಾತ್ಕಾರಕ್ಕಾಗಿ ಆರಾಧಿಸುವ ದೈವಗಳು ಹಲವು ಇವೆ ಎಂಬ ಬಗ್ಗೆ ನಂಬಿಕೆ''. ವಿವೇಕಾನಂದರು ಹೇಳುವಂತೆ ಹಿಂದೂ ಧರ್ಮದ ವೈಶಿಷ್ಟ್ಯವಿರುವುದು ತತ್ವವನ್ನು ಬರೀ ನಂಬುವುದರಲ್ಲಿ ಅಲ್ಲ, ಅದೇ ಆಗುವುದರಲ್ಲಿ ("...not in believing, but in becoming'). ಈ ಎಲ್ಲ ಲಕ್ಷಣಗಳೂ ವೀರಶೈವದಲ್ಲಿದೆ.

ಹಿಂದೂ ಧರ್ಮದಂತೆಯೇ ವೀರಶೈವದಲ್ಲಿಯೂ ತೋರಿಕೆಗೆ ಕೆಲವು ವಿರೋಧಗಳಿವೆ. ಉದಾಹರಣೆಗೆ, ವೀರಶೈವದ ಒಂದು ಭಾಗವು ದೇವಾಲಯಗಳ ಶಿವಲಿಂಗಗಳಿಂದ ಮೂಡಿ ಬಂದ ಆಚಾರ್ಯರೇ ಸ್ಥಾಪಕರು ಎಂದು ನಂಬಿದರೆ, ದೇವಾಲಯಗಳ ಶಿವಲಿಂಗಗಳ ಆರಾಧನೆ ತಪ್ಪು. ಇಷ್ಟಲಿಂಗ ಲಿಂಗ ಪೂಜೆ ಮಾತ್ರ ಸ್ವೀಕಾರಾರ್ಹ ಎಂದು ಇನ್ನೊಂದು ಭಾಗ ಪ್ರತಿಪಾದಿಸುತ್ತದೆ. ಇಬ್ಬರೂ ಇಷ್ಟಲಿಂಗ ಧಾರಣೆಯ ಮಹತ್ವವನ್ನು ಒಪ್ಪುತ್ತಾರೆ. ಉತ್ತರ ಕರ್ನಾಟಕದಲ್ಲಿ ಅಗ್ನಿ ಪ್ರತಿಷ್ಠಾಪನೆಯ ನಿಷೇಧವಿದ್ದರೆ ದಕ್ಷಿಣ ಕರ್ನಾಟಕದಲ್ಲಿ ಗೃಹ ಪ್ರವೇಶ ಸಂದರ್ಭದಲ್ಲಿ ಹೋಮ ಹವನಾದಿಗಳನ್ನು ನೆರವೇರಿಸುತ್ತಾರೆ. ಅವರವರಿಗೆ ತಮ್ಮದೇ ಸರಿಯೆಂದು ಇನ್ನೊಬ್ಬರದು ಸರಿಯಲ್ಲವೆಂದು ಕಂಡು ಬಂದರೆ ಅದು ಸ್ವಾಭಾವಿಕವೇ. ಎರಡನ್ನೂ ವೀರಶೈವದ ಪ್ರಾದೇಶಿಕ ಪ್ರಭೇದಗಳೆಂದು- ಭಾಷಾ ಪ್ರಭೇದಗಳ ರೀತಿ- ಭಾವಿಸುವುದೇ ವಿವೇಕದ ಮಾರ್ಗ. (೨ನೇ ಭಾಗ ಮುಂದಿನ ಸಂಚಿಕೆಯಲ್ಲಿ)

ದಿ. ೨೪-೫-೨೦೦೦ದ ಕನ್ನಡ ಪ್ರಭಾ ದಿನಪತ್ರಿಕೆಯಲ್ಲಿ ಪ್ರಕಟವಾದ ಡಾ|| ಚಿದಾನಂದ ಮೂರ್ತಿಯವರ ಲೇಖನವನ್ನು ಪುನರ್‌ಪ್ರಕಟಿಸಲಾಗಿದೆ ಮತ್ತು ವಿಮರ್ಶಿಸಲಾಗಿದೆ. ★

ಕಾಯಕ -ಸ್ವಯಂ ಪ್ರೇರಣೆಯ ESMA

ನೀಡಿತು ಪ್ರೇರಣೆ ಕಾಯಕ ತತ್ವ
ಕಾಯಕದಲ್ಲೇ ಕಾಣಲು ಕೈಲಾಸ
ಆಯಿತು ಅನಿವಾರ್ಯ ಎಸ್ಮಾ ಜಾರಿ
ಮಾಡಿಸಲು ಆರಂಭ ಸರ್ಕಾರಿ ಕೆಲಸ

-ಮಹಾಂತಪ್ಪ ನಂದೂರ್

ಕಲ್ಯಾಣ ಕಿರಣದ ಎರಡು ಪ್ರತಿಗಳು ಬರುತ್ತಿದ್ದರೆ ಒಂದರ ಕ್ರಮ ಸಂಖ್ಯೆ ಕಾಣಿಸಿ, ದಯವಿಟ್ಟು ಪತ್ರ ಬರೆಯಿರಿ

-ವ್ಯವಸ್ಥಾಪಕರು

ಸಮಸ್ಯೆ-ಸಮಾಧಾನ

ಚನ್ನಬಸವಣ್ಣ, ಗೋಕಾಕ್ - ಹಿಂದು, ಬೌದ್ಧ, ಜೈನ ಇತ್ಯಾದಿ ಅನೇಕ ಮಠಗಳು, ಮಠಾಧಿಕಾರಿಗಳು ಇದ್ದಾರೆ. ಅವರಿಗೂ ವಿಪುಲ ಸಂಖ್ಯೆಯಲ್ಲಿರುವ ವೀರಶೈವ ಮಠಾಧಿಕಾರಿಗಳಿಗೂ ವ್ಯತ್ಯಾಸವೇನು ?

★ ಅವರುಗಳು ಯಾರೂ ತಮ್ಮ ತಮ್ಮ ಧರ್ಮ ಪ್ರಚಾರಕ್ಕೆ ವಿರೋಧ ಮಾಡುವುದಿಲ್ಲ, ಆತಂಕ ಒಡ್ಡುವುದಿಲ್ಲ. ಲಿಂಗಾಯತ ಮಠಾಧಿಕಾರಿಗಳ ವೈಶಿಷ್ಟ್ಯವೇನೆಂದರೆ ಇನ್ನಿತರರ ಧರ್ಮ ಪ್ರಚಾರಕ್ಕೆ ಕೆಲವೊಮ್ಮೆ ಲಿಂಗಾಯತ ಧರ್ಮಕ್ಕೆ ಆತಂಕಕಾರಿಯಾಗಿರುವ ಪಂಥಗಳ ಬೆಳವಣಿಗೆಗೆ ಸಹ ವಿರೋಧ ಒಡ್ಡುವುದಿಲ್ಲ; ಆದರೆ ತಮ್ಮ ಧರ್ಮ ಪ್ರಚಾರಕ್ಕೆ ಅವರು ಸದಾ ವಿರೋಧ ಮಾಡುವರು. ಇನ್ನೂ ಒಂದು ವೈಶಿಷ್ಟ್ಯ ಲಿಂಗಾಯತ ಮಠಾಧೀಶರಲ್ಲಿದೆ. ಅನ್ಯ ಧರ್ಮ, ಮತ, ಪಂಥಗಳವರು ತಮ್ಮ ತಮ್ಮ ಶಕ್ತ್ಯಾನುಸಾರ ಧರ್ಮಬೋಧೆ ಮಾಡುವರು, ಇನ್ನಿತರರಿಗೆ ತೊಂದರೆ ಕೊಡಲು ಹೋಗುವುದಿಲ್ಲ. ಲಿಂಗಾಯತ ಮಠಾಧೀಶರ ವೈಶಿಷ್ಟ್ಯವೆಂದರೆ ತಮಗೆ ಧರ್ಮಬೋಧೆ ಮಾಡಲು ಆಗುತ್ತೋ ಇಲ್ಲವೋ ಇನ್ನಿತರರು ಮಾಡುವ ಧರ್ಮಪ್ರಚಾರ ಕೆಡಿಸಬೇಕೆಂಬ ಅಪೂರ್ವವಾದ ಮಹತ್ವಾಕಾಂಕ್ಷೆ(?)ಯುಳ್ಳವರು.

-ಫಾಲಾಕ್ಷ, ಊರ ಹೆಸರು ಬೇಡ - ನಮ್ಮೂರಲ್ಲಿ ಒಂದು ಮಠವಿದೆ. ಅವರು ಇತ್ತೀಚಿನವರೆಗೆ ವಿರಕ್ತ ಮಠ ಎಂದು ಬರೆದುಕೊಳ್ಳುತ್ತಿದ್ದವರು, ಇತ್ತೀಚೆಗೆ ಮಠದ ಹೆಸರು ಬದಲಿಸಿದರಲ್ಲದೆ ಸ್ವತಂತ್ರ ಮಠ ಎಂದು ಬರೆದುಕೊಳ್ಳುತ್ತಿದ್ದಾರೆ. ಏಕಿರಬಹುದು ?

★ ಬಹುಶಃ ಯಾರಾದರೂ ಸುಂಗೇಶ್ವರ ಮಹಾಸ್ವಾಮಿಗಳು ಇನ್ನಿತರರ ವಿರಕ್ತ ಮಠಗಳನ್ನು ನುಂಗುವ ಸದಭ್ಯಾಸ ಬೆಳೆಸಿಕೊಂಡಿರಬಹುದು. ಅದಕ್ಕೆ ಹೆದರಿ ನಿಮ್ಮೂರ ಸ್ವಾಮಿಗಳು ಮುನ್ನೆಚ್ಚರಿಕೆ ವಹಿಸಿರುವ ಜಾಣರಾಗಿರಬೇಕು.

-ಹೆಚ್.ಎಸ್. ಚನ್ನಬಸವಣ್ಣ, ಜಪಾನ್ - ಜಗತ್ತಿನ ವಿವಿಧ ಧರ್ಮಗಳನ್ನು ತೆಗೆದುಕೊಂಡರೆ ಎಲ್ಲಾ ಧರ್ಮಗಳ ಸ್ಥಾಪಕರೂ ಪುರುಷರೆ. ಉದಾ : ಬೌದ್ಧ ಧರ್ಮ-ಬುದ್ಧ, ಕ್ರೈಸ್ತ ಧರ್ಮ-ಏಸುಕ್ರಿಸ್ತ, ಲಿಂಗಾಯತ ಧರ್ಮ-ಬಸವಣ್ಣನವರು. ಮಹಿಳೆಯರು ಏಕೆ ಧರ್ಮ ಸ್ಥಾಪಕರಾಗಿಲ್ಲ ? ದೇವರು ಸಹ ಪುರುಷ ಪಕ್ಷಪಾತಿಯೇ ಎಂದು ಸಂದೇಹ ಬರುತ್ತಿದೆ.

★ ದೇವರು ವರ ಕೊಟ್ಟರೂ ಪೂಜಾರಿ ವರ ಕೊಡ   ಎಂಬ ಗಾದೆ ಇದೆಯಲ್ಲವೆ ? ವಿದ್ವತ್ತು, ಸ್ವತಂತ್ರ ವಿಚಾರ ಶಕ್ತಿ, ಪ್ರತಿಭೆ ಇದ್ದರೂ ಮಹಿಳೆಯರು ಮುಂದ ಬರಲು ಅಸೂಯಾಪರರಾದ ಪುರುಷ ಧರ್ಮಾಧಿಕಾರಿಗಳು ಬಿಡುವುದಿಲ್ಲ ಎಂಬುದನ್ನು ನಾವು ಪ್ರತ್ಯಕ್ಷ ಅನುಭವಿಸುತ್ತಿರುವಾಗ, ನೀವು ಕಣ್ಣಾರೆ ಕಾಣುತ್ತಿರುವಾಗ ನಿಷ್ಪಕ್ಷಪಾತಿಯಾದ ದೇವರನ್ನು ಏಕೆ ದೂಷಿಸಬೇಕು ?

-ಶಿವಾನಂದ ಮಠದ, ಬಳ್ಳಾರಿ - ನಾನೊಬ್ಬ ಶಿಕ್ಷಕ, ಧರ್ಮದಲ್ಲಿ ಆಸಕ್ತಿಯುಳ್ಳವನು. ಆಕಸ್ಮಾತ್ ಬೆಂಗಳೂರಿಗೆ ಕಾರ್ಯ ನಿಮಿತ್ತ ಬಂದಾಗ ಕೊಳ್ಳದ ಮಠದ ಕಾರ್ಯಕ್ರಮವೊಂದನ್ನು ನಗರದಲ್ಲಿ ಇಂದಿನ ಕಾರ್ಯಕ್ರಮದಲ್ಲಿ ಗಮನಿಸಿ ಹೋಗಿ ಭಾಗವಹಿಸಿದೆ. ವಿರಕ್ತ ಮಠವಂತೆ ! ಸ್ವಾಮಿಗಳು ಲೌಕಿಕ ತಾಯಿಯ ಪುಣ್ಯತಿಥಿಯನ್ನು ಅದ್ದೂರಿಯಾಗಿ ಇಟ್ಟಿದ್ದರು. ಭರ್ಜರಿ ರೇಷ್ಮೆ ಸೀರೆಯುಟ್ಟು, ವಿಭೂತಿ ಇಲ್ಲದ ಕೇವಲ ವಿಶಾಲವಾದ ಕೆಂಪು ಕುಂಕುಮವಿಟ್ಟ ಆ ತಾಯಿಯ ಫೋಟೋವನ್ನು ಆಹ್ವಾನ ಪತ್ರದ ಮೇಲೆ ಮುದ್ರಿಸಿದ್ದರು. ನೋಡಿ ದಂಗಾದೆ. ವಿರಕ್ತರು ತಾಯಿಯ ಪುಣ್ಯತಿಥಿಯನ್ನು ಹೀಗೆ ಮಾಡಬಹುದೆ ?

★ ಶ್..... ಸುಮ್ಮನಿರಿ. ಲಿಂಗಾಯತ ಸಮಾಜದಲ್ಲಿ ಸತ್ಯವನ್ನು ನುಡಿಯುವುದು ಬಹಳ ಕಷ್ಟಕರ. ಸತ್ಯ ನುಡಿದರೆ ನೀವು ವಿವಾದಾಸ್ಪದ ವ್ಯಕ್ತಿಯಾಗಿ ಅನೇಕರ ಕೆಂಗಣ್ಣಿಗೆ ಪಾತ್ರರಾಗುವಿರಿ. ಕುರುಡರ ರಾಜ್ಯದಲ್ಲಿ ಕಣ್ಣಿದ್ದವನೇ ಅಪರಾಧಿ ಎಂಬುದು ತಿಳಿದಿರಲಿ.

ಪತ್ರ ವಿಮರ್ಶೆ

ಪತ್ರ-೧ ಹೆಚ್.ಎಸ್.ಚನ್ನಬಸವಣ್ಣ, ಜಪಾನ್

ಈಗ ಕೆಲವು ದಿನಗಳ ಹಿಂದೆ ಒಂದು ದೈನಿಕದಲ್ಲಿ ದಿವಾನ್‌ಜಿ ಎಂಬುವವರ ಬರಹ ಓದಿದೆ. ಅವರ ವಿಶ್ಲೇಷಣೆ ವಿಲಕ್ಷಣವಾಗಿದೆ ೧೮೫೭ರ ಸಿಪಾಯಿ ದಂಗೆ ಏಕೆ ಸೋತಿತು ? ಛತ್ರಪತಿ ಶಿವಾಜಿ ಮಹಾರಾಜರೊಬ್ಬರನ್ನು ಬಿಟ್ಟರೆ ಶೂದ್ರರನ್ನಾಗಲೀ, ಪಂಚಮ ವರ್ಣೀಯರನ್ನಾಗಲೀ ಹಿಂದು ರಾಜರು ಸೈನ್ಯಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ನಂತರ ಬ್ರಿಟಿಷರು ಸೇರಿಸಿಕೊಂಡರು. ಆಗ ಈ ಕೆಳವರ್ಣಗಳ ಸೈನಿಕರು ಭಾರತದ ಸ್ವಾತಂತ್ರ್ಯದ ಹೋರಾಟದ ಸಿಪಾಯಿ ದಂಗೆಯಲ್ಲಿ ಆಸಕ್ತಿ ತೋರಲಿಲ್ಲ. ಭಾರತವನ್ನು ವ್ಯಾಪಿಸುತ್ತಿದ್ದ ಬ್ರಿಟಿಷರನ್ನು ಸದೆ ಬಡಿಯಲು ಫ್ರೆಂಚ್ ಮುಂತಾದವರ ಸಹಾಯ ಪಡೆಯಬಹುದಿತ್ತು. ಆದರೆ ಸಮುದ್ರ ದಾಟಿದರೆ ಜಾತಿ ಕೆಟ್ಟು ಹೋಗುವುದೆಂದು ಆ ಪ್ರಯತ್ನ ಮಾಡಲಿಲ್ಲ. ದಿವಾನ್‌ಜಿಯವರ ಈ ಮಾತುಗಳು ತಾರ್ಕಿಕವಾಗಿ ಸರಿಯೆ ?

★ ಇನ್ನೂ ಬಹಳ ಸತ್ಯ ಸಂಗತಿಗಳಿವೆ. ವರ್ಣಾಶ್ರಮ ಆಧಾರಿತ ವೈದಿಕ ಧರ್ಮ ಈ ದೇಶಕ್ಕೆ ಮಾಡಿರುವ ಅನ್ಯಾಯ-ಅನಾಹುತ ಅಷ್ಟಿಷ್ಟಲ್ಲ. ಆಯುರ್ವೇದ, ಶಿಲ್ಪ, ಸಂಗೀತ, ನೃತ್ಯ ಮುಂತಾದ ಕೆಲವೊಂದು ಕೊಡುಗೆಗಳು ಪ್ರಶಂಸಾರ್ಹವಿದ್ದರೂ, ಜನರಲ್ಲಿ ವೈದಿಕ ಧರ್ಮ ಬೆಳೆಸಿದ ನಂಬಿಕೆ, ಭಾವನೆ ಈ ದೇಶದ ಎಲ್ಲ ಅನಿಷ್ಟಗಳಿಗೆ ಮೂಲ. ಜಾತಿಪದ್ಧತಿ, ಬಹುದೇವತೋಪಾಸನೆ, ಜ್ಯೋತಿಷ್ಯ, ಅಸಮಾನತೆ ಮುಂತಾದ ಎಲ್ಲವೂ ಇಂದಿನ ದುಃಸ್ಥಿತಿಗೆ ದೇಶವನ್ನು ತಂದಿವೆ. ಈ ಮೂಲ ಕಾರಣ ಗುರುತಿಸಿ ಎಷ್ಟೋ ಜನ ಸುಧಾರಕರು ಹೊಸಧರ್ಮಗಳನ್ನು ಕೊಟ್ಟರೂ ಅವನ್ನು ಬೆಳೆಯಗೊಡದೆ ವೈದಿಕ ಪುರೋಹಿತಶಾಹಿ ತನ್ನ ಕಪಿಮುಷ್ಟಿಯಲ್ಲೇ ಜನರನ್ನು ಸಿಕ್ಕಿಸಿಕೊಂಡಿತು. ಸೌರಾಷ್ಟ್ರ ಸೋಮನಾಥ ದೇವಾಲಯನ್ನು ಕೊಳ್ಳೆ ಹೊಡೆಯಲು ಬಂದ ದಾಳಿಕಾರರು ೨೭ ಜನ ಅಲ್ಲಿದ್ದ ಪೂಜಾರಿಗಳ ಮನೆತನ ದೇವಾಲಯದ ಆದಾಯದ ಮೇಲೆ ಬದುಕಿದ್ದವರು-೨,೦೦೦ ಕುಟುಂಬ. ಆದರೂ ಸೋಮನಾಥ ಲಿಂಗವನ್ನು ರಕ್ಷಿಸಿಕೊಳ್ಳದೇ ಹೋದರು. ಇದಕ್ಕೆ ಕಾರಣ ಹೋರಾಟ-ಯುದ್ಧ ಕ್ಷತ್ರಿಯರದು ಬ್ರಾಹ್ಮಣರದಲ್ಲ ಎಂಬ ನಂಬಿಕೆ.

ಇನ್ನು ಶಕ್ತಿಶಾಲಿಗಳಾದ ಶೂದ್ರ, ಅಸ್ಪೃಶ್ಯರಿಗೆ ಗುಡಿಗಳ ಒಳಗೆ ಪ್ರವೇಶವಿರಲಿಲ್ಲ. ಹಿಂದು ಸಮಾಜದೊಳಕ್ಕೆ ಬರುತ್ತೇವೆ ಎನ್ನುವವರಿಗೆ ಬಾಗಿಲು ತೆರೆದಿರಲಿಲ್ಲ. ಹೊರಗೆ ಹೋದ ಸ್ವಧರ್ಮೀಯರನ್ನು ಒಳಗೆ ಕರೆದುಕೊಳ್ಳಲು ಸಹ ಅವಕಾಶವಿರಲಿಲ್ಲ. ಇಂಥ ವಿಚಿತ್ರ ಸಂಕುಚಿತತೆಯ ಫಲವನ್ನು ಇಂದು ದೇಶ ಉಣ್ಣುತ್ತಿದೆ ಎಂದರೆ ಸುಳ್ಳಲ್ಲ !

ಪತ್ರ ೨. ಬಸವರಾಜ ಹೊರಟ್ಟಿ, ರಾಷ್ಟ್ರೀಯ ಬಸವ ದಳ, ರೇಗುಣಸಿ

ಜೂನ್ ತಿಂಗಳಿನ ಕಲ್ಯಾಣ ಕಿರಣ ಬಹಳ ಬೋಧಕವಾಗಿದೆ. ಅನೇಕ ಗೊಂದಲ-ಸಂದೇಹಗಳನ್ನು ಪರಿಹರಿಸಿದೆ. ಇನ್ನೊಂದು ಸಂದೇಹ ಉಳಿದಿದೆ. ನಾವು ತ್ರಿಮೂರ್ತಿಗಳ ಪೂಜಕರಲ್ಲ ದೇವಪೂಜಕರು. ಹಾಗಿರುವಾಗ ಪ್ರಾರ್ಥನೆಯಲ್ಲಿ   ಸಾಂಬ ಸದಾಶಿವ   ಏಕೆ ? ಪ್ರಾರ್ಥನೆಯಲ್ಲಿ ಈ ಭಜನೆಯ ಅಗತ್ಯವೇನಿದೆ ?

★ ನಾವು ಅನುಸರಿಸುತ್ತಿರುವ ವಚನೋಕ್ತ ಲಿಂಗಾಯತ ಧರ್ಮ ಶ್ರೀ ಗುರುಬಸವಣ್ಣನವರೇ ಆದಿ ಪ್ರಮಥರಾಗಿ ಕೊಟ್ಟುದು. ಆದರೆ ಭಾರತ ದೇಶದಲ್ಲಿ ಒಂದು ಧಾರ್ಮಿಕ-ಸಾಂಸ್ಕೃತಿಕ ಪರಂಪರೆ ಸಾಗಿ ಬಂದಿದೆ. ಅದರಲ್ಲಿ ಪ್ರಮುಖವಾದವು ಶೈವ ಮತ್ತು ವೈದಿಕ. ಆಗಮ ಆಧಾರಿತ ಶೈವ, ವೇದ

ಆಧಾರಿತ ವೈದಿಕ. ಇವೆರಡರಲ್ಲಿ ಸಾಂಸ್ಕೃತಿಕವಾಗಿ ನಾವು ಯಾವುದಕ್ಕೆ ಸಮೀಪದಲ್ಲಿದ್ದೇವೆ ? ಸಿಖ್
ಧರ್ಮವು ಸ್ವತಂತ್ರ ಧರ್ಮವೆಂದು ಮಾನ್ಯವಾಗಿದ್ದರೂ ಅದರ ಗ್ರಂಥಗಳಲ್ಲಿ ಬರುವ ಕೆಲವು ಪದಗಳು
ವೈಷ್ಣವ, ವೈದಿಕ ಹಿನ್ನೆಲೆಯಿಂದ ಕೂಡಿವೆ. ಲಿಂಗಾಯತ ಸಮಾಜದವರು ಧರಿಸುವ ವಿಭೂತಿ, ರುದ್ರಾಕ್ಷಿ
ಇಟ್ಟುಕೊಳ್ಳುವ ಹೆಸರುಗಳು ಶಿವಪ್ಪ, ಮಲ್ಲಿಕಾರ್ಜುನಪ್ಪ, ಗೌರಮ್ಮ, ಮಹಾದೇವಿ, ಪಾರ್ವತಿ ಇತ್ಯಾದಿ
ಇತ್ಯಾದಿ ಶೈವ ಪರಂಪರೆಯನ್ನು ಹೋಲುತ್ತವೆ. ಆದ್ದರಿಂದ ಜಗತ್ತಿನ ಪ್ರಥಮ ಯೋಗಿ-ಪ್ರಥಮ
ಯೋಗಿಣಿ ಸದಾಶಿವ-ಅಂಬಾ ಅವರಿಂದ ಪ್ರಾರಂಭವಾದ ಒಂದು ಸಾಂಸ್ಕೃತಿಕ ಪರಂಪರೆಯಲ್ಲಿ ಬರುವ
ಧರ್ಮ ಲಿಂಗಾಯತ ಎಂಬುದನ್ನು ಸಂಕೇತಿಸುವ ಪದ ಸಾಂಬ ಸದಾಶಿವ. ಇದನ್ನು ಪ್ರಾರ್ಥನೆಯಲ್ಲಿ
ಉಳಿಸಿಕೊಳ್ಳಲು ಪ್ರೇರಣೆ ನೀಡಿದ ಅಂಶಗಳು ಎರಡು ೧. ಧರ್ಮಪಿತರ ವಚನ

ಹರನು ಮೂಲಿಗನಾಗಿ, ಪುರಾತರೊಳಗಾಗಿ,
ಬಳಿ ಬಳಿಯಲು ಬಂದ ಮಾದಾರನ ಮಗ ನಾನಯ್ಯಾ
ಕಳೆದ ಹೊಲೆಯನೆಮ್ಮಯ್ಯ ಜಾತಿಸೂತಕ
ಮಾದಾರನ ಮಗ ನಾನಯ್ಯ
ಪನ್ನಗಭೂಷಣ ಕೂಡಲಸಂಗಯ್ಯಾ
ಚನ್ನಯ್ಯನೆನ್ನ ಮುತ್ತಯ್ಯನಜ್ಜನಯ್ಯಾ. -ಬ.ವ.ದೀ 349

೨. ಹಳೆಯ ಒಡಂಬಡಿಕೆಯ ಎಲ್ಲಾ ವಿಚಾರ ಒಪ್ಪದೆ ಇದ್ದರೂ ಕ್ರೈಸ್ತ ಮತ್ತು ಮುಸಲೀಮರು
ತಮ್ಮ ಜನಾಂಗದ ಮೂಲ ತಾಯಿ ತಂದೆ ಆಡಮ್ ಮತ್ತು ಈವ್ ಎನ್ನುತ್ತಾರೆ. ಧರ್ಮದ ಉಗಮವನ್ನು
ಕ್ರೈಸ್ತರು ಏಸುಕ್ರಿಸ್ತನಿಗೆ, ಮುಸಲೀಮರು ಮೊಹಮ್ಮದ್ ಪೈಗಂಬರರಿಗೆ ಹೆಸರಿಸುತ್ತಾರೆ. ನಾಥ ಪಂಥ,
ಸಿದ್ಧಪಂಥ ಹೀಗೆ ಎಲ್ಲರೂ ತಮ್ಮ ಪರಂಪರೆಯ ಮೂಲ ಪುರುಷ ಯೋಗಿರಾಜ ಶಿವನೆಂದೇ
ಗುರುತಿಸುತ್ತಾರೆ. ಆದ್ದರಿಂದ ಲಿಂಗಾಯತ ಧರ್ಮ ಭಾರತೀಯ ಪರಂಪರೆಯ ಧರ್ಮ ಎಂದು
ಸಂಕೇತಿಸಲು ಯೋಗಿರಾಜ ಶಿವನ ಹೆಸರನ್ನು ಉಳಿಸಿಕೊಳ್ಳಲಾಗಿದೆ. ಇನ್ನು ತಾತ್ವಿಕವಾಗಿ ಅರ್ಥ
ಮಾಡಿದರೆ ದೇವರು ಶಕ್ತಿ ವಿಶಿಷ್ಟ, ವಿಶ್ವಶಕ್ತಿ (Cosmic Energy)ಯಿಂದ ಕೂಡಿದ ವಿಶ್ವಾತ್ಮ
(Cosmic soul) ಲಿಂಗದೇವನು ಈ ಜಗತ್ತಿನ ತಾಯಿ-ತಂದೆಯಾಗಿದ್ದಾನೆ ಎಂಬ ತತ್ತ್ವಜ್ಞಾನವನ್ನು
ಸಾಂಬಸದಾಶಿವ ಪ್ರತಿಪಾದಿಸುತ್ತದೆ. ವಚನ ಸಾಹಿತ್ಯ ಶಕ್ತಿವಿಶಿಷ್ಟದೇವನ ಪರಿಕಲ್ಪನೆಯನ್ನು ಒಪ್ಪುತ್ತದೆ.
ಐತಿಹಾಸಿಕವಾಗಿ ವೇದ ಪೂರ್ವದವನಾದ ಮುತ್ತಜ್ಜ ಶಿವನೇ ಭಾರತೀಯ ಧಾರ್ಮಿಕ ಪರಂಪರೆಯ
ಮೂಲಿಗ ಎಂಬುದನ್ನು ತಿಳಿದಿರಬೇಕು.

ವಚನ ಸಾಹಿತ್ಯದಲ್ಲಿ ಮೂರು ರೀತಿಯಲ್ಲಿ ಶಿವ ಎಂಬ ಪದ ಬಳಕೆಯಾಗುತ್ತದೆ.

೧. ಸೃಷ್ಟಿಕರ್ತ ದೇವರು
೨. ಪೌರಾಣಿಕ ದೇವತೆ
೩. ಐತಿಹಾಸಿಕ ಯುಗಪುರುಷ

ಶಿವ, ಗುರುವೆಂದು ಬಲ್ಲಾತನೆ ಗುರು
ಶಿವ, ಲಿಂಗವೆಂದು ಬಲ್ಲಾತನೆ ಗುರು
ಶಿವ, ಜಂಗಮವೆಂದು ಬಲ್ಲಾತನೆ ಗುರು
ಶಿವ, ಪ್ರಸಾದವೆಂದು ಬಲ್ಲಾತನೆ ಗುರು
ಶಿವ, ಆಚಾರವೆಂದು ಬಲ್ಲಾತನೆ ಗುರು
ಇಂತೀ ಪಂಚವಿಧವೇ ಪಂಚಬ್ರಹ್ಮವೆಂದರಿದ

ಮಹಾಮಹಿಮ ಸಂಗನ ಬಸವಣ್ಣ ಎನಗೆಯೂ ಗುರು ನಿನಗೆಯೂ ಗುರು
ಜಗವೆಲ್ಲಕ್ಕೆಯೂ ಗುರು ಕಾಣಾ ಗುಹೇಶ್ವರಾ ! -ಅ.ಪ್ರ.ವ ೭೫೪

ಇಲ್ಲಿ ಶಿವ ಎಂದರೆ ನಿರಾಕಾರ, ನಿರ್ಗುಣ, ನಿರವಯನಾದ ದೇವರು. ಅವನು ಗುರು-ಲಿಂಗ-
ಜಂಗಮ-ಪಾದೋದಕ-ಪ್ರಸಾದ ಎಂಬ ಐದು ತತ್ತ್ವಗಳಾಗಿ ಲೋಕವನ್ನು ಉದ್ಧರಿಸಿ ಅನುಗ್ರಹಿ
ಸುತ್ತಾನೆ. ಇಂಥ ಶಿವ ನನ್ನು ಅಂದರೆ ಸೃಷ್ಟಿಕರ್ತನನ್ನು ಲಿಂಗದೇವ ಎಂದು ತಾತ್ವಿಕವಾಗಿ ಕರೆದು ಆ
ಲಿಂಗದೇವನ ಕುರುಹಾದ ಇಷ್ಟಲಿಂಗವನ್ನು ಪೂಜಿಸಲು ಲಿಂಗಾಯತ ಧರ್ಮದ ಆದ್ಯ ಬಸವಣ್ಣನವರು
ಹೇಳುತ್ತಾರೆ. ಆದ್ದರಿಂದ ನಾವು ಅಂದರೆ ಲಿಂಗಾಯತರು ಸೃಷ್ಟಿಕರ್ತ ಪರಶಿವನನ್ನು ನಂಬುತ್ತೇವೆ,
ಗೌರವಿಸುತ್ತೇವೆ, ಇಷ್ಟಲಿಂಗ ರೂಪದಲ್ಲಿ ಪೂಜಿಸುತ್ತೇವೆ. ಯುಗಪುರುಷನಾದ, ಭಾರತೀಯ ಧಾರ್ಮಿಕ
ಪರಂಪರೆಯ ಮೂಲ ಪುರುಷನೆಂದು ನಂಬಿ ಗೌರವಿಸುತ್ತೇವೆ. ನಾವು ಏಕದೇವೋಪಾಸಕರಾದ ಕಾರಣ
ದೇವನನ್ನು ಬಿಟ್ಟು ಮತ್ತೇನನ್ನೂ ಪೂಜಿಸುವುದಿಲ್ಲವಾದ ಕಾರಣ ಶಿವನನ್ನು ಪ್ರತ್ಯೇಕವಾಗಿ
ಪೂಜಿಸುವುದಿಲ್ಲ. ಇನ್ನು ಪೌರಾಣಿಕ ಕಲ್ಪನೆಯಾಗಿ ಇರುವ ಕೈಲಾಸಾಧಿಪತಿ ಶಿವನನ್ನಾಗಲೀ, ಕೈಲಾಸ
ಎಂಬ ಲೋಕವನ್ನಾಗಲೀ ನಂಬುವುದೂ ಇಲ್ಲ. ಈ ವ್ಯತ್ಯಾಸವನ್ನು ಪ್ರಾಜ್ಞರಾಗಿ ಅರಿಯುವುದು
ಅಗತ್ಯವಿದೆ.

ಕೈಲಾಸ ಕೈಲಾಸವೆಂದು ಬಡಿದಾಡುವ ಅಣ್ಣಗಳಿರಾ, ಕೇಳಿರಯ್ಯಾ.
ಕೈಲಾಸವೆಂಬುದೊಂದು ಭೂಮಿಯೊಳಿರುವ ಹಾಳುಬೆಟ್ಟ,
ಅಲ್ಲಿರುವ ಮುನಿಗಳೆಲ್ಲ ಜೀವಗಳ್ಳರು, ಅಲ್ಲಿರ್ದ ಚಂದ್ರಶೇಖರನು ಬಹು ಎಡ್ಡ,
ಇದರಾಡಂಬರವೇಕಯ್ಯಾ ?
ನಮ್ಮ ಪುರಾತರಿಗೆ ಸದಾಚಾರದಿಂದ ವರ್ತಿಸಿ,
ಲಿಂಗಾಂಗ ಸಾಮರಸ್ಯವ ತಿಳಿದು, ನಿಮ್ಮ ಪಾದಪದ್ಮದೊಳು ಬಯಲಾದ ಪದವೆ
ಕೈಲಾಸವಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ. -ಸಿ.ವ. 605

ಎಂದು ಇಂಥ ಕೈಲಾಸ ಲೋಕದ ಕಲ್ಪನೆಯನ್ನು ಶರಣರು ವಿಡಂಬಿಸುವರು. ಒಂದು ಪದ ಅನೇಕ
ರೀತಿಯಲ್ಲಿ ಬಳಕೆಯಾಗುತ್ತದೆ. ಆದರೆ ಅದರ ಹಿಂದಿನ ಪರಿಕಲ್ಪನೆಯನ್ನು ಅರಿಯುವುದು ಅತ್ಯಗತ್ಯ
ಇಲ್ಲದಿದ್ದರೆ ವಿಷಯಗಳು ಮನದಟ್ಟಾಗವು. ಗಾಂಧಿ ಎಂಬ ಅಡ್ಡ ಹೆಸರನ್ನೇ ತೆಗೆದುಕೊಂಡರೆ ಅದರ
ಹಿಂದೆ ವ್ಯಕ್ತಿವಾಚಕ ಹೆಸರು ಸೇರಿದಾಗ ಗಾಂಧಿ ಹೆಸರಿನವರ ವ್ಯಕ್ತಿತ್ವವೇ ಬೇರೆಯಾಗುವುದಲ್ಲವೆ ?
ಮಹಾತ್ಮಾ ಗಾಂಧಿ, ಫಿರೋಜ್ ಗಾಂಧಿ, ಇಂದಿರಾ ಗಾಂಧಿ ಈ ಎಲ್ಲವುಗಳಲ್ಲಿ ಗಾಂಧಿ ಅಡ್ಡಹೆಸರು
ಇದ್ದರೂ ಎಲ್ಲರ ವ್ಯಕ್ತಿತ್ವ ಅವರಿಗೆ ನಾವು ನೀವು ನೀಡಬೇಕಾದ ಸ್ಥಾನಮಾನ ಬೇರೆಯೇ ಅಲ್ಲವೇ ?
ಹಾಗೆಯೇ ಶಿವ ಪದ ಮತ್ತು ಲಿಂಗ ಪದ.

೩. ಅಖಿಲ ಭಾರತ ವೀರಶೈವ ಮಹಾಸಭಾ ಎಬ್ಬಿಸಿದ ಗೊಂದಲ

ಅಮೇರಿಕಾದಿಂದ ಶರಣ. ಡಾ॥ ಸಿ.ವೀರಪ್ಪನವರು ಬಂದರು, ಯೋಗಕ್ಷೇಮ ವಿಚಾರಿಸಲು
ಫೋನ್ ಮಾಡಿದರು. ಅಂದೇ ಬೆಳಿಗ್ಗೆ ದಿ. ೨೩-೫-೨೦೦೦ರಂದು ಬಿಡುಗಡೆ ಮಾಡಿದ್ದ ಪತ್ರಿಕಾ
ಗೋಷ್ಠಿಯ ವಿವರ ಓದಿದ್ದರು. ''ಲಿಂಗಾಯತರಿಗೆ ಜನಗಣತಿಯ ಪರಿಪತ್ರದ ೮ನೆಯ ಕಾಲಮ್
Religion (ಮತ) ಎಂದಿರುವಲ್ಲಿ ***ಲಿಂಗಾಯತ*** ಎಂದು ಮಾತ್ರ ಬರೆಸಬೇಕು ಎಂದು ಕರೆಕೊಟ್ಟಿದ್ದೀರಿ.
ಹೀಗೇಕೆ ? ಬೇರೆ ಯಾವ ಪದವನ್ನೂ ನಾವು ಬರೆಸುವುದೇ ಇಲ್ಲವಲ್ಲ '' ಎಂದರು.
''ನಿಜ ನಿಜ, ಇದೇ ನಿಜವಾದ ಸತ್ಯ. ಆದರೆ ಬಳಕೆಯಲ್ಲಿ ಇರದಿದ್ದ, ನಮ್ಮ ಧರ್ಮದ ಸ್ವರೂಪಕ್ಕೆ
ಹೊರತಾದ ವೀರಶೈವ ಪದವನ್ನು ಅನವಶ್ಯಕವಾಗಿ ತೂರಿಸಿ ಅಖಿಲ ಭಾರತ ವೀರಶೈವ

ಮಹಾಸಭೆಯವರು ಅನಗತ್ಯ ಗೊಂದಲವನ್ನು ಎಬ್ಬಿಸುತ್ತಿದ್ದಾರೆ '' ಎಂದು ನಾನು ಹೇಳಿದೆ.

''ಅಹುದೇ, ನನ್ನ ಬಳಿ ಒಂದು ಪ್ರಮಾಣ ಪತ್ರವಿದೆ. ೧೯೪೨ರಲ್ಲಿ ನಾನು ಮೆಡಿಕಲ್ ಓದುತ್ತಿದ್ದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳಾದ ನಾವೂ ಭಾಗವಹಿಸಿದಾಗ ನಮ್ಮನ್ನು ಬಂಧಿಸಿ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿಟ್ಟಿದ್ದರು. ನಂತರ ಆ ಬಂಧನದ ಪ್ರಮಾಣಪತ್ರ ಬೇಕಾಗಿತ್ತು. ಅರ್ಜಿ ಹಾಕಿದೆ. ೨೫-೨-೧೯೬೭ರಂದು ಕೊಟ್ಟರು. ಜೇಲಲ್ಲಿ ನಾನು ದಿ. ೧೦-೯-೧೯೪೨ ಇದ್ದ ಬಗ್ಗೆ ಕೊಟ್ಟ ಪ್ರಮಾಣ ಪತ್ರದಲ್ಲಿ ವೀರಪ್ಪ S/o ಚಂದಯ್ಯ, ಲಿಂಗಾಯತ ಎಂದು ಇದೆ. ಹಿಂದೂ ಲಿಂಗಾಯತ ಎಂದು ಸಹ ಇಲ್ಲ '' ಎಂದು ಆ ಪ್ರಮಾಣಪತ್ರದ ಜೆರಾಕ್ಸ್ ಪ್ರತಿ ಕಳಿಸಿದರು.

ಗುಲಬರ್ಗಾದ ಶರಣ ನಾಗಶೆಟ್ಟಿ ಕಟಾಳೆ ಹೇಳಿದರು. ''ನಮ್ಮ ಎಲ್ಲ ಸರ್ಟಿಫಿಕೇಟ್ ಲಿಂಗಾಯತ ಎಂದೇ ಇದೆ. ಇಪ್ಪತ್ತು ಇಪ್ಪತ್ತೈದು ವರ್ಷಗಳು ಸಹ ಆಗಿಲ್ಲ ಈ ವೀರಶೈವ ಪದ ತೂರಿಕೊಂಡು ಬಂದಿದೆ. ಇವತ್ತಿಗೂ ಗ್ರಾಮಾಂತರ ಪ್ರದೇಶದ ಲಿಂಗಾಯತರಿಗೆ ವೀರಶೈವ ಪದದ ಹೆಸರು ಸಹ ಕೇಳಿ ಗೊತ್ತಿಲ್ಲ. ಹಿಂದು ಲಿಂಗಾಯತ ಎಂಬ ಪದವು ಕೂಡ ಬಳಕೆಯಲ್ಲಿಲ್ಲ. ಇವೆಲ್ಲ ಇತ್ತೀಚಿನ ಸೇರ್ಪಡೆಗಳು'' ಎಂದರು.

ಬಹುಶಃ ನನಗೆ ಅನ್ನಿಸುತ್ತೆ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಶ್ರೀ ಭೀಮಣ್ಣ ಖಂಡ್ರೆ, ರಾಜ್ಯ ಅಧ್ಯಕ್ಷ ಶ್ರೀ ಚಂದ್ರಕಾಂತ ಬೆಲ್ಲದ ಅವರ ಸ್ಕೂಲ್ ಸರ್ಟಿಫಿಕೇಟ್‌ದಲ್ಲಿಯೂ ಲಿಂಗಾಯತ ಎಂದೇ ಇರಬಹುದು. ರಸ್ತೆಯಲ್ಲಿ ಲಾಳವೊಂದು ಸಿಕ್ಕಿದ್ದಕ್ಕೆ ಆ ಲಾಳದ ಅಳತೆಗೆ ತಕ್ಕಂತಹ ಕಾಲಿರುವ ಕುದುರೆಯನ್ನು ಕೊಂಡುಕೊಳ್ಳಲು ಓಡಾಡಿದಂತೆ, ವೀರಶೈವ ಮಹಾಸಭಾದ ಅಧ್ಯಕ್ಷರುಗಳಾಗಿದ್ದಕ್ಕೆ ನಮಗೆ ಸಂಬಂಧವಿಲ್ಲದ ವೀರಶೈವ ಪದದ ಪ್ರಚಾರದಲ್ಲಿ ಉಭಯ ಅಧ್ಯಕ್ಷರೂ ತೊಡಗಿದಂತೆ ಕಾಣುತ್ತದೆ.

ವಚನಾಂಕಿತ-ಒಂದು ಸಲಹೆ

ಶ್ರೀ ಜಗದ್ಗುರು ಮಾತೆ ಗಂಗಾದೇವಿ
ಜಗನ್ಮಾತಾ ಅಕ್ಕಮಹಾದೇವಿ ಪೀಠ, ಧಾರವಾಡ — 13-6-2000
ಇವರ ಸನ್ನಿಧಿಯಲ್ಲಿ ಶರಣು ಶರಣಾರ್ಥಿಗಳು — ರಾಯಚೂರು

ಪೂಜ್ಯ ಶ್ರೀ ಮಹಾ ಜಗದ್ಗುರು ಮಾತೆ ಮಹಾದೇವಿಯವರು ಈಗಾಗಲೇ ಬಸವಣ್ಣನವರ ವಚನ ನಾಮಾಂಕಿತವನ್ನು ಕೂಡಲಸಂಗಮದೇವ ಬದಲಾಗಿ ಲಿಂಗದೇವ ಎಂದು ಬದಲಿಸಿ ಬಸವ ವಚನ ದೀಪ್ತಿ ಯನ್ನು ಪ್ರಕಟಿಸಿರುವರಷ್ಟೆ. ಸ್ಥಾವರಲಿಂಗವಾದ ಸಂಗಮದೇವರ ಸೂಚಕವಾದ ಕೂಡಲಸಂಗಮದೇವ ಎಂದು ವಚನಾಂಕಿತದಲ್ಲಿ ಅಣ್ಣ ಬಸವಣ್ಣನವರು ತಪ್ಪಿನಿಂದಾಗಿ ಬಳಕೆ ಮಾಡಿದ್ದನ್ನು ಸಂಶೋಧನೆಯಿಂದ ಕಂಡು ಹಿಡಿದು ಲಿಂಗದೇವ ಎಂದು ಬದಲಿಸಿ, ವೀರಶೈವರಲ್ಲದ ಲಿಂಗಾಯತರಿಗೆ ಮಹದುಪಕಾರವನ್ನು ಮಾಡಿದ್ದಾರೆ. ಇಂಥ ಮಹಾಮಾತೆಯನ್ನು ಎಷ್ಟು ಸ್ಮರಿಸಿದರೂ ಕಡಿಮೆ. ಆದರೆ ಅಕ್ಕಮಹಾದೇವಿಯವರ ವಚನ ನಾಮಾಂಕಿತದ ಬಗ್ಗೆ ಮಹಾಜಗದ್ಗುರುಗಳ ಗಮನ ಇನ್ನೂ ಹರಿದಂತಿಲ್ಲ. ಅದಕ್ಕಾಗಿ ನನ್ನಿಂದ ತಮಗೆ

ಒಂದು ಸಲಹೆ

ಅಕ್ಕಮಹಾದೇವಿ ತಮ್ಮ ವಚನ ನಾಮಾಂಕಿತದಲ್ಲಿ ಚೆನ್ನಮಲ್ಲಿಕಾರ್ಜುನ ಎಂದು ಬಳಕೆಯಲ್ಲಿ ತಂದಿರುವುದಾಗಿ ಅವರ ವಚನ ಸಂಗ್ರಹಗಳನ್ನು ಓದಿದಾಗ ಗಮನಿಸಲಾಗಿದೆ. ಈ ಮಲ್ಲಿಕಾರ್ಜುನ ಎನ್ನುವುದು ಶ್ರೀಶೈಲದಲ್ಲಿರುವ ಮಲ್ಲಿಕಾರ್ಜುನ ದೇವರು ಎಂಬ ಸ್ಥಾವರಲಿಂಗದ ಸೂಚಕವಾಗಿದೆ. ಈ

ಸ್ಥಾವರ ಲಿಂಗವು ಕೂಡಲಸಂಗಮದಲ್ಲಿರುವ ಸಂಗಮ ದೇವರ ಸ್ಥಾವರಕ್ಕೆ ಹೋಲಿಸಿದಾಗ ಬಹಳ ದೊಡ್ಡದು. ಕಾರಣ ಅಕ್ಕಮಹಾದೇವಿಯವರು ಚೆನ್ನಮಲ್ಲಿಕಾರ್ಜುನ ಎಂಬ ನಾಮಾಂಕಿತವನ್ನು ಬಳಸಿ ಬಸವಣ್ಣನವರಿಗಿಂತ ದೊಡ್ಡದಾದ ತಪ್ಪನ್ನು ಮಾಡಿರುವರೆಂದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಈ ತಪ್ಪನ್ನು ಸರಿಪಡಿಸಲು ಮಾತಾಜಿಯವರು ಇನ್ನೂ ಏಕೆ ಗಮನ ಹರಿಸಿಲ್ಲ ಎಂದು ನನಗೆ ತಿಳಿಯದಾದ ವಿಷಯವಾಗಿದೆ. ಕಾರಣ ಮಾತಾಜಿಯವರ ಶಿಷ್ಯೆಯಾದ ತಾವು ಈ ಕಡೆ ಕೂಡಲೆ ಗಮನ ಹರಿಸಬೇಕೆಂದು ನನ್ನದೊಂದು ವಿನಮ್ರ ಕೋರಿಕೆ. ತಾವು ಆದಷ್ಟು ಬೇಗನೆ ಅಕ್ಕಮಹಾದೇವಿಯವರನ್ನು ಕನಸಿನಲ್ಲಿ ಕಾಣುವುದು ಮತ್ತು ವಚನ ನಾಮಾಂಕಿತವನ್ನು ಬದಲಾಯಿಸಲು ಅಕ್ಕನವರಿಂದ ಒಂದು ಅಪ್ಪಣೆಯನ್ನು ಪಡೆಯುವುದು. ಈ ಪ್ರಕಾರವಾಗಿ ಕನಸು ಕಾಣಲು ಸಾಧ್ಯವಾಗದಿದ್ದರೆ- ಮೇಲಿನ ರೀತಿಯಲ್ಲಿ ಕನಸು ಕಾಣಲಾಯಿತು ಎಂದು ಪ್ರಕಟಿಸುವುದು ಮತ್ತು ಮಾತಾಜಿಯವರ ಬಸವಧರ್ಮದ ಅನುಯಾಯಿಗಳಿಗೆ ಕಲ್ಯಾಣ ಕಿರಣದಲ್ಲಿ ಪ್ರಕಟಿಸಿ ತಿಳಿಸುವುದು. ಅದರಂತೆ ಅಕ್ಕನ ವಚನ ದೀಪ್ತಿ ಯೊಂದನ್ನು ಪ್ರಕಟಿಸಿದರೆ ಸಾಕು. ಇದರಿಂದ ಅಕ್ಕನವರು ಮಾಡಿದ ತಪ್ಪನ್ನು ಸರಿಪಡಿಸಿ ಮಾತಾಜಿಯವರ ಶಿಷ್ಯವೃಂದಕ್ಕೆ ಸಂತೋಷ ತರಿಸಬೇಕು. ಚೆನ್ನಮಲ್ಲಿಕಾರ್ಜುನ ವಚನ ನಾಮಾಂಕಿತದ ಬದಲಾಗಿ ಮಹದೇವ ಎಂದು ತರಬೇಕೆಂದು ನನ್ನ ಸಲಹೆ. ಮಹದೇವ ಎಂಬ ಪದವು ಯಾವುದೇ ಸ್ಥಾವರಸೂಚಕ ಹೆಸರಾಗಿರದೆ ಇದು ನಿರಾಕಾರ, ನಿರ್ಗುಣವಾದ ಪರಮಾತ್ಮನ (ಗಾಡ್, ಅಲ್ಲಾಹ ತರದಂತೆ) ಸೂಚಕವಾದ ಪದವೆಂದು ಲಿಂಗಾಯತರಿಗೆ ತಿಳಿಯ ಹೇಳಬೇಕು ಮತ್ತು ಈ ಮಹದೇವ ಪದವು ಆಕಾರವುಳ್ಳ ಗಂಗೆಯನ್ನು ಹೊತ್ತ ವೀರಶೈವರ ಶಿವ ಅಥವಾ ಪಾರ್ವತಿಯ ಪತಿ ಪರಮೇಶ್ವರ ಎಂಬ ನಾಮಗಳಿಂದ ಬಹಳ ಭಿನ್ನವಾದ ಪದ ಎಂದು ತಿಳಿಯ ಹೇಳುವುದು. ಹಾಗೂ ಈ ಪದವು ತಮ್ಮ ಗುರುಗಳಾದ ಮಾತೆ ಮಹಾದೇವಿ ಯವರಲ್ಲಿ ಅಪಾರವಾಗಿ ಇಟ್ಟಿದ್ದ ಭಕ್ತಿಯ ಸೂಚಕವಲ್ಲವೆಂದು ಕಲ್ಯಾಣಕಿರಣದ ಮೂಲಕ ಬಸವಾನುಯಾಯಿಗಳಿಗೆ ತಿಳುವಳಿಕೆ ಹೇಳುವುದು.

ಈ ನನ್ನ (ಕುಹಕವಲ್ಲದ) ಸಲಹೆಯನ್ನು ಆದಷ್ಟು ತೀವ್ರವಾಗಿ ಕಾರ್ಯರೂಪಕ್ಕೆ ತರಬೇಕೆಂದು ನನ್ನ ವಿನಮ್ರ ಕೋರಿಕೆಯೊಂದಿಗೆ,

ನಿಮ್ಮ ವಿಶ್ವಾಸಿ
ಆರ್.ಎಸ್.ಪಾಟೀಲ್
ಮನೆ ನಂ. ೧-೧೨-೭೬, ಡ್ಯಾಡಿ ಕಾಲನಿ, ರಾಯಚೂರು

ರಾಯಚೂರಿನ ಶರಣ. ಆರ್.ಎಸ್. ಪಾಟೀಲರು ಸಲಹಾತ್ಮಕವಾದ ಒಂದು ಪತ್ರವನ್ನು ಬರೆದಿದ್ದು ಅದನ್ನು ಪ್ರಕಟಿಸಲಾಗಿದೆ. ಅಲ್ಲಮಪ್ರಭುದೇವರು ಬಂದು ಸಿದ್ಧರಾಮೇಶ್ವರರ ಕರ್ಮಕಾಂಡ ನೋಡಿ ವಿಡಂಬಿಸಿದಾಗ ರೋಷಾವೇಶದಿಂದ ಸಿದ್ಧರಾಮೇಶ್ವರರು ಹೊರಬಂದಂತೆ ಶರಣ. ಆರ್.ಎಸ್.ಪಾಟೀಲರು ಲಿಂಗದೇವ ವಚನಾಂಕಿತ ಬಳಕೆ ಶುರುವಾದಾಗ ಆವೇಶಭರಿತರಾಗಿದ್ದರು. ಆದೀಗ ಕೊಂಚ ಕೊಂಚವಾಗಿ ತಣ್ಣಗಾಗುತ್ತ ಬಂದು ಇದೀಗ ವ್ಯಂಗ್ಯದ ರೂಪದಲ್ಲಿ ಇಣುಕಿದೆ. ಆದರೂ ಪರವಾಗಿಲ್ಲ ಅವರ ಮನ-ಬುದ್ಧಿಗಳು 'ಲಿಂಗದೇವ'ದ ಸತ್ವವನ್ನು, ಹಿರಿಮೆಯನ್ನು ಗ್ರಹಿಸಲು ತೊಡಗಿವೆ ಎಂಬುದು ಇದೀಗೆ ಬರೆದಿರುವ ಪತ್ರದ ಮೂಲಕ ಅಭಿವ್ಯಕ್ತವಾಗಿದೆ. ಮಾತ್ರವಲ್ಲ ಶ್ರೀಯುತರು ಒಂದು ಸಲಹೆಯನ್ನು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಗೆ ಬರೆದಿರುವ ಪತ್ರದಲ್ಲಿ ಮುಂದಿಟ್ಟಿದ್ದಾರೆ. ಈ ಬಗ್ಗೆ ವಾಚಕರ ಮುಕ್ತ ಮನಸ್ಸಿನ ಅಭಿಪ್ರಾಯವನ್ನು ನಿರೀಕ್ಷಿಸುತ್ತೇವೆ.

-ಮಾತಾಜಿ

ಓರ್ವ ತಮಿಳು ವೀರಶೈವರೊಡನೆ ಭೇಟಿ

-ಮಾತಾಜಿ

ದಿ. ೩೦-೫-೨೦೦೦, ಶ್ರೀಯುತ ಹೆಚ್.ವಿ.ನಾಗೇಂದ್ರಪ್ಪ, ಅಖಿಲ ಭಾರತ ವೀರಶೈವ ಮಹಾಸಭೆಯ ಪ್ರಧಾನ ಕಾರ್ಯದರ್ಶಿಯವರು ಫೋನ್ ಮಾಡಿ, ತಮಿಳುನಾಡಿನಿಂದ ಕೆಲವರು ಬಂದಿದ್ದಾರೆ. ಅವರಿಗೆ ಲಿಂಗಗಳು ಬೇಕಾಗಿವೆ ಎಂದರು. ''ಇವೆ ಕಳಿಸಿಕೊಡಿರಿ'' ಎಂದೆವು. ಅವರು ಬಂದರು. ಅದರಲ್ಲಿ ಒಬ್ಬರು ಮಣಿವಾಸಗನ್ ಎಂಬುವವರು ಸ್ಟೇಟ್ ಬ್ಯಾಂಕ್ ಉದ್ಯೋಗಿ ; ಮಾತನಾಡಿಸಿ ವಿವರಗಳನ್ನು ಪಡೆದೆವು. ಮೊದಲನೆಯದು, ಅವರಿಗೆ ಬೇಕಾಗಿರುವುವು ದೇವಾಲಯದಲ್ಲಿರುವ ಲಿಂಗಗಳ ಸಣ್ಣ ಗಾತ್ರದ ಲಿಂಗಗಳು. ಅವು ಬಹಳ ಸೋವಿ ಇರುತ್ತವೆ. ''ಇವು (ಕಂಥೆಯ ಲಿಂಗಗಳು) ಬಹಳ ತುಟ್ಟಿ'' ಎಂದರು.

''ಅಹುದು ; ತಮಿಳು ನಾಡಿನ ವೀರಶೈವರು ಕಟ್ಟುವ ಲಿಂಗಗಳನ್ನು ನಾನು ನೋಡಿದ್ದೇನೆ. ಅವು ಬರೀ ಶಿಲಾಲಿಂಗಗಳು, ಸೋವಿ ಇರುತ್ತವೆ. ಇವು ಕಂಥೆಯ ಗೋಳಾಕಾರದ ಲಿಂಗಗಳು ; ಕಂಥೆಯು ಬಹಳ ತುಟ್ಟಿ. ಇವನ್ನೇ ಲಿಂಗಾಯತರು ಧರಿಸುವುದು'' ಎಂದು ಹೇಳಿದೆ. ''ತಮಿಳು ನಾಡಿನ ವೀರಶೈವರಲ್ಲಿ ವರ್ಣಾಶ್ರಮ ಪದ್ಧತಿ ಇದೆ ಎಂದು ಕೇಳಿದ್ದೇನೆ. ನೀವು ಯಾವ ವೀರಶೈವರು ? ಎಂದು ಕೇಳಿದೆ. ''ಬ್ರಾಹ್ಮಣ ವೀರಶೈವರು'' ಎಂದರು.

''ನೀವು ಕರ್ನಾಟಕದಿಂದ ವಲಸೆ ಹೋದವರೋ, ತಮಿಳು ಮೂಲದವರೋ ?''

''ನಾವು ತಮಿಳು ಮೂಲದವರು. ನಮ್ಮ ಗುರು ಮಾಣಿಕ್ಯ ವಾಚಕರ್, ನಮ್ಮ ಅಧ್ಯಯನ ಗ್ರಂಥ ತಿರುವಾಸಕಮ್'' ಎಂದರು. ''ಬಸವಣ್ಣನವರ ಬಗ್ಗೆ ನಿಮಗೇನಾದರೂ ಗೊತ್ತೆ ?'' ಮುಂದಿನ ಪ್ರಶ್ನೆ ''೨೦ ವರ್ಷಗಳ ಹಿಂದೆ ಏನೂ ಗೊತ್ತಿರಲಿಲ್ಲ. ನಂತರ ಗೊತ್ತಾಯಿತು. ಈಗ ೫ ವರ್ಷಗಳಿಂದ ನಾವೂ ಬಸವ ಜಯಂತಿ ಆಚರಿಸುತ್ತೇವೆ'' ಎಂದರು.

''ವೀರಶೈವ-ಲಿಂಗಾಯತ ಅಸೋಸಿಯೇಷನ್‌ದವರು ವರ್ಷಕ್ಕೊಮ್ಮೆ ಬಸವ ಜಯಂತಿ ಮತ್ತು ಗಂಗಾ ಪೂಜೆ ಮಾಡುತ್ತಾರೆ ಅವರು ನೀವೂ ಒಂದೆಯೆ ?'' ಎಂದು ಕೇಳಿದೆ.

''ಇಲ್ಲ. ಅವರು ಕರ್ನಾಟಕದಿಂದ ವಲಸೆ ಬಂದವರು ನಮಗೂ ಅವರಿಗೂ ಸಂಬಂಧವಿಲ್ಲ. ನಮ್ಮ ಸಂಪ್ರದಾಯದ ಮಠಗಳು ಪಾಂಡಿಚೇರಿ, ಚಿದಂಬರಮ್, ಮೈಲಾಮ್ ಎಂಬಲ್ಲಿ ಇವೆ''.

''ನೀವು ಸಸ್ಯಾಹಾರಿಗಳೋ ಮಾಂಸಾಹಾರಿಗಳೋ ?'' ನನ್ನ ಪ್ರಶ್ನೆ.

''ನಾವು ಸಸ್ಯಾಹಾರಿಗಳು, ಬ್ರಾಹ್ಮಣ ವೀರಶೈವರು. ವೀರಶೈವರಲ್ಲಿ ಮಾಂಸಾಹಾರಿಗಳು ಉಂಟು. ಅವರು ಶೂದ್ರ ವೀರಶೈವರು''

''ನಿಮ್ಮ ಸಂಖ್ಯೆ ಎಷ್ಟು, ಅವರ ಸಂಖ್ಯೆ ಎಷ್ಟು ?''

''ಚೆನ್ನೈದಲ್ಲಿ ಸಸ್ಯಾಹಾರಿ ವೀರಶೈವರದು ಸುಮಾರು ೨೫೦೦ ಕುಟುಂಬ ಇರಬಹುದು. ಮಾಂಸಾಹಾರಿ ವೀರಶೈವರು ಸೇರಿ ಹತ್ತುಸಾವಿರ ಕುಟುಂಬ ಆಗಬಹುದು'' ಮಣಿವಾಸಗನ್ ಹೇಳಿದರು.

''ಈಗ ಕರ್ನಾಟಕದಲ್ಲಿ ಜನಗಣತಿಯ ಸಲುವಾಗಿ ದೊಡ್ಡ ಪ್ರಚಾರ ಆಂದೋಲನ ನಡೆಯುತ್ತಿದೆ. ನಿಮಗೆ ಗೊತ್ತೆ ?''

''ಹಿಂದಿನ ಜನಗಣತಿಯಲ್ಲಿ ನಾವು ಪ್ರಯತ್ನಿಸಿದೆವು. ಆದರೆ ವೀರಶೈವವು ಹಿಂದು ಧರ್ಮದ ಒಂದು ಸೆಕ್ಟ್ ಎಂದು, ಸ್ವತಂತ್ರವಾಗಿ ಪರಿಗಣಿಲು ಆಗುವುದಿಲ್ಲ ಎಂದು ಅಧಿಕಾರಿಗಳು ಹೇಳಿದ್ದರಿಂದ ಈಗ ಆ ಪ್ರಯತ್ನವನ್ನು ಕೈ ಬಿಟ್ಟಿದ್ದೇವೆ'' ಎಂದರು.

''ಅಹುದು ; ನಮಗೂ ಗೊತ್ತು. ಅದಕ್ಕಾಗಿಯೇ ನಾವು ಒಂದು ಸ್ಪಷ್ಟ ಮತ್ತು ದಿಟ್ಟ ಹೆಜ್ಜೆಯನ್ನು ಇಟ್ಟಿದ್ದೇವೆ. ವೀರಶೈವ ಎಂಬ ಪದವೇ ಇದು ಶೈವದ ಒಂದು ಪ್ರಭೇದ ಎಂಬುದನ್ನು ಘಂಟಾಘೋಷವಾಗಿ ಸಾರುತ್ತದೆ. ಅದಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಎಂದೆಂದೂ ಸಿಗದು. ಲಿಂಗಾಯತವು ೧೨ನೆಯ ಶತಮಾನದಲ್ಲಿ ಗುರು ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟ ಒಂದು ಸ್ವತಂತ್ರ ಧರ್ಮ. ಇದು ವೇದ, ಆಗಮ ಆಧಾರಿತವಲ್ಲ. ಅದಕ್ಕಾಗಿ ಲಿಂಗಾಯತ, ವೀರಶೈವ ಬೇರೆ ಬೇರೆ ಎಂದು, ಲಿಂಗಾಯತವು ಒಂದು ಧರ್ಮ, ವೀರಶೈವವು ಹಿಂದೂ ಶೈವದೊಳಗಿನ ಒಂದು ಶಾಖೆ-ಇವೆರಡನ್ನು ಒಂದೇ ಎಂದು ಭಾವಿಸಬಾರದು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೇನೆ.

ನೀವುಗಳು ಏಕೆ ಒಂದು ದಿಟ್ಟ ನಿರ್ಧಾರ ತೆಗೆದುಕೊಳ್ಳಬಾರದು ? ಹೇಗಿದ್ದರೂ ಸಸ್ಯಾಹಾರಿಗಳು, ಇಷ್ಟಲಿಂಗದೀಕ್ಷೆ ಹೊಂದಿ, ಗುರು ಬಸವಣ್ಣನವರನ್ನು ಗುರುವೆಂದು ಒಪ್ಪಿಕೊಂಡು ಲಿಂಗಾಯತ ಧರ್ಮ ಸ್ವೀಕರಿಸಿದರೆ ವೀರಶೈವರಾದ ನಿಮಗೆ ಒಂದು ನೆಲೆ ಸಿಕ್ಕಂತೆ ಆಗುತ್ತದೆ. ನಿಮ್ಮ ಸಮಾಜದೊಡನೆ ಚರ್ಚಿಸಿರಿ....'' ಎಂದು ಹೇಳಿದೆ.

ಅಂತೂ ಲಿಂಗಾಯತ ಧರ್ಮ, ವೀರಶೈವ ಮತ ಸ್ಪಷ್ಟವಾಗಿ ಬೇರೆ ಬೇರೆ ಎಂಬುದಕ್ಕೆ ಇನ್ನೂ ಹೆಚ್ಚಿನ ಪುಷ್ಟಿ ಸಿಕ್ಕಿದ್ದಕ್ಕೆ ನನಗೆ ಸಂತೋಷವೆನಿಸಿತು. ★

ಲಿಂಗನಿಷ್ಠೆ

-ಮಾತಾಜಿ

ತಮಿಳುನಾಡಿನ ವೀರಶೈವರು ಲಿಂಗಗಳಿವೆಯೇ ಎಂದು ವಿಚಾರಿಸುತ್ತ ಬಂದರು. ಕಂಥೆಯ ಲಿಂಗ ೧೦ರೂ. ೧೫ ರೂ. ಹೀಗೆ ಬೆಲೆ ಇದೆ. ''ನಮ್ಮಲ್ಲಿ ೩ರೂಗೆ ಒಂದು'' ಎಂದು ಹೇಳಿದರು. ''ಅವು ಬೇರೆ, ಇವು ಬೇರೆ. ಅವನ್ನು ಕಲ್ಲಿನಲ್ಲಿ ಕೆತ್ತಿರುತ್ತಾರೆ. ಕಂಥೆಗೆ ತುಂಬಾ ಬೆಲೆಯುಳ್ಳ ವಸ್ತುಗಳನ್ನು ಹಾಕಿ ಮಾಡಿರುತ್ತಾರೆ. ಇದು ಪೂಜೆಗಷ್ಟೇ ಉಪಯೋಗವಾಗದು, ತ್ರಾಟಕ ಯೋಗಕ್ಕೆ ಸಹಕಾರಿ'' ಎಂದು ಒಂದು ದೊಡ್ಡ ಮಾದರಿ ಇಷ್ಟಲಿಂಗವನ್ನೂ ತೋರಿಸಿದೆ. ಆ ಜನರಿಗೆ ಕಂಥೆಯ ಮಹತ್ವವೇ ತಿಳಿಯದು.

ನಮ್ಮ ಬಸವ ತತ್ವ ತರಬೇತಿ ಕಮ್ಮಟದಲ್ಲಿ ಕೆಲವರು ಕಂಥೆ ಇಡಿಸಿಕೊಳ್ಳಲು ಮತ್ತು ತ್ರಾಟಕಕ್ಕೆ ಅನುಕೂಲವಾಗುವಂತೆ ದೊಡ್ಡವು ಮಾಡಿಸಿಕೊಳ್ಳಲು ಬಯಸಿದ್ದರಿಂದ ಕಂಥೆ ಇಡುವವರನ್ನು ಕರೆಸಲಾಗಿತ್ತು. ಅವರು ಗಾತ್ರದ ಪ್ರಕಾರ ೧೦೦, ೧೫೦, ೨೦೦ ರೂ ವರೆಗೂ ಜನರಿಂದ ಪಡೆಯುತ್ತಿದ್ದಂತೆ ತೋರಿತು. ಆದರೆ ಇಷ್ಟಲಿಂಗ ನಿಷ್ಠಾಪರರಾದ ಶರಣರು ಸಂತೋಷದಿಂದಲೇ ಕೊಟ್ಟು ಕಂಥೆ ಮಾಡಿಸಿಕೊಳ್ಳುತ್ತಿದ್ದರು. ಆಗ ಶರಣ ಬಾಹೂರ ಬೊಮ್ಮಣ್ಣನ ಒಂದು ವಚನವು ನೆನಪಾಯಿತು.

ಗುರುನಿಷ್ಠೆ, ಲಿಂಗನಿಷ್ಠೆ, ಜಂಗಮನಿಷ್ಠೆ
ಈ ತ್ರಿವಿಧ ನಿಷ್ಠೆಯಲ್ಲಿ ಏಕಾಂಗ ನಿಷ್ಠೆ
ವೀರ ಧೀರಂಗಲ್ಲದಾಗದು.
ಇದು ಸಂಗನ ಬಸವಣ್ಣನಿಂದ ಬಂದ
ಸಂತತಿಗಲ್ಲದಾಗದು
ಬ್ರಹ್ಮೇಶ್ವರ ಲಿಂಗವನರಿವುದಕ್ಕೆ
ತ್ರಿಗುಣ ಸಂದೇಹಿಗಳಿಗೆ ವಸ್ತು ಸಂಧಿಸದು ನೋಡಾ ★

ಏಪ್ರಿಲ್-ಮೇ ತಿಂಗಳಲ್ಲಿ ಕಾಣಿಕೆ ಕೊಟ್ಟ ಸದ್ಭಕ್ತರ ಯಾದಿ

ಕೂಡಲ ಸಂಗಮದ ಬಸವ ಧರ್ಮ ಪೀಠದ ಕಟ್ಟಡ ನಿಧಿಗೆ

ಶರಣರುಗಳಾದ :

ಚೂಡಾಮಣಿ ಮತ್ತು ಹೆಚ್.ಎಲ್.ನಾಗರಾಜು, ಮೈಸೂರು. ಸಿಂಗಲ್ ರೂಂ.	ರೂ. ೫೧೦೦೦-೦೦
ಸೌಭಾಗ್ಯ ಮತ್ತು ನಾಗರಾಜು, ಮೈಸೂರು. ಸಿಂಗಲ್ ರೂಂ.	ರೂ. ೫೧೦೦೦-೦೦
ಬಸವೇಶ್ವರ ಎಲೆಕ್ಟ್ರಾನಿಕ್ಸ್, ಮೈಸೂರು. ಸಿಂಗಲ್ ರೂಂ.	ರೂ. ೫೧೦೦೦-೦೦

ಪುಸ್ತಕ ಮುದ್ರಣಕ್ಕೆ

ಶರಣರುಗಳಾದ :

ಸರೋಜಮ್ಮ ಮತ್ತು ಎಂ. ನಾಗರಾಜು, ಮೈಸೂರು	ರೂ. ೧೧೦೦೧-೦೦
ಸೌಭಾಗ್ಯ ಮತ್ತು ನಾಗರಾಜು, ಮೈಸೂರು	ರೂ. ೧೧೦೦೧-೦೦
ಎಂ. ನಾಗರತ್ನ ಮತ್ತು ಎ.ಎಂ.ಪುಟ್ಟಶಾಮಯ್ಯ	ರೂ. ೧೧೦೦೧-೦೦
ಜಯಲಕ್ಷ್ಮಿ ಮತ್ತು ಲಿಂಗರಾಜ್, ಮೈಸೂರು	ರೂ. ೫೦೦೧-೦೦

ಬೆಂಗಳೂರು ಬಸವ ಮಂಟಪದ ಮೇಲೆ ಕಟ್ಟಿಸುತ್ತಿರುವ ವಿದ್ಯಾರ್ಥಿನಿಯರ ಹಾಸ್ಟೆಲ್‌ಗಾಗಿ

ಶರಣರುಗಳಾದ :

ಉಮಾ ಚಂದ್ರಪ್ಪ, ಮೈಸೂರು	ರೂ. ೫೦೦೧-೦೦
ಗಿರಿಜಮ್ಮ ಜಿ.ಎಂ.ಶಿವಯ್ಯ	ರೂ. ೫೦೦೧-೦೦

ಕೂಡಲಸಂಗಮದ ದಾಸೋಹ ನಿಧಿಗಾಗಿ ರೂ. ೧೧೧೧-೦೦ ಕೊಟ್ಟವರು

ಶರಣರುಗಳಾದ :

ಪ್ರಭಾವತಿ ಮತ್ತು ಮಹಾದೇವಪ್ಪ, ಮೈಸೂರು
ಮುನ್ನೂಬಾಯಿ, ಮೈಸೂರು
ಶಿವಪ್ರಸಾದ, ಮೈಸೂರು
ಮಹಾದೇವಪ್ಪ, ಶ್ರೀ ಹೋಟೆಲ್ ಗುರು, ಮೈಸೂರು
ಚಂದ್ರಕಾಂತಾ, ನಜರಾಬಾದ್
ಸಣ್ಣಮ್ಮ ಮತ್ತು ಕೆ.ವಿ.ತಿಮ್ಮಶೆಟ್ಟಿ, ಮೈಸೂರು
ಎಂ. ಲಲಿತಾಂಬ ಮತ್ತು ಬಿ. ಮಹಾದೇವಪ್ಪ, ಮೈಸೂರು
ನರಸಮ್ಮ ಕೆ. ದೊಡ್ಡಯ್ಯ, ಮೈಸೂರು
ಕುಮಾರಿ ಹೆಚ್.ಬಿ.ಮಮತಾ, ಹೆಚ್.. ಎಂ. ಬಸವರಾಜು, ಮೈಸೂರು
ಬಸವರಾಜಮ್ಮ ಮತ್ತು ಜಿ. ಬಸವರಾಜು, ಮೈಸೂರು
ರೇಖಾ ಮತ್ತು ಶಶಿಧರ್, ಮೆಸೂರು
ರಾಜಮಣಿ ಮತ್ತು ಎಸ್.ಮಲ್ಲಿಕಾರ್ಜುನಪ್ಪ, ಮತ್ತೀಪುರ
ಕೆ.ಹೆಚ್. ಮಹೇಂದ್ರಪ್ಪ, ಮೈಸೂರು
ತಾಯಮ್ಮ ಮತ್ತು ವೀರಯ್ಯ, ಮೈಸೂರು.

ಸಿ.ಎಲ್.ರಾಜಣ್ಣ, ತೇರುಬೀದಿ ಚಿಕ್ಕನಾಯಕನಹಳ್ಳಿ
ಜಯಣ್ಣ ಬಿ. ಉಪನ್ಯಾಸಕರು, ಚಿಕ್ಕನಾಯಕನಹಳ್ಳಿ
ಸಿ.ಬಿ.ಸುರೇಶ್‌ಬಾಬು ಚಿಕ್ಕನಾಯಕನಹಳ್ಳಿ
ರುದ್ರಮ್ಮನವರು ಮತ್ತು ರೇವಣ್ಣ, ಚಿಕ್ಕನಾಯಕನಹಳ್ಳಿ
ಟಿ.ಕುಮಾರಯ್ಯ ಶ್ರೀಮತಿ ಮಂಗಳ, ಚಿಕ್ಕನಾಯಕನಹಳ್ಳಿ
ಡಾ|| ಸಿ. ಮಹದೇವಪ್ಪ, ಚಿಕ್ಕನಾಯಕನಹಳ್ಳಿ
ವಿರುಪಾಕ್ಷಮ್ಮ ಶಿವರುದ್ರಪ್ಪ, ಚಿಕ್ಕನಾಯಕನಹಳ್ಳಿ
ಡಿ. ಬಸಪ್ಪ, ಶ್ಯಾಮನೂರು
ಚನ್ನಬಸಮ್ಮ ಚನ್ನೇಗೌಡ್ರು, ಶ್ಯಾಮನೂರು
ಅನಂತ S/o ಪುಷ್ಪ ಲಿಂಗರಾಜು, ಶ್ಯಾಮನೂರು
ಎಸ್.ಜಿ. ಹನುಮಪ್ಪ, ಶ್ಯಾಮನೂರು

ಗುರು ಕಾಣಿಕೆಯಾಗಿ

ಶರಣರುಗಳಾದ

ಸರೋಜಮ್ಮ ಮತ್ತು ನಾಗರಾಜು, ಮೈಸೂರು	-	೫೦೦೦-೦೦ ರೂ.
ಮಹಾಲಿಂಗಪ್ಪ ಗುಡೇಗೊಂಡನ ಹಳ್ಳಿ	-	೫೦೦೦-೦೦ ರೂ.
ಗೀತಾ ಮತ್ತು ಗುರುಸ್ವಾಮಿ, ಶಾಸಕರು, ಚಾಮುಂಡೇಶ್ವರಿ ಕ್ಷೇತ್ರ	-	೨೬೦೦-೦೦ ರೂ.
ರೇಖಾ ಎಂ. ಬಿರಾದಾರ, ಬಿಜಾಪುರ	-	೧೦೦೧-೦೦ ರೂ.
ಡಾ|| ಎಂ.ವಿ. ರವಿಶಂಕರ್. ಉಡುಪಿ	-	೨೦೦೧-೦೦ ರೂ.
ನಿರ್ಮಲಾ ಮತ್ತು ಜಯದೇವ, ಬೆಂಗಳೂರು	-	೧೫೦೦-೦೦ ರೂ.

ಪೂಜಾ ನಿಧಿಗಾಗಿ ೫೦೧ ರೂ. ಕೊಟ್ಟವರು


ಶರಣರುಗಳಾದ :

ರೇಣುಕಾದೇವಿ ಮತ್ತು ಚಂದ್ರಶೇಖರಪ್ಪ, ಮೈಸೂರು
ಶಾಂತಾ ಮತ್ತು ಎಸ್. ಬಸಪ್ಪನವರು
ಸುಭದ್ರಾ ಮತ್ತು ಕೆ. ಉಮಾಪತಿ, ಮೈಸೂರು
ಸಾವಿತ್ರಮ್ಮ ಮತ್ತು ಡಾ. ಗೋಪಾಲ್, ಮೈಸೂರು.
ಕಮಲಾಬಾಯಿ ಮತ್ತು ಎಂ. ಸುಬ್ಬರಾವ್, ಮೈಸೂರು
ಟಿ. ರೇವಣ್ಣನವರು, ಚಿಕ್ಕನಾಯಕನಹಳ್ಳಿ
ಸಿ.ಎನ್.ಕೇಶವಮೂರ್ತಿ, ಚಿಕ್ಕನಾಯಕನಹಳ್ಳಿ
ಸಿ.ಎನ್.ಮರುಳಾರಾಧ್ಯ, ಚಿಕ್ಕನಾಯಕನಹಳ್ಳಿ
ಅಂಕನಹಳ್ಳಿ ಗೋವಿಂದಪ್ಪನವರು, ಚಿಕ್ಕನಾಯಕನಹಳ್ಳಿ
ದಾಸಪ್ಪನವರ ಶಾರದಮ್ಮ ಲಕ್ಷ್ಮಯ್ಯ, ಚಿಕ್ಕನಾಯಕನಹಳ್ಳಿ
ಸಿ.ಡಿ. ಸತೀಶ್ ಪ್ರತಿಭಾ, ಚಿಕ್ಕನಾಯಕನಹಳ್ಳಿ
ಅಕ್ಕಮಹಾದೇವಿ ಮಹಿಳಾ ಸಮಾಜ, ಚಿಕ್ಕನಾಯಕನಹಳ್ಳಿ

ಅಶೋಕಕುಮಾರ್ S/o ಹನುಮಂತೇಗೌಡ, ಚಿಕ್ಕನಾಯಕನಹಳ್ಳಿ
ಚಂದ್ರಯ್ಯ ತಂದೆ ಸಂಜೀವಯ್ಯ ಚಿಕ್ಕನಾಯಕನಹಳ್ಳಿ
ಮೈನ್ಸ್ ರಾಮಚಂದ್ರಯ್ಯ ತಂದೆ ನರಸಿಂಹಯ್ಯ, ಚಿಕ್ಕನಾಯಕನಹಳ್ಳಿ
ರೇಣುಕ ಮೂರ್ತಿ ತಂದೆ ಉಜ್ಜನಿ ಪ್ರಭಣ್ಣ, ಚಿಕ್ಕನಾಯಕನಹಳ್ಳಿ
ಜಿ. ತಿಪ್ಪೇಸ್ವಾಮಿ, ಚಿಕ್ಕನಾಯಕನಹಳ್ಳಿ
ಬಿ. ಮರುಳಸಿದ್ಧಪ್ಪ, ಚಿಕ್ಕಬಿದರೆ
ನರಸಿಂಹಯ್ಯ ನಿವೃತ್ತ ಶಿಕ್ಷಕರು, ಚಿಕ್ಕನಾಯಕನಹಳ್ಳಿ
ಟಿ.ಎಸ್.ಗಿರಿಜಾ ರಾಜಣ್ಣ, ಚಿಕ್ಕನಾಯಕನಹಳ್ಳಿ
ಸಿ.ಎಮ್. ಲೋಕೇಶ್‌ಕುಮಾರ್, ಚಿಕ್ಕನಾಯಕನಹಳ್ಳಿ
ಶಿವರುದ್ರಸ್ವಾಮಿ ತಂದೆ ರಾಜಶೇಖರಪ್ಪ, ಚಿಕ್ಕನಾಯಕನಹಳ್ಳಿ
ಬಿ.ಎಸ್.ಲಿಂಗಪ್ಪ, ಚಿಕ್ಕನಾಯಕನಹಳ್ಳಿ
ಚಿಕ್ಕರಾಮಯ್ಯ ಮಾಜಿ ಪುರಸಭಾಧ್ಯಕ್ಷರು, ಚಿಕ್ಕನಾಯಕನಹಳ್ಳಿ
ಡಿ.ಜಿ.ಶಶಿಕಲಾ, ಸಿ.ಎಲ್.ಜಯದೇವ್, ಚಿಕ್ಕನಾಯಕನಹಳ್ಳಿ
ಮಲ್ಲಮ್ಮ ಕೊಂ ದೊಡ್ಡಯ್ಯ, ಹೊಸಹಳ್ಳಿ
ನಾರಾಯಣಪ್ಪ ತಂದೆ ದೊಡ್ಡಯ್ಯನವರ ಅಂಜನಪ್ಪ, ಹೊಸಹಳ್ಳಿ
ಬಾಲಯ್ಯ ತಂದೆ ಹನುಮಂತಯ್ಯ, ಹೊಸಹಳ್ಳಿ
ವೆಂಕಟೇಶ್ ಕೆ.ಪಿ. ಮಾರುತಿ ಸ್ಟೋರ್ಸ್, ಚಿಕ್ಕನಾಯಕನಹಳ್ಳಿ
ಸಿ.ಪಿ.ಮಲ್ಲೇಶಶೆಟ್ಟರು ಶಂಕರ್ ಸ್ಟೋರ್ಸ್, ಚಿಕ್ಕನಾಯಕನಹಳ್ಳಿ
ಲಿಂಗರಾಜು ಸಿ.ಎಮ್. ಚಿಕ್ಕನಾಯಕನಹಳ್ಳಿ
ವೇದಾರಾಧ್ಯ ತಂದೆ ಎಡೆಯೂರಯ್ಯ, ಚಿಕ್ಕನಾಯಕನಹಳ್ಳಿ
ಜಿ. ಅರುಣಕುಮಾರ್ ಪಿ.ಡಬ್ಲ್ಯೂ.ಡಿ. ಕಂಟ್ರಾಕ್ಟರ್, ಚಿಕ್ಕನಾಯಕನಹಳ್ಳಿ
ವೆಂಕಟಪ್ಪ ತಂದೆ ಹನುಮಯ್ಯ, ಹೊಸಹಳ್ಳಿ
ನಾಗೇಶಯ್ಯ ಪಾರ್ವತಮ್ಮ ವಿಜಯ ಸ್ಟೋರ್ಸ್, ಚಿಕ್ಕನಾಯಕನಹಳ್ಳಿ
ಹೆಚ್.ಕೆ. ಶೈಲಕುಮಾರ್ ಸೌಮ್ಯ ಕ್ಲಿನಿಕ್, ಚಿಕ್ಕನಾಯಕನಹಳ್ಳಿ
ಸಿ.ಎಸ್.ಪುಷ್ಪ ಶಿವಣ್ಣ, ಚಿಕ್ಕನಾಯಕನಹಳ್ಳಿ
ಶ್ರೀಮತಿ ರಾಜಲಕ್ಷ್ಮಿ W/o ಮಾಜಿ ಮುನ್ಸಿಪಲ್ ಪ್ರೆಸಿಡೆಂಟ್, ಚಿಕ್ಕನಾಯಕನಹಳ್ಳಿ
ಎಸ್. ರಾಜಶೇಖರ್, ಎಲ್ ಐಸಿ, ಪ್ರತಿನಿಧಿ, ಚಿಕ್ಕನಾಯಕನಹಳ್ಳಿ
ಕೆ.ಎಂ. ಸೋಮಶೇಖರಪ್ಪ, ಶ್ಯಾಮನೂರು
ಹೆಚ್. ಹೇಮಂತರಾಜು, ಶ್ಯಾಮನೂರು
ಬಿ.ಜಯಪ್ಪ, ಶ್ಯಾಮನೂರು

ಬಸವ ಮಹಾಮನೆ ಚಾರಿಟಬಲ್ ಟ್ರಸ್ಟಿನ ಇನ್‌ಕಮ್ ಟ್ಯಾಕ್ಸ್ ೮೦ಜಿ ರಿಯಾಯಿತಿಯು ಮತ್ತೆ ನವೀಕರಣಗೊಂಡಿದ್ದು, ೧-೪-೯೯ರ ನಂತರ ಕಾಣಿಕೆ ಕೊಟ್ಟವರು ತಮ್ಮ ರಸೀತಿ ನಂಬರ್ ಮತ್ತು ದಿನಾಂಕ ಉಲ್ಲೇಖಿಸಿ, ಪತ್ರ ಬರೆದರೆ ಸರ್ಟಿಫಿಕೇಟ್‌ನ ಪ್ರತಿಯನ್ನು ಕಳಿಸಿಕೊಡಲಾಗುವುದು. ಒಂದು ವೇಳೆ ಕಾಣಿಕೆ ನೀಡಿ ಇನ್ನೂ ರಸೀತಿ ಪಡೆದಿಲ್ಲದಿದ್ದರೆ ಅವರು ಪತ್ರ ಬರೆದು, ವಿವರ ನೀಡಿ, ರಸೀತಿ ಪಡೆದುಕೊಳ್ಳಬಹುದು. ಮರೆಯದೆ ಪತ್ರ ಬರೆದು ತರಿಸಿಕೊಂಡು, ಸೌಲಭ್ಯವನ್ನು ಉಪಯೋಗಿಸಿಕೊಳ್ಳಿರಿ. -ಮಾತಾಜಿ.-

ಭಾರತದ ಜನಗಣತಿ-2001






೨೦೦೧ನೆಯ ಇಸವಿಯಲ್ಲಿ ನಡೆಯುವ ಜನಗಣತಿಯಲ್ಲಿ "ಲಿಂಗಾಯತ" ಎಂದು ಬರೆಸಲು ಕಳಕಳಿಯ ಕರೆ

ಲಿಂಗಾಯತವು ವಿಶ್ವಗುರು ಬಸವಣ್ಣ (ಕ್ರಿ.ಶ.೧೧೩೪-೧೧೯೬)ನವರಿಂದ ಸ್ಥಾಪಿತವಾದ ಸ್ವತಂತ್ರ, ಸ್ವಾವಲಂಬಿ, ಪ್ರಗತಿಪರ ಧರ್ಮ. ಭಾರತದ ದೇಶದ ಜನಸಂಖ್ಯೆಯ ದೃಷ್ಟಿಯಿಂದ ಜೈನ, ಬೌದ್ಧ, ಸಿಖ್ ಧರ್ಮಗಳ ಅನುಯಾಯಿಗಳಂತೆ ಲಿಂಗಾಯತರು ಧಾರ್ಮಿಕ ಅಲ್ಪಸಂಖ್ಯಾತರ ಸೌಲಭ್ಯಗಳನ್ನು ಪಡೆಯಲು ಅರ್ಹರು. ಭಾರತೀಯ ಪರಂಪರೆಯಲ್ಲಿ ಜನಿಸಿಯೂ ಬೌದ್ಧ, ಜೈನ, ಸಿಖ್ ಧರ್ಮಗಳು ಸ್ವತಂತ್ರ ಧರ್ಮಗಳು ಎಂದು ಮಾನ್ಯತೆ ಪಡೆದಿದ್ದರೆ, ಇವುಗಳ ಅನುಯಾಯಿಗಳು ಧಾರ್ಮಿಕ ಅಲ್ಪಸಂಖ್ಯಾತರು ಎಂದು ಮಾನ್ಯತೆ ಪಡೆದಿದ್ದಾರೆ. ಅದೇ ರೀತಿ ಲಿಂಗಾಯತ ಧರ್ಮವು ಮಾನ್ಯತೆ ಪಡೆಯಲು ಅರ್ಹವಾಗಿದೆ. ಏಕೆಂದರೆ ಇದು ಹಿಂದು ಧರ್ಮದ ಒಂದು ಅಂಗವಾಗದೆ ಒಂದು ಸ್ವತಂತ್ರ ಧರ್ಮಕ್ಕೆ ಇರಬೇಕಾದ ಎಲ್ಲ ಲಕ್ಷಣಗಳನ್ನು ಹೊಂದಿದೆ.

೧. ಧರ್ಮ ಸ್ಥಾಪಕರು - ವಿಶ್ವಗುರು ಬಸವಣ್ಣನವರು
೨. ಧರ್ಮ ಸಂಹಿತೆ - ಸಮಾನತೆ ಸಾರುವ ವಚನ ಸಾಹಿತ್ಯ
೩. ಧರ್ಮದ ದೇವರ ಹೆಸರು - ಲಿಂಗದೇವ
೪. ಧರ್ಮ ಲಾಂಛನ - ನಿರಾಕಾರ ಲಿಂಗದೇವನ ಕುರುಹಾದ ಇಷ್ಟಲಿಂಗ
೫. ಧರ್ಮ ಕ್ಷೇತ್ರ - ಬಸವಣ್ಣನವರ ಐಕ್ಯಕ್ಷೇತ್ರ ಕೂಡಲಸಂಗಮ
೬. ಧಾರ್ಮಿಕ ವಾರ್ಷಿಕ ಸಮಾವೇಶ - ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ
೭. ಧಾರ್ಮಿಕ ವ್ರತ - ಶರಣ ವ್ರತ
೮. ಧರ್ಮ ಧ್ವಜ - ಷಟ್ಕೋನ- ಇಷ್ಟಲಿಂಗ ಸಹಿತ ಬಸವ ಧ್ವಜ
೯. ಧರ್ಮ ಸಂಸ್ಕಾರ - ಇಷ್ಟಲಿಂಗ ದೀಕ್ಷೆ
೧೦. ಧರ್ಮ ಮಂದಿರ - ಬಸವ (ಅನುಭವ)ಮಂಟಪ
೧೧. ಧಾರ್ಮಿಕ ವಿಧಿ-ವಿಧಾನ - ಗುರು-ಬಸವಣ್ಣ, ಲಿಂಗ-ಗೋಳಾಕಾರದ ಇಷ್ಟಲಿಂಗ, ಜಂಗಮ-ಪವಿತ್ರಾತ್ಮರ ಪೂಜೆ
೧೨. ಧಾರ್ಮಿಕ ಕೂಟ - ಶರಣ ಸಂಗಮ-ವಾರದ ಪ್ರಾರ್ಥನೆ



೧೩. ಧಾರ್ಮಿಕ ಮಾಸ - ಶ್ರಾವಣ
೧೪. ಧರ್ಮ ಭಾಷೆ - ಕನ್ನಡ
೧೫. ಧರ್ಮ ಪರಂಪರೆ - ಶರಣ ಪರಂಪರೆ
೧೬. ಧಾರ್ಮಿಕ ಸೋದರತ್ವ - ಜಾತಿ ವರ್ಗ ವರ್ಣಾತೀತ ಸಮಾನತೆ
೧೭. ಧರ್ಮದ ಧ್ಯೇಯ - ಜಾತಿ ವರ್ಣ ವರ್ಗರಹಿತ ಧರ್ಮಸಹಿತ ಶರಣ ಸಮಾಜ (ಕಲ್ಯಾಣ ರಾಜ್ಯ)ನಿರ್ಮಾಣ

ಆದ್ದರಿಂದ ಜನಗಣತಿಯ ೮ನೆಯ ಕಾಲಂ ಮತ (Religion) ಎಂದಿರುವಲ್ಲಿ ಲಿಂಗಾಯತ (Lingayat-L) ಎಂದು ಬರೆಸಿರಿ. (ಇಂಗ್ಲೀಷಿನ Religion ಪದವನ್ನು ಧರ್ಮ ಎಂದು ಭಾಷಾಂತರಿಸುವುದೇ ಸೂಕ್ತ ಆದರೆ ಜನಗಣತಿಯ ಕನ್ನಡ ಪರಿಪತ್ರದಲ್ಲಿ Religion ಪದವನ್ನು ಮತ ಎಂದು ಭಾಷಾಂತರಿಸಲಾಗಿದೆ) ಗಣತಿಕಾರರು ಸರಿಯಾಗಿ ಬರೆದಿರುವರೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ. ಗಣತಿಕಾರರು ನೀವು ತಿಳಿಸಿದರೂ ಅದರಂತೆ ಬರೆದುಕೊಳ್ಳದಿದ್ದರೆ ತಕ್ಷಣವೇ ಪ್ರತಿಭಟಿಸಿ, ನಾಗರಿಕ ಅಧಿಕಾರಿಗಳಾದ ತಹಸೀಲ್ದಾರ್, ಅಸಿಸ್ಟೆಂಟ್ ಕಮೀಷನರ್, ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿರಿ. ಇನ್ನೇನಾದರೂ ವಿವರಗಳು ಬೇಕಾಗಿದ್ದಲ್ಲಿ ಹಿಂದಿನ ಪುಟದಲ್ಲಿ ಕೊಟ್ಟಿರುವ ವಿಳಾಸಕ್ಕೆ ಸಂಪರ್ಕಿಸಿರಿ.-

ವಿಶೇಷ ಎಚ್ಚರಿಕೆ: ವೀರಶೈವ ಪದವು ಲಿಂಗಾಯತದ ಸಮಾನಾರ್ಥ ಕೊಡುವ ಪದ ಎಂದು ಭಾವಿಸಿ ಅದನ್ನು ಬಳಸಿ ಲಿಂಗಾಯತ ಧರ್ಮಕ್ಕೆ ಸಿಗುವ ಮಾನ್ಯತೆಯನ್ನು ತಪ್ಪಿಸುವ ಪ್ರಮಾದ ಮಾಡಬೇಡಿರಿ.


ಬಸವ ಧರ್ಮ ಪೀಠ / O- 13-6/ ರಮೇಶ್ ಲಿಂಗಾಯತ

ಜನಗಣತಿ-೨೦೦೧



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

೮೬೬೬೬



೨೦೦೧ನೆಯ ಇಸವಿಯ ಜನಗಣತಿಯ ಕರಪತ್ರ ಮುದ್ರಣ ವೆಚ್ಚದ ವಿವರ

ಶರಣ ಬಂಧುಗಳೇ,

ಭಾರತ ಸರಕಾರವು ೨೦೦೧ನೆಯ ಇಸವಿಯಲ್ಲಿ ಜನಗಣತಿಯನ್ನು ಮಾಡಲಿದೆ. ಇದರ ಮೊದಲನೆಯ ಹಂತವಾಗಿ ಮನೆಗಣತಿಯು ಪ್ರಾರಂಭವಾಗಿರುವುದು ನಿಮಗೆಲ್ಲ ತಿಳಿದಿದೆ. ೨೦೦೧ನೆಯ ಫೆಬ್ರವರಿಯ ಒಳಗೆ ನಾವು ವ್ಯಾಪಕ ಪ್ರಚಾರವನ್ನು ಕೈಕೊಂಡು ಇಷ್ಟಲಿಂಗಧಾರಿ ಧರ್ಮದ ಅನುಯಾಯಿಗಳು ಜನಗಣತಿಯ ಧರ್ಮ (Religion) ಕಾಲಮ್‌ನಲ್ಲಿ ಹಿಂದು-ಲಿಂಗಾಯತ ಎಂದಾಗಲಿ, ವೀರಶೈವ-ಲಿಂಗಾಯತ ಎಂದಾಗಲಿ, ವೀರಶೈವ ಎಂದಾಗಲಿ **ಬರೆದೆ ಕೇವಲ ಲಿಂಗಾಯತ ಎಂದು ಬರೆಸಬೇಕು** ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಈ ದಿಶೆಯಲ್ಲಿ ಮುದ್ರಿಸಲಾಗಿರುವ **"ಜನಗಣತಿ-ಲಿಂಗಾಯತರಿಗೆ ಕಳಕಳಿಯ ಕರೆ"** ಎಂಬ ಕರಪತ್ರಗಳನ್ನು ಹೆಚ್ಚುವರಿ ಪ್ರತಿ ಮುದ್ರಿಸಿ ನೀವು ನಿಮ್ಮ ಊರಿನಲ್ಲಿ ಹಂಚಬೇಕು, ನಿಮ್ಮ ಬಂಧು-ಮಿತ್ರರಿಗೆ ಅಂಚೆಯಲ್ಲಿ ಕಳಿಸಬಹುದು. ನೀವೇ ಮುದ್ರಿಸಿದರೂ ಸಂತೋಷ; ನಮ್ಮ ಸಂಸ್ಥೆಯಿಂದ ಮುದ್ರಿಸಿಕೊಡಲೂ ನಾವು ಸಿದ್ಧರಿದ್ದೇವೆ. ದಾನಿಗಳು ಎಂದು ನಿಮ್ಮ ಹೆಸರನ್ನು ಹಾಕಿ ಮುದ್ರಿಸಲೂ ಸಾಧ್ಯವಿದೆ. ಕೆಳಗೆ ಕೊಟ್ಟಿರುವ ದರದಲ್ಲಿ ಮುದ್ರಿಸಿ ಕೊಡಲಾಗುವುದು.

ಸೈಜ್ ೧/೮ ಡೆಮ್ಮಿ, ಎರಡೂ ಬದಿಯಲ್ಲಿ ವಿಷಯ ಇರುವುದು ; ಕಲರ್ ನ್ಯೂಸ್ ಪ್ರಿಂಟ್ ಪೇಪರ ಬಳಸಲಾಗುವುದು. ಬೆಂಗಳೂರಿನಿಂದ ಬೇರೆ ಬೇರೆ ಊರುಗಳಿಗೆ ಕಳಿಸುವ ಸಾಗಾಣಿಕೆ ವೆಚ್ಚ ಪ್ರತ್ಯೇಕ.

				(ಒಂದು ಪ್ರತಿಗೆ)
೧.	೧೦೦೦ ಪ್ರತಿ	೩೫೦ ರೂ.	ಮೂರು ನೂರಾ ಐವತ್ತು	೩೫ ಪೈಸೆ
೨.	೨೦೦೦ ಪ್ರತಿ	೪೬೦ ರೂ.	ನಾಲ್ಕು ನೂರಾ ಅರವತ್ತು	೨೩ ಪೈಸೆ
೩.	೩೦೦೦ ಪ್ರತಿ	೫೪೦ ರೂ.	ಐದು ನೂರಾ ನಲವತ್ತು	೧೮ ಪೈಸೆ
೪.	೫೦೦೦ ಪ್ರತಿ	೬೫೦ ರೂ.	ಆರು ನೂರಾ ಐವತ್ತು	೧೩ ಪೈಸೆ
೫.	೧೦೦೦೦ ಪ್ರತಿ	೧೧೦೦ ರೂ.	ಹನ್ನೊಂದು ನೂರು	೧೧ ಪೈಸೆ

ದಾನಿಗಳ ಹೆಸರನ್ನು ಮುದ್ರಿಸದೆ ಒಟ್ಟಾಗಿ ಮುದ್ರಿಸಿದ ಕರಪತ್ರಗಳನ್ನು ಪಡೆದುಕೊಳ್ಳುವುದಾದರೆ ಆಗ ೧೩೦ ರೂ.ಗೆ ಒಂದು ಸಾವಿರದಂತೆ ಒದಗಿಸಬಹುದು. ಹೆಚ್ಚಿನ ವಿವರಗಳಿಗಾಗಿ ಮತ್ತು ಆರ್ಡರ್ ಕೊಡಬೇಕು ಎನ್ನುವವರು ಕೆಳಗೆ ಕೊಟ್ಟ ವಿಳಾಸಕ್ಕೆ ವ್ಯವಹರಿಸಿರಿ.

ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮೀಜಿ
ಕಾರ್ಯದರ್ಶಿ

ವಿಳಾಸ : ದೂರವಾಣಿ -೩೩೨ ೫೩೩೫ / ೩೩೨ ೨೭೯೦
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, ೨೦೩೫
೨೦ನೇ ಮೇನ್, ರಾಜಾಜಿನಗರ, ಬೆಂಗಳೂರು-೫೬೦ ೦೧೦

ಜನಗಣತಿಯ ಇಪ್ಪತ್ತು ಸಾವಿರ ಕರಪತ್ರ ಮುದ್ರಣಕ್ಕಾಗಿ 2000 ರೂ.ಗಳನ್ನು ಸಲ್ಲಿಸಿದ ಧನ ದಾಸೋಹಿಗಳು

ಶರಣರುಗಳಾದ :

1. ಎಸ್.ಆರ್.ಸಿದ್ಧಣ್ಣನವರ ಸುಪುತ್ರರಾದ
ಎಸ್.ಆರ್.ಎಸ್. ರಾಜಣ್ಣನವರು ಮತ್ತು ಸೋದರರು, ಸೂಲೀಬೆಲೆ
2. ಅಪ್ಪಯ್ಯ ಸ್ವಾಮಪ್ಪ ಮತ್ತು ಮಕ್ಕಳು, ಜಂಗಮಕೋಟೆ

10000 ಕರಪತ್ರ ಮುದ್ರಣಕ್ಕೆ 1100 ರೂ.ಗಳನ್ನು ಸಲ್ಲಿಸಿದವರು

ರಾಷ್ಟ್ರೀಯ ಬಸವ ದಳ ಭದ್ರಾವತಿ
ಹೆಚ್. ಸದಾಶಿವಯ್ಯ, ಕೆ.ಆರ್.ಪುರಂ, ಬೆಂಗಳೂರು
ಎಸ್. ಗಂಗಾಧರ, ರಾಮಮೂರ್ತಿನಗರ, ಬೆಂಗಳೂರು
ರಾಷ್ಟ್ರೀಯ ಬಸವ ದಳ, ಕೊಪ್ಪಳ
ಲಿಂಗಾಯತ ಧರ್ಮ ಬಂಧುಗಳು, ವರ್ತೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಲಿಂಗಾಯತ ಧರ್ಮ ಬಂಧುಗಳು, ಮಲ್ಲಸಂದ್ರ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಲಿಂಗಾಯತ ಧರ್ಮ ಬಂಧುಗಳು, ಅಟ್ಟೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಎ.ಎಲ್.ಬಸಪ್ಪ, ಅರಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಕುರುಗಲ್ ಲಿಂಗಾಯತ ಸಮಾಜ, ಕೋಲಾರ
ವಿ.ಆರ್.ಸುದರ್ಶನ್, ಎಂಎಲ್‌ಸಿ, ವೇಮಗಲ್, ಕೋಲಾರ ಜಿಲ್ಲೆ
ವೈ.ಎಂ. ಸಿದ್ಧಣ್ಣ ಮತ್ತು ಸೋದರರು, ವೈಚಕೂರು, ಕೋಲಾರ ಜಿಲ್ಲೆ
ಅಯ್ಯಪ್ಪ ಬಿನ್ ಬಸಯ್ಯ, ಕುಂಬಿಗಾನಹಳ್ಳಿ, ಕೋಲಾರ ಜಿಲ್ಲೆ
ಲಿಂಗಾಯತ ಸಮಾಜ ಬಾಂಧವರು, ತಾವರೆಕೆರೆ, ಬೆಂ.ಗ್ರಾ.
ಸಿ.ಎಂ. ಬಸವರಾಜಯ್ಯ, ಹೆಚ್.ಕ್ರಾಸ್, ಶಿಡ್ಲಘಟ್ಟ, ಕೋಲಾರ ಜಿಲ್ಲೆ
ಮಹಾದೇವಿ ಬಸವರಾಜ ಮಗದುಮ್, ಗೋಕಾಕ್
ಕಮಲಾ ಸಿದ್ಧರಾಮ ಚೌಧರಿ, ಗೋಕಾಕ್
ಶ್ರೀಶೈಲ ಗುರುಸಿದ್ಧಪ್ಪ ಭರಭರಿ, ಗೋಕಾಕ್

5000 ಕರಪತ್ರ ಮುದ್ರಣಕ್ಕೆ 650 ರೂ.ಗಳನ್ನು ಸಲ್ಲಿಸಿದವರು

ಬಿ.ಎಂ. ವಿನಯಕುಮಾರ್ S/o ಬಿ.ಕೆ.ಮಂಜುನಾಥ, ಬಳ್ಳಾರಿ
ಮಹಾದೇವಿ ಬಸವರಾಜ ಮಗದುಮ್, ಗೋಕಾಕ್
ಸುಶೀಲಾ ಅಶೋಕ್ ಹಿರೇಮಠ, ಗೋಕಾಕ್
ಮಹಾದೇವಿ ಶಿವಪುತ್ರ ಶೆಟ್ಟಿ, ಗೋಕಾಕ್
ಸುಶೀಲಾ ಬಸವರಾಜ್ ಶೆಟ್ಟಿ, ಗೋಕಾಕ್
ಬಸವ ಸಾಗರ, ದಾಕ್ಷಾಯಣಿ ಬಸವರಾಜ್ ಗೋಟಡಕಿ, ಗೋಕಾಕ್

ವಿ.ಸೂ: ಕರಪತ್ರ ಮುದ್ರಣದ ವೆಚ್ಚದ ವಿವರವನ್ನೂ ಪ್ರತ್ಯೇಕವಾಗಿ ಕೊಡಲಾಗಿದೆ. ಧನ ದಾಸೋಹಿಗಳ ಹೆಸರು ಹಾಕಿಯೇ ಪ್ರಕಟಿಸಿ, ದಾನಿಗಳು ಕೇಳಿದಷ್ಟು ಪ್ರತಿ ಕೊಟ್ಟು, ಉಳಿದುವನ್ನು ಇನ್ನಿತರ ಊರುಗಳಲ್ಲಿ ಹಂಚಿಸಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ದಾನಿಗಳು ಈ ಪವಿತ್ರ ಕಾರ್ಯಕ್ಕೆ ನೆರವು ನೀಡಬೇಕೆಂದು ಕೋರುತ್ತೇವೆ.

ಧರ್ಮಪಿತ ಬಸವಣ್ಣನವರೇ ಲಿಂಗಾಯತರ ಗಣಪತಿ

ಒಂದು ವಿವಾಹದ ಆಮಂತ್ರಣ ಪತ್ರ ಬಂದಿತು. ಮರುದಿವಸವೇ ಮದುವೆ. ಪತ್ರ ಬರೆದು ಆಶೀರ್ವಾದಪೂರ್ವಕವಾಗಿ ಅಕ್ಷತೆಯನ್ನು ಕಳಿಸೋಣ ಎಂದರೆ ಸಕಾಲಕ್ಕೆ ತಲ್ಪುವ ಭರವಸೆ ಇರಲಿಲ್ಲ. ಆ ಊರಿನ ಬೇರೊಬ್ಬ ಶರಣರು ಫೋನ್ ಮಾಡಿದರು. ಆಗ ವಿವಾಹದ ಆಮಂತ್ರಣ ಪತ್ರ ತಡವಾಗಿ ತಲ್ಪಿದ್ದು ತಿಳಿಸಿ, ಆಶೀರ್ವಾದ ತಿಳಿಸಿಬಿಡಿರಿ ಎಂದು ಅವರಿಗೆ ಹೇಳಿದೆ ಮತ್ತು ಇಷ್ಟೇಕೆ ತಡವಾಗಿ ಆಹ್ವಾನ ಪತ್ರ ಕಳಿಸಿದರು ಎಂದು ಕೇಳಿದೆ. ''ಅವರು ಪೂರ್ಣ ಬಸವ ತತ್ವ ನಿಷ್ಠರಲ್ಲ ಮೇಲೆ ಗಣಪತಿ ಚಿತ್ರ ಮುದ್ರಿಸಿದ ಕಾರ್ಡದಲ್ಲಿ ಆಹ್ವಾನ ಮುದ್ರಿಸಿದ್ದರು. ಹೀಗಾಗಿ ಹೆದರಿ ನಿಮಗೆ ಕಳಿಸಲಿಲ್ಲ. ಆದರೆ ಕಳಿಸದೆ ಇರಲು ಅವರ ಮನ ಒಪ್ಪಲಿಲ್ಲ ಹೀಗಾಗಿ ತಡವಾಯಿತು'' ಎಂದು ಹೇಳಿದರು.

ಮತ್ತೋರ್ವ ಕುಟುಂಬದವರು ; ಪಾಸ್ ಪೋರ್ಟ್ ಸೈಜಿನ ಒಂದು ಸಾವಿರ ಬಸವ ಭಾವಚಿತ್ರ ತರಿಸಿಕೊಂಡರು. ಏಕೆ ಎಂದು ಕೇಳಿದಾಗ ಅವರ ಮಗ ಗೊತ್ತಿಲ್ಲದೆ ಮುಖಪುಟದ ಮೇಲೆ ಗಣಪತಿಯ ಚಿತ್ರವಿರುವ ಕಾರ್ಡ್ ತಂದು ಮುದ್ರಿಸಿರುವುದಾಗಿಯೂ ಕೆಲವು ಶರಣರು ಆಕ್ಷೇಪ ಎತ್ತಿದ್ದರಿಂದ ಅದರ ಮೇಲೆ ಧರ್ಮಗುರುವಿನ ಭಾವಚಿತ್ರ ಅಂಟಿಸಿ ಪೋಸ್ಟ್ ಮಾಡುತ್ತಿರುವುದಾಗಿಯೂ ಹೇಳಿದರು.

ಆಗ ನನಗನ್ನಿಸಿತು. ''ಲಿಂಗಾಯತರು ಕೊಂಚ ಸುಧಾರಿಸುತ್ತಿದ್ದಾರೆ. ಏಕೆಂದರೆ ಮೊದಲು ಪೌರಾಣಿಕ ದೇವತೆಗಳನ್ನು ಪೂಜಿಸುವುದು ತಪ್ಪು ಎಂಬುದು ಸಹ (ಅನೇಕ ಸ್ವಾಮಿಗಳನ್ನು ಹಿಡಿದು) ಗೊತ್ತಿರಲಿಲ್ಲ. ಈಗ ಅದು ತಪ್ಪು ಎಂದು ತತ್ವನಿಷ್ಠರಿಗೆ ಅಂಜುತ್ತಿದ್ದಾರೆ. ಇದು ಶುಭಲಕ್ಷಣವೆ !'' ಎಲ್ಲರಿಗೂ ದೊಡ್ಡ ಹೊಟ್ಟೆಯ, ಗಜಮುಖದ ದೇವತೆಯೇ ಗಣಪತಿ ಅಲ್ಲ. ಗಣ ಎಂದರೆ ಸಮೂಹ. ಪತಿ ಎಂದರೆ ಒಡೆಯ. ಸಮೂಹದ ಒಡೆಯನಿಗೆ ಮೊದಲ ಪೂಜೆ-ಸ್ತೋತ್ರ ಸಲ್ಲಬೇಕು ಎಂದು ಹೇಳಿದಾಗ ಎಲ್ಲರೂ ಆನೆಯ ಸೊಂಡಿಲಿನ ಗಣಪತಿಯನ್ನೇ ಪೂಜಿಸಬೇಕು ಎಂದರ್ಥವಲ್ಲ. ಬೌದ್ಧರಿಗೆ ಬುದ್ಧ, ಜೈನರಿಗೆ ಮಹಾವೀರ, ಕ್ರೈಸ್ತರಿಗೆ ಏಸುಕ್ರಿಸ್ತ ಗಣಪತಿಗಳಾದಂತೆ ಲಿಂಗಾಯತರಿಗೆ ಬಸವಣ್ಣನೇ ಗಣಪತಿ. ಆದ್ದರಿಂದ ಪ್ರಾರಂಭದಲ್ಲಿ ನಮ್ಮ ಗಣಪತಿ ಬಸವಣ್ಣನನ್ನು ಆರಾಧಿಸಬೇಕು ಎಂದೇ ಶರಣರ ಆದೇಶವಿದೆ.

೧. ಬಸವಣ್ಣನ ನೆನೆದು ಮಾಡುವ ಭಕ್ತಿ ನಡೆವುದಯ್ಯ
ಬಸವಣ್ಣನ ನೆನೆಯದೆ ಮಾಡುವ ಭಕ್ತಿ ಎಳತಟವಯ್ಯ
ಎಂದರು ಸಿದ್ಧರಾಮ ಶಿವಯೋಗಿಗಳು.

೨. ಬಸವಾ ಬಸವಾ ಎಂದು ಮಜ್ಜನಕ್ಕೆರೆಯದವರ
ಭಕ್ತಿ ಶೂನ್ಯ ಕಾಣಾ ಕಲಿದೇವರ ದೇವಾ
ಎಂದರು ಮಡಿವಾಳ ಮಾಚಿದೇವರು

೩. ಇಂತೀ ಮಹಾಪ್ರಮಥರಿಗೆ-ಪುರಾತರಿಗೆ
ಅಸಂಖ್ಯಾತ ಮಹಾಗಣಂಗಳಿಗೆ ಪ್ರಮಥನಾಯಕನಾಗಿ
ಶಿವಾಚಾರದ ಘನವ ಮೆರೆದಾತ ಬಸವಣ್ಣ
ಎಂದರು ಚನ್ನಬಸವಣ್ಣನವರು.

ವೈಚಾರಿಕ ಪತ್ರಿಕೆಯಾದ ಕಲ್ಯಾಣ ಕಿರಣವನ್ನು ಓದಲು ಪ್ರೇರೆಪಿಸಿ,
ನಿಮ್ಮ ಬಂಧು-ಮಿತ್ರರಿಗೆ ಉಡುಗೊರೆಯಾಗಿ ಕಳಿಸಿರಿ.

ಬಸವ ಗುರುವಿಗೆ ಪುಷ್ಪವೃಷ್ಟಿ

ಹೂವ ಸೂರ‍್ಯಾಡೋಣ ಗುರು ಬಸವನ ಮೇಲೆ
ಧರ್ಮಕರ್ತನ ಮೇಲೆ ಹೂವ ಸೂರ‍್ಯಾಡೋಣ || ಪಲ್ಲವಿ ||
ಇಷ್ಟಲಿಂಗವ ನೀಡಿ ಶ್ರೇಷ್ಠ ಮಾರ್ಗವ ತೋರಿ
ಲಿಂಗಾಯತ ಧರ್ಮವ ಕೊಟ್ಟ ಮಹಿಮನ ಮೇಲೆ || ೧ ||
ಒಬ್ಬ ದೇವನ ನಂಬಿ ಶ್ರದ್ಧೆಯಿಂ ಸಾಗುತ
ಅರಿವಿನ ನಿಲುವನು ಪಡೆದ ಸದ್ಭಕ್ತನ ಮೇಲೆ || ೨ ||
ಕರ್ತನಿಗಲ್ಲದೆ ಕುಚ್ಚಿತಗೆರಗೆನು
ಎಂದು ಛಲವ ತೊಟ್ಟ ವೀರ ಮಹೇಶನ ಮೇಲೆ || ೩ ||
ನಾನು ಎನ್ನುವ ಹಮ್ಮನು ಹರಿಯುತ
ದೇವನಿಗೊಲಿದಿಹ ಪರಮ ಪ್ರಸಾದಿಯ ಮೇಲೆ || ೪ ||
ಅಂಗದ ಗುಣವಳಿದು ಲಿಂಗಭಾವವು ಬಲಿದು
ಲಿಂಗದೇಹಿಯಾಗಿಹ ಪ್ರಾಣಲಿಂಗಿಯ ಮೇಲೆ || ೫ ||
ಸತಿಸುತ ಬಳಗದ ಮೋಹವ ಛೇದಿಸಿ
ದೇವಗೆ ಸತಿಯಾದ ದಿವ್ಯ ಶರಣನ ಮೇಲೆ || ೬ ||
ಅಂಗಲಿಂಗ ಸಮರಸ ಶೃಂಗಭಾವವು ಬಲಿದು
ತ್ರಿಪುಟಿಯ ಭಾವವಳಿದ ಭಾವಲಿಂಗೈಕ್ಯನ ಮೇಲೆ || ೭ ||
ಆರು ಸ್ಥಲಗಳ ದಾಟಿ ಧರೆಯ ಉದ್ಧಾರಕ್ಕೆ
ಮಹಾಭಕ್ತ ಸ್ಥಲದಲಿ ನಿಂತ ಕರುಣೆಯ ಮೇಲೆ || ೮ ||
ಮುಕ್ತಿದಾತನ ತೋರಿ ಮುಕ್ತಿದಾಯಕನಾದ
ಸಚ್ಚಿದಾನಂದನ ಮುದ್ದು ಕಂದನ ಮೇಲೆ || ೯ ||

-ಮಾತಾಜಿ

ಬಸವ ತತ್ವ ತರಬೇತಿ ಕಮ್ಮಟ - ಭಕ್ತಿ ಪಕ್ಷ ಸಮ್ಮೇಳನ

ಬಸವ ಧರ್ಮ ಸಮ್ಮೇಳನಗಳು ಆರಂಭವಾದ ಮೇಲೆ ಸಮಯವು ಸಿಗದೆ ಬಸವ ತತ್ವ ತರಬೇತಿ ಕಮ್ಮಟ ನಡೆಯಲು ಅವಕಾಶವು ದೊರೆತಿರಲಿಲ್ಲ. ಈ ಬಾರಿ ಮೇ ೧೧ರಿಂದ ೨೧ರವರೆಗೆ ಏರ್ಪಡಿಸಲಾದ ಕಮ್ಮಟವು ಬಸವ ತತ್ವಾಸಕ್ತರಿಗೆ ಒಂದು ವರವೇ ಆಯಿತು. ಎತ್ತರಕ್ಕೆ ಬೆಳೆದು ಚಾಮರ ಬೀಸುವ ತೆಂಗಿನ ಮರಗಳು ; ಬಿದ್ದ ಮಳೆ ಮತ್ತು ವಸಂತ ಋತುವಿನಿಂದಾಗಿ ನಳನಳಿಸುತ್ತಿದ್ದ ಹಸಿರು ವೃಕ್ಷಗಳು ; ಇಂಥ ಬಸವ ಗಂಗೋತ್ರಿಯಲ್ಲಿ ೧೧ ದಿನಗಳನ್ನು ಕಳೆದವರಿಗೆ ಯಾವುದೋ ಒಂದು ಅವಿಸ್ಮರಣೀಯ ಲೋಕದಲ್ಲಿ ಇದ್ದಂತಹ ಅನುಭವ. ಹಿಂದಿನ ಎಲ್ಲ ಶಿಬಿರಗಳಿಗಿಂತಲೂ ಈ ಸಲದ್ದು ಬಹಳ ಚೇತೋಹಾರಿಯೂ ಸಮಗ್ರವೂ ಆಗಿತ್ತು. ಹವಾ ಮಾಲಿನ್ಯದಿಂದ ಕೂಡಿದ ಬೆಂಗಳೂರಿಂದ ಶೀರಾ ದೂರವೂ ಇಲ್ಲದ ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ ಬಸವ ಗಂಗೋತ್ರಿ, ಪರಿಶುದ್ಧ ಹವೆಯ ದ್ವೀಪ ಸಂಭವದಂತಹ ತೋಟ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿ ಹಾಗೂ ಮಾರ್ಗದರ್ಶನದಲ್ಲಿ ನಡೆದ ಶಿಬಿರದಲ್ಲಿ ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳು, ಕಡೆಯ ದಿನಗಳಲ್ಲಿ ಪೂಜ್ಯ ಶ್ರೀ

ಜಗದ್ಗುರು ಮಾತೆ ಗಂಗಾದೇವಿಯವರು ಉಪನ್ಯಾಸ ನೀಡಿದರು. ಮಲ್ಲಾಡಿಹಳ್ಳಿಯ ಯೋಗ ಕೇಂದ್ರದಲ್ಲಿ ಪರಿಣಿತರಾದ ಶ್ರೀ ಸಿದ್ಧಪ್ಪನವರು ಯೋಗಾಸನ, ಅಂಗಮರ್ಧನ, ಗಿಡಮೂಲಿಕೆಗಳ ಉಪಯುಕ್ತತೆ ಕುರಿತು ವಿಶೇಷ ತರಬೇತಿ ನೀಡಿದರು. ಕೊಪ್ಪಳ ರಾಷ್ಟ್ರೀಯ ಬಸವ ದಳದ ವೀರಣ್ಣ ಕೊರ್ಲಳ್ಳಿ ಪ್ರಾಣಾಯಾಮ ಕುರಿತು ವಿಶೇಷ ತರಬೇತಿ ನೀಡಿದರು. ಸುಪ್ರಭಾತದ ಐದು ಗಂಟೆಯಿಂದ ರಾತ್ರಿ ೧೦ರವರೆಗೆ ನಿರಂತರವಾಗಿ ನಡೆದ ತರಬೇತಿ ಕಮ್ಮಟವು ವ್ಯಕ್ತಿಯ ಸರ್ವಾಂಗೀಣ ವ್ಯಕ್ತಿತ್ವ ವಿಕಾಸಕ್ಕೆ ಸಹಕಾರಿಯಾಯಿತು. ಸಂಜೆ ೫-೩೦ರಿಂದ ೬-೩೦ರವರೆಗೆ ಕಡ್ಡಾಯವಾದ ಆಟ-ಓಟಗಳು ಮಕ್ಕಳಿಂದ ಹಿಡಿದು ಮುದುಕರವರೆಗೆ ಎಲ್ಲರನ್ನೂ ಮುದಗೊಳಿಸುತ್ತಿದ್ದರು. ಧರ್ಮದ ಬಗ್ಗೆ ಮಾತ್ರವಲ್ಲ ಆರೋಗ್ಯ ರಕ್ಷಣೆಯ ಬಗ್ಗೆ ವಿಶೇಷ ಉಪನ್ಯಾಸಗಳು ಏರ್ಪಾಡಾಗಿದ್ದವು. ಜೊತೆಗೆ ಶರಣ. ಶಿವಕುಮಾರ ಡಾಕುಳಗೆ ಮತ್ತು ಮಿತ್ರರು ಏರ್ಪಡಿಸುತ್ತಿದ್ದ ರಸಪ್ರಶ್ನೆ (ಕ್ವಿಜ್) ಕಾರ್ಯಕ್ರಮಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರನ್ನೂ ಆಕರ್ಷಿಸಿದವು. ಮೊದಲ ಒಂಭತ್ತು ದಿನ ನಾಲ್ಕು ನೂರು ಶಿಬಿರಾರ್ಥಿಗಳು ಭಾಗವಹಿಸಿದರೆ ಭಕ್ತಿಪಕ್ಷ ಸಮ್ಮೇಳನದಲ್ಲಿ ಒಂದು ಸಾವಿರ ಜನರು ಎರಡು ದಿವಸಗಳ ಕಾಲ ಭಾಗವಹಿಸಿದರು. ನೇರ ಚರ್ಚೆಗೆ ಅವಕಾಶ ಇದ್ದುದರಿಂದ ಅನೇಕ ಸಂದೇಹಗಳನ್ನು ಶಿಬಿರಾರ್ಥಿಗಳು ಪೂಜ್ಯ ಮಾತಾಜಿಯವರನ್ನು ಕೇಳಿ ಪರಿಹರಿಸಿಕೊಂಡರು.

ಭಕ್ತಿ ಪಕ್ಷ ಸಮ್ಮೇಳನ

ಮೇ ೨೦-೨೧ರಂದು ಭಕ್ತಿಪಕ್ಷ ಸಮ್ಮೇಳನ. ಮೈಸೂರು ನಗರದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಶರಣ. ಎ.ಎಸ್. ಗುರುಸ್ವಾಮಿಯವರು ಸಮ್ಮೇಳನವನ್ನು ಉದ್ಘಾಟಿಸಿದರು. ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು ಮತ್ತು ಬೀದರಿನ ಚಟ್ನಳ್ಳಿಯ ಅಲ್ಲಮಪ್ರಭು ಜಗದ್ಗುರು ಮಠದ ಪೂಜ್ಯ ಶ್ರೀ ಸಿದ್ಧೇಶ್ವರಾನಂದ ಸ್ವಾಮಿಗಳು, ಗೋಕಾಕ್ ಬಸವ ಮಂಟಪದ ಪೂಜ್ಯ ಶ್ರೀ ಬಸವಕುಮಾರ ಸ್ವಾಮಿಗಳು ೨೦೦೧ರ ಜನಗಣತಿಯ ನಿಮಿತ್ತ ಲಿಂಗಾಯತ ಧರ್ಮ ಜನಜಾಗರಣ ಯಾತ್ರೆಯ ಸಂಕಲ್ಪ ಹೊತ್ತು ಬಸವ ಧ್ವಜಾರೋಹಣವನ್ನು ಮಾಡಿದರು. ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಮಾತೆ ಮಹಾದೇವಿ ಮತ್ತು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನಡೆದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರಿನ ತಮ್ಮಯ್ಯನವರು ವಹಿಸಿದ್ದರು. ಶರಣ. ಕೆ.ಎಂ. ಶಿವಶಂಕರ್ ಅವರು ಶರಣ ಶ್ರೀ ವಿಜಯೇಂದ್ರ ಸ್ವಾಮಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕೊಪ್ಪಳ ನಗರದಲ್ಲಿ ಬಸವ ಮಂಟಪ ಕಟ್ಟಲು 60 X 40 ಅಡಿ ಅಳತೆಯ ನಿವೇಶನವನ್ನು ದಾನ ಮಾಡಿದ್ದಲ್ಲದೆ, ಕೂಡಲ ಸಂಗಮದ ಸರ್ವಜ್ಞ ಶರಣಧಾಮದಲ್ಲಿಯೂ ಒಂದು ಕೋಣೆ ಕಟ್ಟಿಸಲು ೫೧೦೦೦ ರೂ. ದಾನ ಮಾಡಲು ಸಂಕಲ್ಪಿಸಿ ಮೊದಲ ಕಂತು ೧೧೦೦೦ ರೂ.ಗಳನ್ನು ನೀಡಿದ ಶರಣ. ವೀರಭದ್ರಪ್ಪ ಕೊರ್ಲಹಳ್ಳಿಯವರನ್ನು ಶಾಸಕ ಶರಣ. ಗುರುಸ್ವಾಮಿಯವರು ಶಾಲು ಹೊದ್ದಿಸಿ ಸತ್ಕರಿಸಿದರು.

ದಿ. ೨೧ರಂದು ನೆರವೇರಿದ ಸಮಾರೋಪ ಸಮಾರಂಭವನ್ನು ಜೈನ್ ವೃತ್ತಿಪರ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶರಣ ಡಿ.ಪಿ. ಪ್ರಕಾಶ್ ಅವರು ಉದ್ಘಾಟಿಸಿದರು. ಖ್ಯಾತ ಬರಹಗಾರ ರಂಜಾನ್ ದರ್ಗಾ ಅವರು ಮತ್ತು ನ್ಯಾಷನಲ್ ಏರೋಸ್ಪೇಸ್ ಲ್ಯಾಬೋರೇಟರಿಯಲ್ಲಿ ವಿಜ್ಞಾನಿಗಳಾಗಿರುವ ಡಾ|| ಎಸ್.ಆರ್. ಸಿದ್ಧಲಿಂಗಪ್ಪನವರು ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ್ದರು. ೧೫ ವರ್ಷಗಳಿಂದಲೂ ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳ ಅಧ್ಯಕ್ಷರಾಗಿದ್ದ ಶರಣ. ಬಸವಕುಮಾರ ಪಾಟೀಲರು ಪ್ರಸ್ತುತ

೪೮ನೇ ಪುಟಕ್ಕೆ ಮುಂದುವರೆದಿದೆ

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನ ವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ **"ಕಲ್ಯಾಣ ನಗರ"** ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **"ಬಸವ ಗಂಗೋತ್ರಿ"**ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ 'ಆರೋವಿಲ್ಲೆ' ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, ೧೨ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

೧. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' X ೬೦'-ವಿಸ್ತೀರ್ಣ ೨೪೦೦ ಚ.ಅಡಿಗಳು

ವರ್ಗ 'ಬಿ'-೩೦' X ೪೦'-ವಿಸ್ತೀರ್ಣ ೧೨೦೦ ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು

ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

೨. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. ೧೦೦೦-೦೦ (ಒಂದು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೩. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ ''ವಿಶ್ವಕಲ್ಯಾಣ ಮಿಷನ್, ಬೆಂಗಳೂರು'' ಹೆಸರಿಗೆ ೧೦೦-೦೦(ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸ-ಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:- ದೂರವಾಣಿ : 080 - 332 5335
332 2790

ಪೂಜ್ಯ ಶ್ರೀ ಸದ್ಗುರು ಸ್ವಾಮಿ ಅಲ್ಲಮ ಪ್ರಭು, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ ನಗರ, ಯೋಜನೆ , ಬಸವ ಮಂಟಪ
೨೦೩೫, ೨೦ನೆಯ ಮುಖ್ಯರಸ್ತೆ, ೨ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-೫೬೦ ೦೧೦

ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ (ರಿ.)ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ.ಮೀ.ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು ೨೩೧, ೨೨೭, ೨೨೮, ೨೨೯, ೨೨೬ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.

విశ్వగురు బసవణ్ణగారికి నమస్సుమాంజలి
" చై జోడించితిని ఓ కార్య తత్పురుషుడా "

– కె. బసవరాజ, ఆదోని.

1. చై జోడించితిని ఓ విశ్వగురువా ధన్యుడనై
మీ కార్యతత్పరతకు ముగ్ధుడినై
దేవపనిని పూర్తిగావించిన
ఆ దివ్య భవ్య యుగపురుషుడా, బసవ తండ్రియే!

2. మానవ మానవుని మధ్య సంబంధము
జీవి జీవులకు జీవించే తీరునకు
సస్య వర్గపు సార్థక్యానికి
సులలితమగు సహజీవన సిద్ధాంతమును
రూపించి సృష్టికర్తుని సందేశము చాటితివి.

3. స్త్రీ పురుషుడను బేధములేదు
బీద ధనికుడను భావన లేదు
కనిష్ఠుడు పైజాతివాడను అడ్డంకులు లేవు
అందరము ఆ ఒక్క తండ్రి బిడ్డలన్నావు

4. అంగానికి అష్టావరణము తొడిగించితివి
ప్రాణానికి పంచాచారపు పన్నీరును జల్లితివి
ఆత్మానికి షటస్థలపు నిత్య సత్య దర్శనమిచ్చితివి
ఈ దేహము దేవాలయమని
జనము జీవించే విధానమునకు, జగము నడిచే
బహు విశాలమైన సక్క చక్క బాటకు
కాయక, దాసోహ, ప్రసాదముల అక్షయగంగను
ప్రవహించుచూ, విశ్వమార్గమును నిర్మించితివి.

5. ఆ సృష్టికర్త లింగదేవుని అస్థిత్వము చాటించే
ఈ సృష్టి, ఈ దేహ రచనమునకు
విశేషార్థమును తెచ్చి పెట్టితివి
మాచేతులలో ఇష్టలింగమనే అద్దాన్ని తెచ్చి
విశ్వాత్మునికి కృతజ్ఞతలను తెలపడానికి
ధరించి, పూజించమని చెప్పితివి.

6. ఏమి సాధనమయ్య మీది
అర్థం తెలియని ఆ కఠిన మనుషులమధ్య
మనకు ఇప్పటికీ సాధ్యము కావుటలేదు
మీ అడుగు జాడలను అనుసరించడానికి !
మీ పెద్ద పెద్ద సాధనమునకు
మా చిన్న చిన్న అడుగులను
మనవాళ్ళ అడ్డంకుల మధ్య
మీ విశ్వమార్గమునందు నడవడానికి
ఇప్పుడిప్పుడు ప్రయత్నించే ఈ
పామరులకు చేయూతనిచ్చుచూ
"పోదాం ముందు" కని నడిపించు రా తండ్రి.

7. దయపాలించు గురువా, హే విశ్వబంధూ
ఆ ఒక్క దేవునియందు అఖండ భక్తి విశ్వాసములను
సత్యాన్నే అర్థం చేసుకొనె చిన్మయ జ్ఞానమును!
ధీరత్వమును – ఎన్ని అడ్డంకులు వచ్చినా
పట్టుదల (ఛలము) – మీ సందేశాన్ని చాటడానికి
వీటన్నిటితో మా బ్రతుకు వెలిగి సార్థకం పొందాలని,
మనకు ప్రసాదించు విశ్వగురువా, బసవ తండ్రియే!

ಧರ್ಮದ ಕಟ್ಟಳೆ ಹೆಚ್ಚೋ ? ಮಾನವೀಯತೆಯೊ ?

ಅವಿವಾಹಿತರ ಮಕ್ಕಳಿಗೆ ದೀಕ್ಷೆ ಇಲ್ಲ : ಕ್ರೈಸ್ತ ಪಾದ್ರಿ

ಲಂಡನ್. ಏ-೨೮-ಅವಿವಾಹಿತರಿಗೆ ಜನಿಸಿದ ಮಕ್ಕಳಿಗೆ ಧರ್ಮ ದೀಕ್ಷೆ ನೀಡುವುದಿಲ್ಲ ಎಂದು ಇಂಗ್ಲೆಂಡ್ ಚರ್ಚ್‌ನ ಪಾದ್ರಿ ಡೋನಾಲ್ಡ್ ಅಲಿಸ್ಟರ್ ಅವಿವಾಹಿತ ಜೋಡಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ವಿವಾಹದ ನಂತರವೇ ಮಕ್ಕಳು ಜನಿಸಬೇಕು ಎಂಬ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಅಲಿಸ್ಟರ್ ಸ್ಪಷ್ಟಪಡಿಸಿದ್ದಾರೆ. 'ವಿವಾಹ ಪೂರ್ವ ಮಗುವಿಗೆ ಜನ್ಮ ನೀಡುವುದು ಸರ್ವಥಾ ಸರಿಯಲ್ಲ. ಅದನ್ನು ನಾವು ಈ ತನಕ ಊಹಿಸಿಯೂ ಇಲ್ಲ. ಹೀಗಾಗಿ ಅಂತಹ ಮಕ್ಕಳಿಗೆ ಧರ್ಮದೀಕ್ಷೆ ನೀಡಲಾಗುವುದಿಲ್ಲ' ವಂದು ಡೈಲಿ ಮೇಲ್ ಪತ್ರಿಕೆ ವರದಿ ಮಾಡಿದೆ.

(ವಿಜಯ ಕರ್ನಾಟಕ, ದಿ.೨೯-೪-೨೦೦೦)

ಇಂಥದೊಂದು ವಿಚಾರವು ಪತ್ರಿಕೆಯಲ್ಲಿ ಪ್ರಕಟವಾಯಿತು. ಈ ವಿಚಾರವನ್ನು ಮಾನವೀಯತೆಯ ಹಿನ್ನಲೆಯಲ್ಲಿ ಮತ್ತು ಮಾನವತಾವಾದಿ ಬಸವಣ್ಣನವರ ವಿಚಾರಧಾರೆಯ ಹಿನ್ನೆಲೆಯಲ್ಲಿ ಚಿಂತನೆಮಾಡತೊಡಗಿದೆ. ಪ್ರವಾದಿ ಧರ್ಮ-ಪೂಜಾರಿ ಧರ್ಮಗಳ ಅಂತರವನ್ನು ಕುರಿತು ಆಲೋಚಿಸಿದೆ. ಏಸುಕ್ರಿಸ್ತನು ಹೀಗೆ ಇಂಗ್ಲೆಂಡ್ ಚರ್ಚ್‌ನ ಪಾದ್ರಿ ಡೋನಾಲ್ಡ್ ಅಲಿಸ್ಟರನಂತೆ ಹೇಳಬಹುದೆ ? ಮಾನವತಾವಾದದ ಪ್ರತಿನಿಧಿ ಬಸವಣ್ಣನವರು ಹೀಗೆ ಹೇಳಬಹುದೆ ?

ದೃಷ್ಟಿಕೋನಗಳಲ್ಲಿ ವ್ಯತ್ಯಾಸ

ಸಾಮಾನ್ಯವಾಗಿ ಸಾಧಕ ಜೀವಿಗಳಲ್ಲಿ ಪ್ರಾರಂಭದ ದಿನಗಳಲ್ಲಿ ಪಾಪಿ-ಪತಿತರ ಬಗ್ಗೆ ತೀವ್ರವಾದ ತಿರಸ್ಕಾರ, ಜಿಗುಪ್ಸೆ ತುಂಬಿರುತ್ತದೆ. ಆ ಪಾಪಿ-ಪತಿತರ ಜೊತೆ ಮಾತನಾಡುವುದೇ ಪಾಪಮಯ ಎಂಬ ಭಾವವು ತುಂಬಿರುತ್ತದೆ. ಸಾಮಾನ್ಯವಾಗಿ ಬಹುಪಾಲು ಪುರೋಹಿತ ವರ್ಗದವರು ತಾವು ಅಪ್ಪಟ ಸಚ್ಚಾರಿತ್ರ್ಯವಂತರು ಆಗಿರದಿದ್ದರೂ ಬಹಿರಂಗದಲ್ಲಿ ಬಹಳ ಮಡಿವಂತರಂತೆ ತೋರಿಸಿಕೊಳ್ಳುತ್ತ ಪಾಪಿ ಪತಿತರನ್ನು ವೇಶ್ಯೆಯರನ್ನು ತೀವ್ರ ತಿರಸ್ಕಾರದಿಂದ ನೋಡುತ್ತಾರೆ. ಸಂತರು, ಶರಣರು ತಾವು ಸಚ್ಚಾರಿತ್ರ್ಯವಂತರಾಗಿ ಆರಂಭದ ದಿನಗಳಲ್ಲಿ ಪಾಪಿ-ಪತಿತರ ಬಗ್ಗೆ ಹೇಯಭಾವನೆ ಹೊಂದಿರುತ್ತಾರೆ. ಅವರ ಬಗ್ಗೆ ಚಿಂತನೆ ಮಾಡುವುದು ಸಹ ಪಾಪ ಸಂಗ್ರಹಕ್ಕೆ ಕಾರಣವಾಗುತ್ತದೆ ಎಂದು ಭಾವಿಸುತ್ತಾರೆ. ಆದರೆ ಅದೇ ಶರಣ ಸಂತರಲ್ಲಿ ಹೃದಯ ವೈಶಾಲ್ಯತೆ, ಸಮಾಜ ಸುಧಾರಕರ ಮನೋಭಾವ ಬಲಿತಾಗ ತಾವು ಸ್ಪಟಿಕದಷ್ಟು ಪರಿಶುಭ್ರವಾಗಿದ್ದುಕೊಂಡೂ ಸಹ ಪಾಪಿಗಳ ಬಗ್ಗೆ ತಿರಸ್ಕಾರವನ್ನು ತಾಳುವುದಿಲ್ಲ. ಓರ್ವ ವ್ಯಕ್ತಿ ಪಾಪಿ, ಪತಿತನಾಗಲಿಕ್ಕೆ ಕಾರಣವೇನು ಎಂದು ಚಿಂತಿಸಲು ತೊಡಗುತ್ತಾರೆ.

ದೌರ್ಬಲ್ಯಕ್ಕೆ ಸ್ವೇಚ್ಛಾಚಾರಕ್ಕೆ ಬಲಿಯಾದ ತರುಣ-ತರುಣಿಯರು ವಿವಾಹಿತರಾಗದೆ ಮಕ್ಕಳನ್ನು ಹೆತ್ತರು ಎಂದು ಕೊಳ್ಳುವಾ. ಆಗ ಆ ದುರ್ಬಲ ತಾಯಿತಂದೆ ಮಾಡಿದ ತಪ್ಪಿಗೆ ನಿಷ್ಪಾಪಿಗಳಾದ ಮಕ್ಕಳು ಕಷ್ಟ ಅನುಭವಿಸುವಂತಾಗುವುದು ಸರಿಯೆ ? ಅನೈತಿಕ ಸಂಬಂಧದಿಂದ ಹುಟ್ಟಿದ ಮಕ್ಕಳು ಸಾಮಾಜಿಕವಾಗಿ ಎದುರಿಸಬೇಕಾದ ಅವಮಾನ, ತಿರಸ್ಕಾರಗಳೇ ಹೊರಲಾರದ ಹೊರೆಯಾಗಿರುವಾಗ ಮಾನವರೆಲ್ಲರಿಗೂ ಆಸರೆಯಾಗುವ ಧರ್ಮವೂ ಅವರ ಬಗ್ಗೆ ಕಠೋರ ಮನೋಭಾವ ತಾಳುವುದು ಸರಿಯೆ ? ಕ್ರೈಸ್ತರು ಧಾರ್ಮಿಕವಾಗಿ ಏಸುಕ್ರಿಸ್ತನ ಹುಟ್ಟಿನ ಬಗ್ಗೆ ಏನೇ ನಂಬಿರಲಿ, ಕನ್ಯೆ ಮೇರಿಯಲ್ಲಿ ಪವಿತ್ರಾತ್ಮದಿಂದ ಏಸುವು ಹುಟ್ಟಿದ್ದಾನೆ ಎಂದು ವಿಶ್ವಾಸವಿಡಲಿ ; ಆದರೆ ವಿಜ್ಞಾನವು ಇದನ್ನು ಒಪ್ಪದು. ಚಿನ್ಮಯ ಜ್ಞಾನಿ ಚನ್ನಬಸವಣ್ಣನ ಬಗ್ಗೆ ಇಂಥದೊಂದು ವಿಲಕ್ಷಣ ಪ್ರಸಂಗವನ್ನು ಪುರಾಣಕಾರರು

ಕಲ್ಪಿಸಿರುವರು. ಆದರೂ ನಾವಾರೂ "ಕರ್ಣದಲ್ಲಿ ಜನಿಸಿದವರುಂಟೇ ಜಗದೊಳಗೆ? ಹೊಲೆಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ" ಎಂಬ ಬಸವ ವಾಣಿಯನ್ನು ಆಧರಿಸಿ ಚನ್ನಬಸವಣ್ಣನವರ ತಂದೆ ಶಿವಸ್ವಾಮಿ ಎಂದು ಹೇಳುತ್ತೇವೆ. ಈ ಹಿನ್ನೆಲೆಯಲ್ಲಿ ಸ್ವತಃ ಕ್ರೈಸ್ತ ಧರ್ಮದ ಮೂಲಪುರುಷ, ಏಸುವೇ ಇಂಗ್ಲೆಂಡಿನ ಬಿಷಪ್ಪಿನ ದೃಷ್ಟಿಯಲ್ಲಿ ಧರ್ಮ ಬಾಹಿರರಾಗುತ್ತಾರೆ. ಇದನ್ನು ನೋಡಿದಾಗ ಧರ್ಮ ಸಂಸ್ಥೀಕರಣಗೊಂಡಾಗ (institutionalise) ಹೇಗೆ ಮಾರ್ದವತೆ, ಮಾನವೀಯತೆ ಕಳೆದುಕೊಂಡು ಕಠಿಣವಾಗುತ್ತದೆ ಎನ್ನಿಸದೆ ಇರದು. ಸ್ವತಃ ಮಾನವೀಯತೆಯ ಪ್ರತಿರೂಪವಾದ ಏಸುವೇ ಬಿಷಪ್ಪರಂತೆ ಕಠಿಣ ನಿಲುವನ್ನು ತಳೆಯಲಿಕ್ಕಿಲ್ಲ.

ಈ ದೃಷ್ಟಿಯಿಂದ ಧರ್ಮ ಗುರು ಬಸವಣ್ಣನವರು ಎಲ್ಲರನ್ನೂ ಮೀರಿಸುವ ಮಾನವತಾವಾದಿಯಾಗುತ್ತಾರೆ. ಅತ್ಯಂತ ಪ್ರಗತಿಪರರಾಗಿ ನಿಲ್ಲುತ್ತಾರೆ.

ಚನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು-
ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗ ನಾನು ಲಿಂಗದೇವ ಸಾಕ್ಷಿಯಾಗಿ. -ಬ.ವ.ದಿ. 347

ಈ ವಚನದ ಮೂಲಕ ಮಹತ್ವಪೂರ್ಣ ಸಮಸ್ಯೆಗೆ ಪರಿಹಾರ ರೂಪದ ಉತ್ತರ ನೀಡಿದ್ಧಾರೆ. ಮಾದಾರ ಚನ್ನಯನ ಮನೆಯ ದಾಸಿಯ ಮಗನು, ಡೋಹಾರ ಕಕ್ಕಯ್ಯನ ಮನೆಯ ದಾಸಿಯ ಮಗಳು ಬೆರಣಿಯನಾಯಲು ಹೋಗಿ ಸಂಗವ ಮಾಡಿದರು. ಅಂದರೆ ಅನೈತಿಕ ಸಂಗವ ಮಾಡಿದರು. ಪ್ರತಿಫಲವಾಗಿ ಒಂದು ಮಗುವು ಹುಟ್ಟಿತು. ಅದರ ಸ್ಥಾನಮಾನವೇನು ? 'ಶರಣ ಸಮಾಜದಲ್ಲಿ ಅದಕ್ಕೆ ಶಿಷ್ಟರೀತಿಯಿಂದ ಹುಟ್ಟಿದ ಮಗುವಿಗೆ ಕೊಟ್ಟಷ್ಟೇ ಸ್ಥಾನ ಲಭ್ಯವಾಗಬೇಕು. ಶ್ರೇಷ್ಠ ಕುಲದವರೂ, ಧಾರ್ಮಿಕ ವಿಧಿ-ವಿಧಾನದಿಂದ ವಿವಾಹವಾಗಿ ವಿಧ್ಯುಕ್ತವಾಗಿ ಹುಟ್ಟಿದವರೂ ಆದ ಬಸವಣ್ಣನವರಿಗೆ ಸಿಕ್ಕಿದ ಸಾಮಾಜಿಕ-ಧಾರ್ಮಿಕ ಮನ್ನಣೆಯು 'ಆ' ಮಗುವಿಗೂ ಸಿಗಬೇಕು' ಅದು ಮಾತೃಹೃದಯಿ ಬಸವಣ್ಣನವರ ಆಶಯ.

-ಮಾತಾಜಿ

೪೨ನೇ ಪುಟದಿಂದ ಬಂದದ್ದು

ಹುದ್ದೆಯನ್ನು ಬೇರೆಯವರಿಗೆ ವಹಿಸಿಕೊಡಬೇಕೆಂದು ಕೋರಿ ರಾಜಿನಾಮೆ ಸಲ್ಲಿಸಿದ್ದರಿಂದ ತೆರವಾಗಿದ್ದ ಹುದ್ದೆಗೆ ಗಣನಾಯಕರಾದ ಶರಣ. ವೀರಣ್ಣ ಕೊರ್ಲ್ಹಳ್ಳಿಯವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿ ಅಭಿನಂದಿಸಲಾಯಿತು. ಲಿಂಗಾಯತ ಧರ್ಮ ಮಹಾಸಭಾದ ಬೆಂಗಳೂರು ಜಿಲ್ಲಾ ಘಟಕದ ಅಧ್ಯಕ್ಷರನ್ನಾಗಿ ಶರಣ. ಹೆಚ್.ಎ.ಶರಣಪ್ಪ, ದಾವಣಗೆರೆ ಜಿಲ್ಲಾ ಘಟಕದ ಅಧ್ಯಕ್ಷರನ್ನಾಗಿ ಶರಣ. ಶಂಭುಲಿಂಗಪ್ಪ ನೇಸ್ವಿ, ಕೊಪ್ಪಳ ಜಿಲ್ಲಾ ಘಟಕದ ಗೌರವಾಧ್ಯಕ್ಷರನ್ನಾಗಿ ಶರಣ. ವೀರಭದ್ರಪ್ಪ ಕೊರ್ಲ್ಹಳ್ಳಿಯವರನ್ನು, ಬೀದರ ಜಿಲ್ಲೆ ಲಿಂಗಾಯತ ಜನ ಜಾಗೃತಿ ಪ್ರಚಾರ ಸಮಿತಿಯ ಅಧ್ಯಕ್ಷರನ್ನಾಗಿ ಶಿವರಾಜ ಪಾಟೀಲ, ಅತಿವಾಳರನ್ನು, ಪ್ರಧಾನ ಸಂಚಾಲಕರನ್ನಾಗಿ ರಾಮಲಿಂಗಪ್ಪ ದೇವಣಿಯವರನ್ನು ನೇಮಕ ಮಾಡಲಾಯಿತು. ತರಬೇತಿ ಕಮ್ಮಟವು ಯಶಸ್ವಿಯಾಗಿ ನಡೆದು ದಿ.೨೧ರಂದು ಮುಕ್ತಾಯವಾದಾಗ ಶಿಬಿರಾರ್ಥಿಗಳಿಗೆಲ್ಲ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

-ವರದಿ : ರಮೇಶ್ ಲಿಂಗಾಯತ



ಲಿಂಗಾಯತ ಜನ ಜಾಗರಣ ಯಾತ್ರೆಯ ಪ್ರಾರಂಭೋತ್ಸವ ಪೂಜ್ಯ ಮಾತಾಜಿಯವರಿಂದ.
ಯಾತ್ರೆಯ ಪ್ರಧಾನ ಸಂಚಾಲಕರಾದ ಶರಣ ಶ್ರೀಕಂತಕುಮಾರ್ ಅವರಿಗೆ ಧ್ವಜ ನೀಡಿಕೆ



ಲಿಂಗಾಯತ ಧರ್ಮ ಮಹಾಸಭಾದ ಬೆಂಗಳೂರು ಘಟಕದ ಅಧ್ಯಕ್ಷ
ಶರಣ. ಹೆಚ್. ಎ.ಶರಣಪ್ಪ ಅವರಿಂದ ಧರ್ಮಗುರು ಪೂಜೆ.
ಧ್ವಜ ಹಿಡಿದವರು ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷ ಶರಣ ಎನ್.ಪುಟ್ಟರುದ್ರ

ಕಲ್ಯಾಣ ಕಿರಣ CPMG/KA/BGW-50 ಜುಲೈ ೨೦೦೦
R.No. 19988/70



ಬೆಂಗಳೂರಿನಿಂದ ಜನ ಜಾಗರಣ ಯಾತ್ರೆಯ ಪ್ರಾರಂಭ : ಪೂಜ್ಯ ಶ್ರೀ ಮಾತೆ ಮಂಗಳಾದೇವಿಯವರ ನೇತೃತ್ವದಲ್ಲಿ,
ಪೂಜ್ಯ ಮಾತಾಜಿಯವರಿಂದ ಆಶೀರ್ವಾದ